ಇದಕ್ಕೆ ತಗಲುವ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 4202-04-800-1-07-139 (ಯೋಜನೆ) ಪ್ರಧಾನ ಕಾಮಗಾರಿಗಳು ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ಟಿಪ್ಪಣಿ ಸಂಖ್ಯೆ: ಶಿಇ 1330 ಐಎಫ್(ಬಿ&ಎ) 2010, ದಿನಾಂಕ 24-07-2010 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ: 10-07-1996ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2228

ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಸಹಕಾರ ಸಚಿವಾಲಯ

ವಿಷಯ : ಹಾಸನದ ಕೋಮಾರ್ಕ್ ಸಂಸ್ಥೆಯ ಪುನಃಶ್ಚೇತನಕ್ಕೆ ಮೃದುಸಾಲ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ: ಸಇ 188 ಸಂಮಾಸ 2009 ದಿ: 19-09-2008.

(2) ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಇವರ ಪತ್ರ ಸಂಖ್ಯೆ: ಇತರೆ/858/2008-09 ದಿನಾಂಕ: 7-6-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ದಿನಾಂಕ: 19-9-2008 ರ ಪತ್ರದಲ್ಲಿ ಹಾಸನದ ಕೋಮಾರ್ಕ್ ಸಂಸ್ಥೆಯ ಪುನಃಶ್ಚೇತನಕ್ಕೆ ರೂ. 5.00 ಕೋಟಿಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಈ ಹಂತದಲ್ಲಿ ಸಂಸ್ಥೆಯು ಮೊದಲು ಬ್ಯಾಂಕುಗಳ ಏಕಕಾಲಿಕ ತೀರುವಳಿ ಮತ್ತು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್, ಕೃಷಿ ಮಾರಾಟ ಮಂಡಳಿ ಇತ್ಯಾದಿಗಳಿಂದ ಪಡೆದಿರುವ ಸಾಲಗಳ ತೀರುವಳಿಗೆ ಉಪಯೋಗಿಸಿಕೊಳ್ಳುವುದು. ತದನಂತರ ಉಳಿದ ಹಣವನ್ನು ಸಂಸ್ಥೆಯು ತನ್ನ ಕಾರ್ಯ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಲು ಸೂಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ದಿನಾಂಕ: 7-6-2010 ರ ಪತ್ರದಲ್ಲಿ, ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಇವರು ಕೋಮಾರ್ಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 19-5-2010 ರ ಪತ್ರದಲ್ಲಿ, ಸಂಸ್ಥೆಗೆ ರೂ. 10.00 ಕೋಟಿ ಮೃದು ಸಾಲ ಮಂಜೂರು ಮಾಡಿದ್ದು, ಈ ಹಣದ ಬಗ್ಗೆ ಕೆಲವೊಂದು ಷರತ್ತು ನಿಬಂಧನೆಗಳನ್ನು ವಿಧಿಸಿದ್ದು, ಅದರಂತೆ ಜಿಲ್ಲಾಧಿಕಾರಿಗಳು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಬ್ಯಾಂಕ್, ಎಸ್ಕ್ರೋ ಖಾತೆ ತೆರೆದು ಸಂಸ್ಥೆಯ ವಹಿವಾಟಿ ನಡೆಸುತ್ತಿದ್ದಾರೆ.

ಸಂಸ್ಥೆಗೆ ಮಂಜೂರಾದ ರೂ. 10.00 ಕೋಟಿಯಲ್ಲಿ ರೂ. 5.00 ಹಣವು ಈಗಾಗಲೇ ಬಿಡುಗಡೆಯಾಗಿದ್ದು, ಈ ಹಣದಲ್ಲಿ ಸಂಸ್ಥೆಯ ಬ್ಯಾಂಕ್ ಮತ್ತು ಇತರೆ ಹಣಕಾಸು ಸಂಸ್ಥೆಗಳಿಗೆ ಪಾವತಿಸಲು ಬಾಕಿ ಇದ್ದ ಸಾಲವನ್ನು ಏಕಕಾಲಿಕ ಸಾಲ ತೀರುವಳಿ ಒಡಂಬಡಿಕೆಯಂತೆ ಸರ್ಕಾರದ ಮಟ್ಟದಲ್ಲಿ ಪಾವತಿಸಲಾಗಿದೆ. ಉಳಿದ ರೂ. 1.51 ಕೋಟಿ ಹಣವನ್ನು ಸಂಸ್ಥೆಯ ಬ್ಯಾಂಕ್ ಎಸ್ಕ್ರೋ ಖಾತೆಗೆ ಜಮಾ ಮಾಡಲಾಗಿದೆ. ಈ ಖಾತೆಗೆ ಜಮಾಗೊಂಡ

ಹಣದಲ್ಲಿ ರೂ. 20.55 ಲಕ್ಷಗಳನ್ನು ಸಂಸ್ಥೆ ಹಿತದೃಷ್ಟಿಯಿಂದ ಮತ್ತು ಸಂಸ್ಥೆಯ ವ್ಯವಹಾರ ಚಟುವಟಿಕೆಗೆ ಅನುಕೂಲವಾಗುವಂತೆ ದಿನಾಂಕ: 18-11-2008 ಸಭೆ ನಡೆಸಿ, ಸಂಸ್ಥೆಯು ಪಾವತಿಸಲು ಬಾಕಿ ಉಳಿಸಿಕೊಂಡಿದ್ದ ಸಿಬ್ಬಂದಿ ವೇತನ, ಗ್ರಾಚ್ಯುಟಿ, ಭವಿಷ್ಯ ನಿಧಿ ಕಛೇರಿ ಬಾಡಿಗೆ ಇತ್ಯಾದಿ ವೆಚ್ಚಗಳನ್ನು ಪಾವತಿಸಿ, ವ್ಯಾಪಾರ ಚಟುವಟಿಕೆ ಪ್ರಾರಂಭಿಸಲು ಬಿಡುಗಡೆ ಮಾಡಲಾಗಿದೆ. ಅಲ್ಲದೆ, ದಿನಾಂಕ 15-1-2009 ರಂದು ಸಭೆ ನಡೆಸಿ, ರೂ. 20.00 ಲಕ್ಷಗಳನ್ನು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದು ವ್ಯಾಪಾರ ಚಟುವಟಿಕೆಗಳಿಗೆ ಬಿಡುಗಡೆ ಮಾಡಿದ್ದರೂ ಸಂಸ್ಥೆಯು ಈ ಹಣವನ್ನು ಸರಿಯಾಗಿ ಬಳಸಿಕೊಂಡಿರುವುದಿಲ್ಲ. ಇದರಿಂದ, ಯಾವುದೇ ಹಣವನ್ನು ಬಿಡುಗಡೆ ಮಾಡಿಸಿರುವುದಿಲ್ಲ ಸಂಸ್ಥೆಯು ಆರ್ಥಿಕ ಪರಿಸ್ಥಿತಿ ಸದೃಢವಾಗಿಲ್ಲದ ಕಾರಣ ಆಡಳಿತ ವೆಚ್ಚಗಳು ಹಾಗೂ ಇತರೆ ಶಾಸನಬದ್ಧ ಬಾಕಿ ಪಾವತಿಗಳನ್ನು ಸರ್ಕಾರದಿಂದ ಬಿಡುಗಡೆಯಾದ ಹಣದಿಂದಲೇ ಪಾವತಿಸುವಂತೆ ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು ಮನವಿ ಸಲ್ಲಿಸಿದ್ದು, ಸರ್ಕಾರದ ಆದೇಶವಿಲ್ಲದೇ ಹಣ ಬಿಡುಗಡೆ ಸಾಧ್ಯವಿಲ್ಲವೆಂದು ತಿಳಿಸಿರುವುದಾಗಿ ವರದಿ ಮಾಡಿರುತ್ತಾರೆ. ಸಂಸ್ಥೆಯ ಖಾತೆಯಲ್ಲಿದ್ದ ರೂ. 1.00 ಕೋಟಿಯನ್ನು ಕಾರ್ಪೊರೇಷನ್ ಬ್ಯಾಂಕ್ ಹಾಸನ ಶಾಖೆಯಲ್ಲಿ ರೂ. 25.00 ಲಕ್ಷ ಹಣವನ್ನು ಎಸ್.ಬಿ.ಎಂ. ಹಾಸನ ಶಾಖೆಯಲ್ಲಿ ಠೇವಣಿ ಮಾಡಿರುತ್ತಾರೆ.

ದಿನಾಂಕ 5-5-2010 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೋಮಾರ್ಕ್ ಸಂಸ್ಥೆಯ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿ, ಬಾಕಿ ಇರುವ ರೂ. 5.00 ಕೋಟಿ ಹಣದಲ್ಲಿ ರೂ. 3.28 ಕೋಟಿ ಹಣವನ್ನು ವಾಣಿಜ್ಯ ತೆರಿಗೆ ಇಲಾಖೆಗೆ ಹೊಂದಾಣಿಕೆ ಮಾಡಿಕೊಂಡು ಉಳಿದ ಹಣವನ್ನು ಸಂಸ್ಥೆಯ ವಹಿವಾಟಿಗೆ ಬಿಡುಗಡೆ ಮಾಡಲು ತಿಳಿಸಲಾಗಿದೆ. ಸಂಸ್ಥೆಯು ವಾಣಿಜ್ಯ ತೆರಿಗೆ ಇಲಾಖೆಗೆ ಬಾಕಿ ಇರುವ ಬಗ್ಗೆ ಹಾಸನದ ಪ್ರಥಮ ದರ್ಜೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ: 122 ಮತ್ತು 123/2007 ರಂತೆ ಮೊಕದ್ದಮೆ ಹೂಡಿದ್ದು, ಪ್ರಕರಣವು ಬಾಕಿ ಇರುತ್ತದೆ. ದಿನಾಂಕ: 26-3-2010 ರಿಂದ ಕರ್ನಾಟಕ ಮಾರಾಟ ಕಾಯ್ದೆ 1957 ರ ಕಲಂ 14 ರಡಿ ಅಟಾಚ್‌ಮೆಂಟ್ ನೋಟೀಸು ಜಾರಿಮಾಡಿ ಬ್ಯಾಂಕಿಗೂ ಸಂಸ್ಥೆಯೊಂದಿಗೆ ಯಾವುದೇ ವಹಿವಾಟು ಮಾಡದಂತೆ ನಿರ್ಬಂಧಿಸಲಾಗಿದೆ. ವಾಣಿಜ್ಯ ತೆರಿಗೆ ಉಪ ಆಯುಕ್ತರು ತಮ್ಮ ಆದೇಶವನ್ನು ಹಿಂಪಡೆಯದ ಹೊರತು ಯಾವುದೇ ವ್ಯವಹಾರ ನಡೆಸಲು ಅವಕಾಶ ಇರುವುದಿಲ್ಲವೆಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 4-5-2010 ರ ಪತ್ರದಲ್ಲಿ ತಿಳಿಸಿರುವುದಾಗಿ ವರದಿ ಮಾಡುತ್ತಾ ಕೋಮಾರ್ಕ್ ಸಂಸ್ಥೆಯ ಸಂಪೂರ್ಣ ಮಾಹಿತಿಗಳನ್ನು ಪರಿಶೀಲಿಸಲಾಗಿದ್ದು, ಸಂಸ್ಥೆಯ ಬಗ್ಗೆ ಮಾಹಿತಿಗಳನ್ನು ಈಗಾಗಲೇ ದಿನಾಂಕ: 21-2-2009 ರಲ್ಲಿ ಸಲ್ಲಿಸಲಾಗಿದ್ದು, ಇದನ್ನು ಮತ್ತೊಮ್ಮೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಹಾಸನದ ಕೋಮಾರ್ಕ್ ಸಂಸ್ಥೆಯ ಪುನಃಶ್ಚೇತನಕ್ಕೆ ಸಾದಿಲ್ವಾರು ನಿಧಿಯಿಂದ ರೂ. 4.00 ಕೋಟಿಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 52 ಸಂಮಾಸ 2010, ಬೆಂಗಳೂರು, ದಿನಾಂಕ 13-8-2010

ಸರ್ಕಾರಿ ಆದೇಶ ಸಂಖ್ಯೆ: ಸಇ 52 ಸಂಮಾಸ 2010, ದಿನಾಂಕ: 13-8-2010 ರ ಪ್ರಸ್ತಾವನೆಯ ಕಂಡಿಕೆ-4 ರಲ್ಲಿ ಸೂಚಿಸಿರುವಂತೆ ವಾಣಿಜ್ಯ ತೆರಿಗೆ ಇಲಾಖೆಗೆ ಪಾವತಿಸಬೇಕಾದ ಬಾಕಿ ರೂ. 3.28 (ರೂಪಾಯಿ ಮೂರು ಲಕ್ಷದ ಇಪ್ಪತ್ತೆಂಟು ಸಾವಿರಗಳು ಮಾತ್ರ) ಕೋಟಿಗಳನ್ನು ಲೆಕ್ಕಶೀರ್ಷಿಕೆ 6425-00-108-3-52-394 ರ ವೆಚ್ಚ ತೋರಿಸಿ ಲೆಕ್ಕ ಶೀರ್ಷಿಕೆ 0040-00-102-0-01 Sales Tax (ಮಾರಾಟ ತೆರಿಗೆ) ಇದಕ್ಕೆ ಜಮಾ ಆಗುವಂತೆ ಹಾಗೂ 2010-11ನೇ ಸಾಲಿನಲ್ಲಿ ಪುಸ್ತಕ ಹೊಂದಾಣಿಕೆ ಮಾಡಿಕೊಳ್ಳಲು ಮಹಾಲೇಖಪಾಲರಿಗೆ ಸೂಚಿಸಲಾಗಿದೆ.

ಸರ್ಕಾರದಿಂದ ಬಿಡುಗಡೆಯಾಗಿರುವ ರೂ. 4.00 ಕೋಟಿಗಳಲ್ಲಿ (ರೂ. ನಾಲ್ಕು ಕೋಟಿಗಳು ಮಾತ್ರ) ಉಳಿದ ರೂ. 0.72 ಕೋಟಿಯನ್ನು ಮಾತ್ರ ನಗದು ರೂಪದಲ್ಲಿ ಕೋಮಾರ್ಕ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 266 ವೆಚ್ಚ-2/10 ದಿನಾಂಕ: 2-8-2010 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2229

ನಂಜುಂಡಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕಾರ್ಮಿಕ ಸಚಿವಾಲಯ

ವಿಷಯ : ನೂತನವಾಗಿ ಪ್ರಾರಂಭವಾಗಿರುವ ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ತೆರೆಯುವ ಹಾಗೂ ಹುದ್ದೆಗಳ ಸೃಜನೆ ಬಗ್ಗೆ - ಆದೇಶ.

ಓದಲಾಗಿದೆ :
1. ವಿಶೇಷ ಅಧಿಕಾರಿಗಳು, ಯಾದಗಿರಿ ಜಿಲ್ಲೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ವಿಯಾಜಿ/ಸಿಬ್ಬಂದಿ/01/2009-10 ದಿನಾಂಕ 28/09/2009
2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂ. ಉತನಿ/ಉದ್ಯೋಗ/ಆಡಳಿತ-1/ವಿವ-48/2009-10 ದಿನಾಂಕ 02/11/2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ವಿಶೇಷ ಅಧಿಕಾರಿಗಳು, ಯಾದಗಿರಿ ಜಿಲ್ಲೆ ಇವರ ಪತ್ರದಲ್ಲಿ ದಿನಾಂಕ: 27/08/2009ರಂದು ಗುಲಬರ್ಗಾದಲ್ಲಿ ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಯಾದಗಿರಿಯನ್ನು ಹೊಸ ಜಿಲ್ಲೆಯನ್ನಾಗಿ ರಚಿಸಲು ನಿರ್ಧರಿಸಲಾಗಿದ್ದು ಅದರಂತೆ ಉದ್ಯೋಗ ಮತ್ತು ತರಬೇತಿ ಇಲಾಖೆಯ ಅಡಿಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ತೆರೆಯಲು ಹಾಗೂ ಹುದ್ದೆಗಳನ್ನು ಸೃಜಿಸುವಂತೆ ತಿಳಿಸಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸುವಂತೆ ಕೋರಿದ್ದಾರೆ.

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ವೇತನ ಶ್ರೇಣಿ ರೂ.	ಹುದ್ದೆಗಳ ಸಂಖ್ಯೆ
1	ಉದ್ಯೋಗಾಧಿಕಾರಿ	10800 – 20025	1
2	ಸಹಾಯಕ ಉದ್ಯೋಗಾಧಿಕಾರಿ	8000 – 14800	1
3	ಪ್ರಥಮ ದರ್ಜೆ ಸಹಾಯಕರು	7275 – 13350	1
4	ದ್ವಿತೀಯ ದರ್ಜೆ ಸಹಾಯಕರು	5800 -- 10500	1
5	ಬೆರಳಚ್ಚುಗಾರರು	5800 – 10500	1
6	ಗ್ರೂಪ್ – ಡಿ	4800 – 7275	2
	ಒಟ್ಟು		7

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 111 ಇಟಿಎಂ 2009, ಬೆಂಗಳೂರು, ದಿನಾಂಕ: 20–08–2010

ನೂತನವಾಗಿ ಪ್ರಾರಂಭವಾಗಿರುವ ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ತೆರೆಯಲು ಹಾಗೂ ಈ ಕೇಂದ್ರಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಹಾಗೂ ಭರ್ತಿ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ
1	ಉದ್ಯೋಗಾಧಿಕಾರಿ	01
2	ಪ್ರಥಮ ದರ್ಜೆ ಸಹಾಯಕರು	01
3	ಬೆರಳಚ್ಚುಗಾರರು	01
4	ಗ್ರೂಪ್–ಡಿ	01
	ಒಟ್ಟು	04

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 440 ವೆಚ್ಚ–9/2010 ದಿನಾಂಕ: 04/08/2010 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಉದ್ಯೋಗ ಮತ್ತು ತರಬೇತಿ)

ಪಿ.ಆರ್. 2230

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : 'ಇ' ಆಡಳಿತದಲ್ಲಿ ಐ.ಟಿ. ಕಾನೂನನ್ನು ಪರಿಚಯಿಸುವ ಬಗ್ಗೆ.

ಓದಲಾಗಿದೆ : 1. ಆದೇಶ ಸಂಖ್ಯೆ ಕಸಂವಾಪ್ರ 97 ಕಸನಿ 2009, ದಿನಾಂಕ: 26/08/2009.

2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಪತ್ರ ಸಂಖ್ಯೆ: ಕಸನಿ:/14/ಕಅ/2010–11, ದಿನಾಂಕ 17.05.2010

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 26–08–2009 ರ ಆದೇಶದಲ್ಲಿ 'ಇ' ಆಡಳಿತದಲ್ಲಿ ಐ.ಟಿ. ಕಾನೂನನ್ನು ಪರಿಚಯಿಸುವ ಬಗ್ಗೆ ಶಿವಮೊಗ್ಗ ಗ್ರಾಮೀಣ ಪಂಚಾಯಿತಿ ನೌಕರರಿಗೆ ತರಬೇತಿ ಏರ್ಪಡಿಸಲು ರೂ. 23.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಈ ಉದ್ದೇಶಕ್ಕಾಗಿ 2010 ರ ಮಾರ್ಚ್ ತಿಂಗಳಲ್ಲಿ ಖಜಾನೆಗೆ ಬಿಲ್ಲನ್ನು ಸಲ್ಲಿಸಿದಾಗ ಹಣದ ಲಭ್ಯತೆ ಇಲ್ಲದಿರುವುದರಿಂದ ಬಿಲ್ಲನ್ನು ಹಿಂದಿರುಗಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ ಕಸಂವಾಪ್ರ 50 ಸ್ವೀಮರ 2010ರ ಕ್ರಿಯಾಯೋಜನೆಯ ಅನುಮೋದನೆಯಂತೆ ಕನ್ನಡದಲ್ಲಿ 'ಇ' ಆಡಳಿತವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಗಣಕ ಪರಿಷತ್ತು, ಕುವೆಂಪು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಏರ್ಪಡಿಸಲು ರೂ. 25.00 ಲಕ್ಷಗಳ ಹಂಚಿಕೆಯನ್ನು ಲೆಕ್ಕಶೀರ್ಷಿಕೆ 2205–00–102–0–77–101 (ಯೋಜನೆ) ಸಾಕ್ಷರತೆ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನದಡಿ ಹಂಚಿಕೆ ಮಾಡಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮವನ್ನು 2010–11ನೇ ಸಾಲಿನಲ್ಲಿ ಏರ್ಪಡಿಸಲು ಅನುಕೂಲವಾಗುವಂತೆ ರೂ. 23.00 ಲಕ್ಷಗಳನ್ನು ರಿಜಿಸ್ಟ್ರಾರ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ಶಿವಮೊಗ್ಗ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮೇಲೆ (2) ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 72 ಕಸನಿ 2010, ಬೆಂಗಳೂರು, ದಿನಾಂಕ: 12–08–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 'ಇ' ಆಡಳಿತದಲ್ಲಿ ಐ.ಟಿ. ಕಾನೂನು ಪರಿಚಯಿಸುವ ಬಗ್ಗೆ ಶಿವಮೊಗ್ಗ ಗ್ರಾಮೀಣ ಪಂಚಾಯಿತಿ ನೌಕರರಿಗೆ ತರಬೇತಿ ಏರ್ಪಡಿಸಲು ರೂ. 23.00 ಲಕ್ಷ (ರೂಪಾಯಿ ಇಪ್ಪತ್ತಮೂರು ಲಕ್ಷಗಳು ಮಾತ್ರ) ಗಳನ್ನು ಈ ಕೆಳಕಂಡ

ಷರತ್ತಿಗೊಳಪಟ್ಟು ರಿಜಿಸ್ಟ್ರಾರ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸರ್ಕಾರದ ಮಂಜೂರಾತಿ ನೀಡಿದೆ.

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000 ನ್ನು ಅನುಸರಿಸಿ ಕಾರ್ಯಕ್ರಮ ಕೈಗೊಳ್ಳುವುದು.

2) ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸುವುದು.

ಈ ವೆಚ್ಚವನ್ನು 2010-11ನೇ ಸಾಲಿನ ಲೆಕ್ಕಶೀರ್ಷಿಕೆ 2205-00-102-0-77-101 (ಯೋಜನೆ) ಸಾಕ್ಷರತೆ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನದಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 28.07.2010ರ ಟಿಪ್ಪಣಿ ಸಂಖ್ಯೆ: ಶಿಇ 1463 ಐಎಫ್(ಬಿಎ) 2010 ರಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ.ಆರ್. 2231

ಇಂಧನ ಸಚಿವಾಲಯ

ವಿಷಯ : ಶ್ರೀ ಕೆ. ಚಂದ್ರಶೇಖರ್ ರೆಡ್ಡಿ, ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ದಾಖಲಾದ ಲೋಕಾಯುಕ್ತರವರ ಟ್ರ್ಯಾಪ್ ಪ್ರಕರಣ ಸಂಖ್ಯೆ: 6/2006ಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿದ ಸಂಭಾವನೆ ಪಾವತಿ ಕುರಿತು.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ ಇಎನ್ 52 ಇಬಿಎಸ್ 2006, ದಿನಾಂಕ: 27.11.2008.

2. ಶ್ರೀ ಡಿ.ವಿ. ಶೇಟ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು, ಧಾರವಾಡ ರವರ ದಿನಾಂಕ 27.04.2010 ರ ವಿಚಾರಣಾ ವರದಿ.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 27-11-2008 ರ ಸರ್ಕಾರದ ಆದೇಶ ಸಂಖ್ಯೆ: ಇಎನ್ 52 ಇಬಿಎಸ್ 2006 ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು 1957 ರ ಅಡಿಯಲ್ಲಿ ಶ್ರೀ ಕೆ. ಚಂದ್ರಶೇಖರ್ ರೆಡ್ಡಿ, ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಶ್ರೀ ಡಿ.ವಿ.ಶೇಟ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಧಾರವಾಡ ಇವರನ್ನು ವಿಚಾರಣಾ ಅಧಿಕಾರಿಯಾಗಿ ನೇಮಿಸಲಾಗಿತ್ತು.

ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ: 27.04.2010 ರ ಪ್ರಕಾರ ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ಸದರಿಯವರಿಗೆ ವಿಚಾರಣಾ ಅಧಿಕಾರಿಯಾಗಿ ವಿಚಾರಣೆ ನಡೆಸಿದ್ದಕ್ಕೆ ಸಂಭಾವನೆ ಹಾಗೂ ವಾಹನ ಭತ್ಯೆಗಳನ್ನು ಮಂಜೂರು ಮಾಡಲು ನಿರ್ಧರಿಸಿ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 43 ಇಬಿಎಸ್ 2009, ಬೆಂಗಳೂರು, ದಿನಾಂಕ: 17-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ವಿ. ಶೇಟ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು, ಧಾರವಾಡ ಇವರು ಶ್ರೀ ಕೆ. ಚಂದ್ರಶೇಖರ್ ರೆಡ್ಡಿ, ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ದಾಖಲಾದ ಲೋಕಾಯುಕ್ತರವರ ಟ್ರ್ಯಾಪ್ ಪ್ರಕರಣ ಸಂಖ್ಯೆ: 6/2006ಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007, ದಿನಾಂಕ: 11.04.2008 ರಲ್ಲಿ ನಿಗದಿಪಡಿಸಿರುವಂತೆ ರೂ. 8000/-ಗಳ ಗೌರವಧನ ಹಾಗೂ ರೂ. 1500/-ಗಳ ವಾಹನ ಭತ್ಯೆಯನ್ನು ಹೀಗೆ ಒಟ್ಟು ರೂ. 9500/- (ಒಂಭತ್ತು ಸಾವಿರದ ಐದುನೂರು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2010, ದಿನಾಂಕ: 30.04.2010 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2232

ಸುಜಾತಮ್ಮ
ಪೀಠಾಧಿಕಾರಿ,
ಇಂಧನ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಒಳಾಡಳಿತ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಪಿಸಿಎಎಸ್), ಇವರ ವಾಹನ ಸಂಖ್ಯೆ : ಕೆಎ-01 ಜಿ – 4300 ವಾಹನಕ್ಕೆ ಸರ್ವಿಸಿಂಗ್ ಮಾಡಿದ್ದಕ್ಕೆ ಹಣ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ಸರ್ಕಾರದ ಕಾರ್ಯದರ್ಶಿ (ಪಿಸಿಎಎಸ್)ಯವರ ಹಿರಿಯ ಆಪ್ತ ಸಹಾಯಕಿ, ಒಳಾಡಳಿತ ಇಲಾಖೆ, ಇವರ ಟಿಪ್ಪಣಿ ಸಂಖ್ಯೆ : ಒಇ/12/ಕಾ/2010 ದಿನಾಂಕ : 09-08-2010

* * *

ಪ್ರಸ್ತಾವನೆ :

ಮೇಲೆ ಓದಲಾದ (1)ರ ಟಿಪ್ಪಣಿಯಲ್ಲಿ ಸರ್ಕಾರದ ಕಾರ್ಯದರ್ಶಿ (ಪಿಸಿಎಎಸ್) ಒಳಾಡಳಿತ ಇಲಾಖೆ, ಇವರ ವಾಹನ ಸಂಖ್ಯೆ : ಕೆಎ 01 ಜಿ 4300 ವಾಹನವು ನಿಯಮಾನುಸಾರ 5000 ಕಿ.ಮೀ. ಕ್ರಮಿಸಿದಾಗ ವಾಹನದ ಸರ್ವಿಸಿಂಗ್ ಮಾಡಲಾಗಿರುತ್ತದೆ. ಪ್ರಸ್ತುತ ಲೆಕ್ಕಪತ್ರ ಶಾಖೆಯು ರೂ. 1000-00 ಮೀರಿದ ವೆಚ್ಚಕ್ಕೆ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುವ ಅನುಸಾರ ದಿನಾಂಕ : 07-07-2010 ರಂದು ಮೆ: ಶೇಷಾದ್ರಿಪುರಂ ಸರ್ವಿಸ್ ಸ್ಟೇಷನ್, ಬೆಂಗಳೂರು, ಇಲ್ಲಿ ಸರ್ವಿಸಿಂಗ್ ಮಾಡಿದ್ದು, ಅದಕ್ಕೆ ತಗುಲಿದ ವೆಚ್ಚ ರೂ. 6784-00ಗಳ (ಆರು ಸಾವಿರದ ಏಳುನೂರ ಎಂಭತ್ತನಾಲ್ಕು ರೂಪಾಯಿಗಳು ಮಾತ್ರ)ನ್ನು ಸದರಿ ಸಂಸ್ಥೆಗೆ ಪಾವತಿಸಲು ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 39, ಸಶಾಶಾ 2008 ಬೆಂಗಳೂರು, ದಿನಾಂಕ : 24ನೇ ಆಗಸ್ಟ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಕಾರ್ಯದರ್ಶಿ (ಪಿಸಿಎಎಸ್) ಯವರ ವಾಹನ ಸಂಖ್ಯೆ : ಕೆಎ 01 ಜಿ 4300 ವಾಹನಕ್ಕೆ ದಿನಾಂಕ : 07-07-2010 ರಂದು ಮೇ : ಶೇಷಾದ್ರಿಪುರಂ ಸರ್ವಿಸ್ ಸ್ಟೇಷನ್, ಬೆಂಗಳೂರು, ಇವರಿಂದ ಸರ್ವಿಸಿಂಗ್ ಮಾಡಿಸಿದ ಮೊತ್ತ ರೂ. 6784-00ಗಳ (ಆರು ಸಾವಿರದ ಏಳುನೂರ ಎಂಭತ್ತನಾಲ್ಕು ರೂಪಾಯಿಗಳು ಮಾತ್ರ)ನ್ನು ಸದರಿ ಸಂಸ್ಥೆಗೆ ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2010-2011ನೇ ಸಾಲಿನ ಲೆಕ್ಕ ಶೀರ್ಷಿಕೆ "2052 – Sectt General Services-090-Sectt-01 KGS-195 Transport Expenses" ರ ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ : 10-07-1996ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿದ ಆರ್ಥಿಕ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸಮನ್ವಯ)

ಪಿ.ಆರ್. 2300

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಬೆಂಗಳೂರು ಇದರ ಸಮಿತಿಗೆ ಹೆಚ್ಚುವರಿ ಸದಸ್ಯರನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 68 ಶಿಸನೇ 2008, ದಿನಾಂಕ : 05-08-2008
2. ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಬೆಂಗಳೂರು ಇವರ ಟಿಪ್ಪಣಿ ಸಂಖ್ಯೆ :ಅಭಾಸಕಾ/ಉಕಕ/30/09, ದಿನಾಂಕ : 20-09-2009

* * *

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ ;5-08-2008ರ ಆದೇಶದಲ್ಲಿ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಬೆಂಗಳೂರು ಇದಕ್ಕೆ ಸರ್ಕಾರದ ನಾಮನಿರ್ದೇಶಿತ ಅನಿವಾಸಿ ಭಾರತೀಯರ ಪ್ರತಿನಿಧಿಯನ್ನು ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಟಿಪ್ಪಣಿಯಲ್ಲಿ ಅನಿವಾಸಿ ಭಾರತೀಯ ಸಮಿತಿ ಇದಕ್ಕೆ ಶ್ರೀ ಅರವಿಂದ ಪಾಟೀಲ್, ಇವರು ದೋಹಾ-ಖತಾರ್ ದೇಶದ ಕರ್ನಾಟಕ ಅನಿವಾಸಿ ಭಾರತೀಯರಾಗಿದ್ದು, ಸದರಿಯವರು ಹಲವಾರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಯಶಸ್ವಿಯಾಗಿದ್ದು, ಇಂಥಹವರನ್ನು ಅನಿವಾಸಿ ಭಾರತೀಯ ಸಮಿತಿಯ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರಸ್ತುತ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಇಲ್ಲಿ ದೋಹ-ಖತಾರ್ ದೇಶದಲ್ಲಿರುವ ಕನ್ನಡಿಗರ ಪರವಾಗಿ ಪ್ರತಿನಿಧಿಸಲು ಇವರನ್ನು 'ವಿಶೇಷ ಪ್ರತಿನಿಧಿ-ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ' ಎಂಬುದಾಗಿ ನಿಯೋಜಿಸಲು ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ. ಹಾಗೂ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 74 ಶಿಸನೇ 2009, ಬೆಂಗಳೂರು, ದಿನಾಂಕ : 27 ನೇ ಆಗಸ್ಟ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ" ಈ ಸಮಿತಿಗೆ ಶ್ರೀ ಅರವಿಂದ ಪಾಟೀಲ್ ಇವರನ್ನು ದೋಹ-ಖತಾರ್ ದೇಶದಲ್ಲಿರುವ ಕನ್ನಡಿಗರ ಪರವಾಗಿ ಪ್ರತಿನಿಧಿಸಲು ಇವರನ್ನು 'ವಿಶೇಷ ಪ್ರತಿನಿಧಿ-ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ' ಎಂಬುದಾಗಿ ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರದ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 633-ವೆಚ್ಚ 12-10 ದಿನಾಂಕ : 11-08-2010ರಲ್ಲಿ ನೀಡಿರುವ ಸಹಮತಿರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ರಹಮತ್ ಉಲ್ಲಾ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇಲಾಖೆ (ರಾಜ್ಯ ಶಿಷ್ಟಚಾರ)

ಪಿ.ಆರ್. 2301

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಜಿ.ವಿ.ಸೀನಪ್ಪ ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಇವರ ವಿರುದ್ದ ಶಿಸ್ತು ಕ್ರಮವನ್ನು ಕೈಬಿಡುವ ಬಗ್ಗೆ ಆದೇಶ

ಓದಲಾಗಿದೆ : 1. ದಿನಾಂಕ : 31-07-97ರ ಆದೇಶ ಸಂಖ್ಯೆ : ಗ್ರಾ ಅಪ 169 ವಿಸೇಬಿ 97

2. ದಿನಾಂಕ : 02-08-97ರ ಆದೇಶ ಸಂಖ್ಯೆ : ಸಿಆಸುಇ 071 ಎಸ್ಇಎನ್ 97

3. ದಿನಾಂಕ : 13-03-08 ರ ಅನಧಿಕೃತ ಟಿಪ್ಪಣಿ ಸಂಖ್ಯೆ : ಗ್ರಾ ಅಪ 18 ವಿಸೇಬಿ 06

* * *

ಪ್ರಸ್ತಾವನೆ :

ಶ್ರೀ ಜಿ.ವಿ. ಸೀನಪ್ಪ ಕೆಎಎಸ್ (ಕಿರಿಯ ಶ್ರೇಣಿ) ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಡ್ಲಘಟ್ಟ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಶಿಡ್ಲಘಟ್ಟ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ 1996-97ನೇ ಸಾಲಿನಲ್ಲಿ ಜೈವಿಕ ಅನಿಲ ಸ್ಥಾವರಗಳ ನಿರ್ಮಾಣದಲ್ಲಿ ಹಣ ದುರುಪಯೋಗ ಮತ್ತು ಕೆಲವು ಫಲಾನುಭವಿಗಳ ಹೆಸರಿನಲ್ಲಿ ಸುಳ್ಳು ದಾಖಲೆಗಳನ್ನು ಸೃಜಿಸಿ ಅವರುಗಳ ಹೆಸರಿನಲ್ಲಿ ಹಣ ದುರುಪಯೋಗಪಡಿಸಿಕೊಂಡಿರುವ ಆಪಾದನೆಯ ಮೇಲೆ ಇವರ ವಿರುದ್ಧ ಶಿಡ್ಲಘಟ್ಟ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ದಾಖಲಿಸಲಾದ ಕ್ರಿಮಿನಲ್ ದೂರಿನನ್ವಯ ಇವರು ದಿನಾಂಕ : 21-07-97 ರಂದು ದಸ್ತಗಿರಿಯಾಗಿ ನ್ಯಾಯಾಂಗ ವಶದಲ್ಲಿದ್ದು ದಿನಾಂಕ : 25-07-97 ರಂದು ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಇವರ ಕರ್ತವ್ಯಲೋಪದಿಂದ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ ಇವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿ ಇಟ್ಟು ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಡಲಾಗಿತ್ತು.

ಶ್ರೀ ಜಿ.ವಿ. ಸೀನಪ್ಪ ಕೆಎಎಸ್ (ಕಿರಿಯ ಶ್ರೇಣಿ) ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಡ್ಲಘಟ್ಟ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಶಿಡ್ಲಘಟ್ಟ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ದಾಖಲಿಸಲಾದ ಕ್ರಿಮಿನಲ್ ದೂರಿನನ್ವಯ ಇವರು ಪೋಲೀಸು ದಸ್ತಗಿರಿಯಾಗಿ 48 ಗಂಟೆಗಳ ಅವಧಿ ಮೀರಿದ ಕಾರಣ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ ನಿಯಮ 10(2)(ಎ) ರನ್ವಯ ಇವರು ದಸ್ತಗಿರಿಯಾದ ದಿನದಿಂದಲೇ ಅಮಾನತ್ತಿನಲ್ಲಿರುವರು ಎಂದು ಪರಿಭಾವಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಆದೇಶ ಹೊರಡಿಸಲಾಗಿತ್ತು.

ಶ್ರೀ ಜಿ.ವಿ. ಸೀನಪ್ಪ ರವರ ವಿರುದ್ದದ ಕ್ರಿಮಿನಲ್ ಮೊಕದ್ದಮೆಯು ಪ್ರಧಾನ ಸಿವಿಲ್ ನ್ಯಾಯಾಲಯ, ಶಿಡ್ಲಘಟ್ಟ ಇಲ್ಲಿ ವಿಚಾರಣೆಗೆ ಬಂದಿದ್ದು, ಎಲ್ಲಾ ಜೈವಿಕ ಅನಿಲ ಸ್ಥಾವರಗಳು ನಿರ್ಮಿತವಾಗಿದ್ದು, ಫಲಾನುಭವಿಗಳಿಗೆ ಸಹಾಯ ಧನವನ್ನು ಚೆಕ್ಕು ಮೂಲಕ ವಿತರಿಸಲಾಗಿದೆ ಎಂದು ಪೋಲೀಸು ಇಲಾಖೆಯು ಸಲ್ಲಿಸಿದ ಬಿ-ವರದಿಯನ್ನು ಮಾನ್ಯ ನ್ಯಾಯಾಲಯವು ಅಂಗೀಕರಿಸಿ ಇವರ ಬಿಡುಗಡೆಗೆ ಆದೇಶಿಸಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಪುನಃ ಲೋಕಾಯುಕ್ತಕ್ಕೆ ವಹಿಸುವ ಅಗತ್ಯ ಕಂಡುಬರುವುದಿಲ್ಲವೆಂದು ಪ್ರಕರಣವನ್ನು ಮುಕ್ತಾಯಗೊಳಿಸಲು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಮಾಡಿರುವ ಶಿಫಾರಸ್ಸನ್ನು ಸರ್ಕಾರವು ಕೂಲಂಕಶವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 207 ಕೆಇವಿ 07, ಬೆಂಗಳೂರು, ದಿನಾಂಕ : 27 ನೇ ಆಗಸ್ಟ್ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು, ಶ್ರೀ ಜಿ.ವಿ. ಸೀನಪ್ಪ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಡ್ಲಘಟ್ಟ ಇವರು ದಿನಾಂಕ : 21-07-97 ರಿಂದ 25-07-97 ರವರೆಗೆ ಕಳೆದ ನ್ಯಾಯಾಂಗ ಬಂಧನದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 8 (14-ಎ) ಪ್ರಕಾರ dies-non ಅವಧಿಯೆಂದು ಆದೇಶಿಸುತ್ತದೆ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇವರ ವಿರುದ್ಧ ಉದ್ದೇಶಿತ ಶಿಸ್ತು ಕ್ರಮವನ್ನು ಕೈಬಿಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇಲಾಖೆ (ಸೇವೆಗಳು-2)

ಪಿ.ಆರ್. 2302

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಬಿ. ಸಿದ್ದಯ್ಯ, ಕೆ.ಎ.ಎಸ್ (ಹಿ.ಶ್ರೇ) ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆ-ಆರೋಪಮುಕ್ತರನ್ನಾಗಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1. ನೋಟಿಸ್ ಸಂ : ಸಿಆಸುಇ 268 ಕೆಇವಿ 07 ದಿ : 26-06-08

2. ಶ್ರೀ ಬಿ. ಸಿದ್ದಯ್ಯ, ಕೆ.ಎ.ಎಸ್ (ಹಿ.ಶ್ರೇ) ಅಧಿಕಾರಿ ರವರು ನೋಟೀಸಿಗೆ ನೀಡಿರುವ ಉತ್ತರ ದಿ : 22-07-08

* * *

ಪ್ರಸ್ತಾವನೆ :

ಶ್ರೀ ಬಿ. ಸಿದ್ದಯ್ಯ ಕೆ.ಎ.ಎಸ್. (ಹಿ.ಶ್ರೇ) ಅಧಿಕಾರಿ ರವರು ಈ ಹಿಂದೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಪಶ್ಚಿಮ ವಲಯ ಕಛೇರಿಯ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರಿ ಸ್ಥಳದಲ್ಲಿ ಅನಿಧಿಕೃತವಾಗಿ ಅಡಿಗೆ ಅನಿಲ ಸಿಲಿಂಡರ್‌ಗಳನ್ನು ದಾಸ್ತಾನಿಸಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದವರ ವಿರುದ್ಧ ದಾಳಿ ಮಾಡುವ ಪ್ರಕ್ರಿಯೆಯಲ್ಲಿ ಬೇಜವಾಬ್ದಾರಿಯಿಂದ ವರ್ತಿಸಿ ಸರ್ಕಾರಿ ಕೆಲಸದಲ್ಲಿ ತೋರಿರುವ ಕರ್ತವ್ಯಲೋಗಳ ಕುರಿತು ಮೇಲೆ ಕ್ರಮ ಸಂ (1) ರಲ್ಲಿ ಓದಲಾದ ನೋಟೀಸಿನೊಂದಿಗೆ ದೋಷಾರೋಪಣೆಗಳನ್ನು ಜಾರಿ ಮಾಡುವುದರ ಮೂಲಕ ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಯಿತು ಮೇಲೆ ಓದಲಾದ ಕ್ರಮ ಸಂ(2) ರಲ್ಲಿ ಆಪಾದಿತ ಅಧಿಕಾರಿಗಳು ನೋಟೀಸ್‌ಗೆ ಉತ್ತರ ಸಲ್ಲಿಸಿ ಈ ಕೆಳಕಂಡ ಕಾರಣಗಳಿಂದಾಗಿ ತಮ್ಮನ್ನು ಆರೋಪಗಳಿಂದ ಕೈಬಿಡುವಂತೆ ಕೋರಿದ್ದಾರೆ.

ತಾವು ದಿನಾಂಕ: 31-01-2005 ರಂದು ಬೆಂಗಳೂರು ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಶಿವನಹಳ್ಳಿ ಪುಷ್ಪಾಂಜಲಿ ಥಿಯೇಟರ್ ಎದುರುಗಡೆ ಜಾಗದಲ್ಲಿ ಅನಧಿಕೃತವಾಗಿ ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಪರಿವರ್ತಿಸುತ್ತಿದ್ದ ಗೃಹ ಬಳಕೆ ಸಿಲಿಂಡರ್‌ಗಳನ್ನು ಹಾಗೂ ಮತ್ತಿತರೇ ಸಾಧನಗಳನ್ನು ವಶಪಡಿಸಿಕೊಂಡಿದ್ದು ಮಹಜರನ್ನು ನಡೆಸಿ ಸಿಲಿಂಡರ್‌ಗಳನ್ನು ಪೊಲೀಸರ ವಶಕ್ಕೆ ಒಪ್ಪಿಸಿ ಕೇಸು ದಾಖಲು ಮಾಡುವಂತೆ ತಮ್ಮ ಜೊತೆಗಿದ್ದ ಆಹಾರ ನಿರೀಕ್ಷಕರುಗಳಿಗೆ ಸೂಚನೆಯನ್ನು ನೀಡಿದ್ದರೂ ಸಹ ದಿ : 01-02-05ರ ವರೆಗೆ ಕೇಸನ್ನು ದಾಖಲಿಸದಿರುವ ವಿಷಯವು ತಿಳಿದ ಬಳಿಕ ದಿ : 02-02-05 ರಂದು ತಾವೇ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಕೇಸನ್ನು ದಾಖಲಿಸಿರುವುದಾಗಿ ತಿಳಿಸಿದ್ದಾರೆ ಇದಲ್ಲದೇ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿದ್ದು, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ತಮ್ಮ ಕರ್ತವ್ಯಲೋಪ ಅಥವಾ ನಿರ್ಲಕ್ಷತೆ ಬಗ್ಗೆ ಯಾವುದೇ ಪ್ರಸ್ತಾವನೆಯನ್ನು ಮಾಡಿರುವುದಿಲ್ಲವೆಂದು ಬದಲಾಗಿ ಇಲಾಖೆಯ ಒರ್ವ ಹಿರಿಯ ಅಧಿಕಾರಿ ತನ್ನ ಪೂರ್ಣ ಸಮಯವನ್ನು ಯಾವುದೇ ಒಂದು ಪ್ರಕರಣಕ್ಕೆ ಸೀಮಿತಗೊಳಿಸುವುದು ಸಾಧ್ಯವಾಗದೆಂದು ಅಧಿಕಾರಿ ಸಮ್ಮುಖದಲ್ಲಿ ದಾಳಿ ಅಥವಾ ಪ್ರಾಥಮಿಕ ಮಟ್ಟದ ಪ್ರಕ್ರಿಯೆ ಪ್ರಾರಂಭವಾದ ನಂತರ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡಿ ಇವರ ಕೆಲಸಕ್ಕೆ ಕೈ ಹಾಕಿರಬಹುದೆಂದು ಅಥವಾ ಅಲ್ಲಿಂದ ನಿರ್ಗಮಿಸಿರಬಹುದೆಂದು ವಿಚಾರಣಾಧಿಕಾರಿಗಳು ತಿಳಿಸಿರುವುದರಿಂದ ತಮ್ಮನ್ನು ಆರೋಪಗಳಿಂದ ಮುಕ್ತರನ್ನಾಗಿಸಿ ಪ್ರಕರಣವನ್ನು ಮುಕ್ತಾಯ ಮಾಡಲು ಕೋರಿರುತ್ತಾರೆ.

ಶ್ರೀ ಬಿ. ಸಿದ್ದಯ್ಯ ಕೆ.ಎ.ಎಸ್. (ಹಿ.ಶ್ರೇ) ರವರು ಸಲ್ಲಿಸಿರುವ ವಿವರಣೆ ಹಾಗೂ ವಿಚಾರಣಾಧಿಕಾರಿಯು ನೀಡಿರುವ ವಿಚಾರಣಾ ವರದಿಯನ್ನು ಪರಿಶೀಲಿಸಿದಾಗ ಒಬ್ಬ ಹಿರಿಯ ಅಧಿಕಾರಿಯು ತನ್ನ ಪೂರ್ಣ ಸಮಯವನ್ನು ಯಾವುದೇ ಒಂದು ಪ್ರಕರಣಕ್ಕೆ ಸೀಮಿತಗೊಳಿಸುವುದು ಸಾಧ್ಯವಾಗುವುದಿಲ್ಲ ಮತ್ತು ಜಿಲ್ಲಾ ಮಟ್ಟದ ಒಬ್ಬ ಅಧಿಕಾರಿಯಾದ ಉಪ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ರವರು ಅನಧಿಕೃತ ವ್ಯವಹಾರವನ್ನು ಪತ್ತೆಹಚ್ಚುವುದರ ಜೊತೆಗೆ ಅದರ ನಂತರದ ಕೆಲಸಗಳಾದ ಪೊಲೀಸ್ ಕೇಸ್ ದಾಖಲಿಸುವುದು ಇತ್ಯಾದಿಗಳನ್ನು ಮಾಡಬೇಕೆಂದು ಅಪೇಕ್ಷಿಸುವುದು ಆಡಳಿತಾತ್ಮಕ ದೃಷ್ಟಿಯಿಂದ ಉಚಿತವಾಗಲಾರದು. ಈ ಹಿನ್ನೆಲೆಯಲ್ಲಿ 2005ರಲ್ಲಿ ನಡೆದ ಈ ಪ್ರಕರಣದ ಬಗ್ಗೆ ಶ್ರೀ ಸಿದ್ದಯ್ಯ ಕೆ.ಎ.ಎಸ್. ಇವರ ವಿರುದ್ಧ ಇನ್ನೊಂದು ವಿಚಾರಣೆ ನಡೆಸುವುದರಲ್ಲಿ ಯಾವುದೇ ಉದ್ದೇಶ ಈಡೇರಿದಂತಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಅವರ ಸಮಜಾಯಿಷಿಯನ್ನು ಒಪ್ಪಿ ಇವರನ್ನು ಆರೋಪಗಳಿಂದ ಮುಕ್ತರನ್ನಾಗಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರ ಆದೇಶ ಸಂಖ್ಯೆ : ಸಿಆಸುಇ 268 ಕೆಇವಿ 2007, ಬೆಂಗಳೂರು, ದಿನಾಂಕ : 25ನೇ ಆಗಸ್ಟ್ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು, ಶ್ರೀ ಬಿ. ಸಿದ್ದಯ್ಯ ಕೆ.ಎ.ಎಸ್. (ಹಿ.ಶ್ರೇ) ಅಧಿಕಾರಿ ರವರನ್ನು ದಿ : 26-06-2008ರ ನೋಟೀಸಿನಲ್ಲಿ ಮಾಡಲಾದ ಆರೋಪಗಳಿಂದ ಆರೋಪಮುಕ್ತರನ್ನಾಗಿಸುತ್ತದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇಲಾಖೆ (ಸೇವೆಗಳು-2)

ಪಿ.ಆರ್. 2303

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2ನೇ ಹಂತದ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಸ್ಥಾಪನೆಗಾಗಿ 2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ. 1.00 ಕೋಟಿಗಳ ಅನುದಾನದಲ್ಲಿ ರೂ. 50.00 ಲಕ್ಷಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ಈಕ್ವಿಟಿ ಮೊತ್ತವಾಗಿ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1] ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 38 ಎಂಡಿಎ 2008, ದಿನಾಂಕ : 25–11–2008
2] ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 38 ಎಂಡಿಎ 2008, ದಿನಾಂಕ : 25–02–2009
3] ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 59 ಎಂಡಿಎ 2008, ದಿನಾಂಕ : 05–10–2009
4] ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 38 ಎಂಡಿಎ 2008, ದಿನಾಂಕ : 21–11–2009
5] ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 38 ಎಂಡಿಎ 2008, ದಿನಾಂಕ : 06–02–2010
6] ವ್ಯವಸ್ಥಾಪಕ ನಿರ್ದೇಶಕರು ಕಿಯೋನಿಕ್ಸ್ ಪತ್ರ ಸಂಖ್ಯೆ ಕೆಎಸ್ಇಡಿಸಿ/ಐಪಿಸಿ/ಗ್ರಾಂಟ್ಸ್/07–2010, ದಿನಾಂಕ : 02–07–2010.

* * *

ಪ್ರಸ್ತಾವನೆ :

ಮೇಲೆ [1] ಮತ್ತು [3] ರಲ್ಲಿ ಓದಲಾದ ದಿನಾಂಕ : 25–11–2008 ಹಾಗೂ ದಿನಾಂಕ : 05–10–2009 ಸರ್ಕಾರಿ ಆದೇಶದಲ್ಲಿ ಮೈಸೂರು ಮಂಗಳೂರಿನಲ್ಲಿ ರೂ. 31.68 ಕೋಟಿ ಹಾಗೂ ಶಿವಮೊಗ್ಗದಲ್ಲಿ ರೂ. 15.46 ಕೋಟಿ ವೆಚ್ಚದಲ್ಲಿ ಐಟಿ ಪಾರ್ಕ್‌ಗಳನ್ನು ಕಿಯೋನಿಕ್ಸ್‌ನ ಸ್ವಂತ ಬಂಡವಾಳ ಹಾಗೂ ಖಾಸಗಿ ಸಹ ಭಾಗಿತ್ವದ ಮಾದರಿಯಲ್ಲಿ [ಪಿಪಿಪಿ ಮೋಡ್] ನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

ಮೇಲೆ [2] ಮತ್ತು [4]ರಲ್ಲಿ ಓದಲಾದ ದಿನಾಂಕ : 25–02–2009ರ ಹಾಗೂ ದಿ : 21–11–2009 ಸರ್ಕಾರಿ ಆದೇಶದಲ್ಲಿ 2ನೇ ಹಂತದ ನಗರಗಳಾದಂತಹ ಮಂಗಳೂರು, ಮೈಸೂರು, ಶಿವಮೊಗ್ಗ, ಬೆಳಗಾಂ, ದಾವಣಗೆರೆ ಹಾಗೂ ಹುಬ್ಬಳ್ಳಿ–ಧಾರವಾಡದಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಸ್ಥಾಪನೆಗಾಗಿ 2008–09ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ **"5465–01–190–1–13 ಹಂತ 2 ನಗರಗಳ ಸಲುವಾಗಿ ಕಿಯೋನಿಕ್ಸ್ ನಲ್ಲಿ ಸಾಮ್ಯ ಷೇರು – ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ–059 ಇತರೆ ಖರ್ಚು"** ಅಡಿಯಲ್ಲಿ ಒದಗಿಸಲಾಗಿದ್ದ ಈಕ್ವಿಟಿ ಅನುದಾನದಲ್ಲಿ ರೂ. 5.00 ಕೋಟಿಗಳನ್ನು ಹಾಗೂ 2009–10ನೇ ಸಾಲಿನಲ್ಲಿ ರೂ. 250 **ಲಕ್ಷ ಈಕ್ವಿಟಿ ಮೊತ್ತವಾಗಿ ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.**

ಮೇಲೆ [5] ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಹಂತ 2 ನಗರಗಳಲ್ಲಿ ಐಟಿ ಪಾರ್ಕ್ ಸ್ಥಾಪಿಸುವ ಸಲುವಾಗಿ ರೂ. 50.00 ಲಕ್ಷಗಳ **ಈಕ್ವಿಟಿ ಮೊತ್ತವನ್ನು ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.**

ಮೇಲೆ [6]ರಲ್ಲಿ ಓದಲಾದ ಕಿಯೋನಿಕ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ದಿನಾಂಕ: 02–07–2010ರ ಪತ್ರದಲ್ಲಿ ಕಿಯೋನಿಕ್ಸ್ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ಶಿವಮೊಗ್ಗದಲ್ಲಿನ ಮಾಹಿತಿ ತಂತ್ರಜ್ಞಾನ ಪಾರ್ಕ್ ಮತ್ತು ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯ, ಮೈಸೂರು ಮತ್ತು ಮಂಗಳೂರಿನಲ್ಲಿನ ಮಾಹಿತಿ ತಂತ್ರಜ್ಞಾನ ಪಾರ್ಕ್ ಇವುಗಳ ಪ್ರಗತಿಯ ಬಗ್ಗೆ ತಿಳಿಸುತ್ತಾ, ಹಾಗೂ ಬೆಳಗಾವಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪನೆಯ ಪ್ರಸ್ತಾವನೆಯನ್ನು ಉಲ್ಲೇಖಿಸುತ್ತಾ, 2010–11ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "5465-01-190-1-13 ಹಂತ 2 ನಗರಗಳ ಸಲುವಾಗಿ ಕಿಯೋನಿಕ್ಸ್‌ನಲ್ಲಿ ಸ್ವಾಮ್ಯ ಷೇರು – ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ 059 ಇತರೆ ಖರ್ಚು" ಇದರಡಿಯಲ್ಲಿ ಒದಗಿಸಲಾದ ರೂ.100 ಲಕ್ಷಗಳನ್ನು **ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲು ಕೋರಿರುತ್ತಾರೆ.**

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಮೇಲೆ ಉಲ್ಲೇಖಿಸಿರುವ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ರೂ. 100 ಲಕ್ಷಗಳ ಅನುದಾನದ ಪೈಕಿ ಶೇ. 50 ರಷ್ಟು ಅಂದರೆ ರೂ.50 ಲಕ್ಷಗಳ **ಈಕ್ವಿಟಿ ಮೊತ್ತವನ್ನು ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.**

ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 28 ಎಂಡಿಎ 2010, ಬೆಂಗಳೂರು, ದಿನಾಂಕ : 26ನೇ ಆಗಸ್ಟ್ 2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಹಂತ–2 ನಗರಗಳಲ್ಲಿ ಐಟಿ ಪಾರ್ಕ್‌ಗಳನ್ನು ಸ್ಥಾಪಿಸುವ ಸಲುವಾಗಿ ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ '5465–01–190–1–13 ಹಂತ 2 ನಗರಗಳ ಸಲುವಾಗಿ ಕಿಯೋನಿಕ್ಸ್‌ನಲ್ಲಿ ಸಾಮ್ಯಷೇರು – **ಮಾಹಿತಿ** ತಂತ್ರಜ್ಞಾನ ಅಭಿವೃದ್ಧಿ–059–ಇತರೆ ಖರ್ಚು [ಯೋಜನೆ]" ಇದರಡಿಯಲ್ಲಿ ಒದಗಿಸಲಾಗಿರುವ ರೂ. 100.00 ಲಕ್ಷಗಳಲ್ಲಿ ರೂ. 50 ಲಕ್ಷಗಳ (ರೂ. ಐವತ್ತು ಲಕ್ಷಗಳು ಮಾತ್ರ) ಈಕ್ವಿಟಿ ಮೊತ್ತವನ್ನು ಕಿಯೋನಿಕ್ಸ್ ಸಂಸ್ಥೆಗೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಮೂಲಕ ಬಿಡುಗಡೆ ಮಾಡಲಾಗಿದೆ.

ಈ ಈಕ್ವಿಟಿ ಮೊತ್ತದ ಬಿಡುಗಡೆಯು ಮೇಲೆ 2ರಲ್ಲಿ ಓದಲಾದ ಸರ್ಕಾರದ ಆದೇಶ ಸಂಖ್ಯೆ : ಐಟಿಡಿ 38 ಎಂಡಿಎ 2008 ದಿನಾಂಕ 25–02–2009 ರಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ ಇವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "5465–01–190–1–13 ಹಂತ 2 ನಗರಗಳ ಸಲುವಾಗಿ ಕಿಯೋನಿಕ್ಸ್‌ನಲ್ಲಿ ಸಾಮ್ಯಷೇರು – ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ–059–ಇತರೆ ಖರ್ಚು [ಯೋಜನೆ]" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಕಿಯೋನಿಕ್ಸ್‌ರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ : 16-05-2008ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 2304

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : "ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಬೆಳಗಾಂ ವಿಭಾಗದ ಏಳು ಜಿಲ್ಲೆಗಳಿಗೆ ವಿಸ್ತರಿಸುವ ಬಗ್ಗೆ

ಓದಲಾಗಿದೆ : 1] ಸರ್ಕಾರಿ ಆದೇಶ ಸಂಖ್ಯೆ : ಆಕುಕ 216 ಸಿಜಿಇ 2008 ದಿನಾಂಕ : 20-02-2009.

2] ಸರ್ಕಾರಿ ಆದೇಶ ಸಂಖ್ಯೆ : ಆಕುಕ 302 ಸಿಜಿಇ 2009 ದಿನಾಂಕ : 4-1-2010.

3] ಪತ್ರ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ/ಎಸ್‌ಎಎಸ್‌ಟಿ/ಬೆಳಗಾಂ/ ನೋಟ್/80/2010-11 ದಿನಾಂಕ : 12-07-2010

* * *

ಪ್ರಸ್ತಾವನೆ :

ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರು ಒಮ್ಮೆಲೆ ದುರಂತ ಉಂಟು ಮಾಡುವ (catastrophic) ಆರೋಗ್ಯ ಆಘಾತಗಳಿಗೆ ಒಳಗಾಗುತ್ತಾರೆ. ರಾಜ್ಯದಲ್ಲಿ ಪ್ರಸ್ತುತ ಇರುವ ಆರೋಗ್ಯ ವಿಮೆ ಕಾರ್ಯಕ್ರಮಗಳು ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಬಹಳ ಕಡಿಮೆ ಪ್ರಮಾಣದಲ್ಲಿ ತಲುಪುತ್ತಿವೆ. ಈ ತೊಂದರೆಯನ್ನು ನಿವಾರಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸುವರ್ಣ ಆರೋಗ್ಯ ಸುರಕ್ಷಾ ಎಂಬ ಒಂದು ಹೊಸ ಆರೋಗ್ಯ ಚಿಕಿತ್ಸಾ ಯೋಜನೆಯನ್ನು ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ನಗದು ರಹಿತವಾಗಿ ಆರೋಗ್ಯ ಚಿಕಿತ್ಸೆ ಸೌಲಭ್ಯವನ್ನು ಒದಗಿಸುವ ಮೂಲಕ ಒಮ್ಮೆಲೆ ದುರಂತ ಉಂಟು ಮಾಡುವ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಗುಲ್ಬರ್ಗಾ ವಿಭಾಗದ ಆರು ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾರಂಭಿಕವಾಗಿ ಜಾರಿಗೊಳಿಸಲು ಮೇಲೆ (1) ರಲ್ಲಿ ಓದಲಾದ ದಿನಾಂಕ: 20-02-2009ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ಮುಂದುವರೆದು, ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ : 4-1-2010ರಲ್ಲಿ ಈ ಯೋಜನೆಗೆ "ವಾಜಪೇಯಿ ಆರೋಗ್ಯ ಶ್ರೀ" ಎಂದು ಮರುನಾಮಕರಣ ಮಾಡಲಾಗಿದೆ.

ಮಾನ್ಯ ಘನತೆವೆತ್ತ ರಾಜ್ಯಪಾಲರು ರಾಜ್ಯ ವಿಧಾನ ಮಂಡಲವನ್ನು ಉದ್ದೇಶಿಸಿ ದಿನಾಂಕ : 25-02-2010 ರಂದು ಮಾಡಿದ ಭಾಷಣದಲ್ಲಿ ಹಾಗೂ ಮಾನ್ಯ ಮುಖ್ಯ ಮಂತ್ರಿಯವರು 2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಹಂತ-ಹಂತವಾಗಿ ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು ಘೋಷಿಸಿದ್ದಾರೆ.

ಮೇಲ್ಕಂಡಂತೆ ಘೋಷಿಸಿದ ಅನುಸಾರ, ಈ ಯೋಜನೆಯನ್ನು ಹಂತ ಹಂತವಾಗಿ ರಾಜ್ಯಾದ್ಯಂತ ವಿಸ್ತರಿಸುವ ನಿಟ್ಟಿನಲ್ಲಿ ಬೆಳಗಾಂ ವಿಭಾಗದ ಏಳು ಜಿಲ್ಲೆಗಳಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ವಿಸ್ತರಿಸಲು ಉದ್ದೇಶಿಸಲಾಗಿದೆ. ಕರ್ನಾಟಕ ಮಾನವ ಸಂಪನ್ಮೂಲ ವರದಿಯ ಪ್ರಕಾರ, ಬೆಳಗಾಂ ವಿಭಾಗದ 7 ಜಿಲ್ಲೆಗಳಾದ ಬೆಳಗಾಂ, ಬಾಗಲಕೋಟೆ, ಬಿಜಾಪುರ, ಧಾರವಾಡ ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಇಲ್ಲಿ ರಾಜ್ಯಕ್ಕೆ ಹೋಲಿಸಿದಲ್ಲಿ ಆರೋಗ್ಯ ಸೂಚ್ಯಾಂಕಗಳು ಕಡಿಮೆ ಇವೆ. ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ತಕ್ಷಣವೇ ಜಾರಿಗೊಳಿಸಲು ಬೆಳಗಾಂ ವಿಭಾಗ ಅರ್ಹತೆ ಹೊಂದಿದೆ ; ಏಕೆಂದರೆ ಅಲ್ಲಿ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವವರ ಜನಸಂಖ್ಯೆ ಶೇಕಡ 69.1 ಆಗಿದ್ದು ರಾಜ್ಯ ಮತ್ತು ಗುಲ್ಬರ್ಗಾ ವಿಭಾಗಕ್ಕಿಂತ ಸ್ವಲ್ಪ ಮೇಲಿದೆ. ಅಂದರೆ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವವರ ಜನಸಂಖ್ಯೆ ಶೇಕಡ 60 ಮತ್ತು ಗುಲ್ಬರ್ಗಾದಲ್ಲಿ ಅದು ಶೇಕಡ 61.5 ಆಗಿದೆ.

ದಿನಾಂಕ : 29-06-2010 ರಂದು ಇದ್ದಂತೆ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಪಡಿತರ ಚೀಟಿಗಳನ್ನು ವಿತರಿಸಿರುವ ಕುರಿತಂತೆ ನೀಡಿರುವ ವರದಿ ಪ್ರಕಾರ, ಬೆಳಗಾಂ ವಿಭಾಗದಲ್ಲಿ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ಹೊಂದಿರುವವರ ಸಂಖ್ಯೆ 16.68 ಲಕ್ಷಗಳು. ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಬೆಳಗಾಂ ವಿಭಾಗದ 7 ಜಿಲ್ಲೆಗಳಿಗೆ ವಿಸ್ತರಿಸಲು ವಾರ್ಷಿಕವಾಗಿ ಸುಮಾರು ರೂ. 53 ಕೋಟಿಗಳು ಬೇಕಾಗುತ್ತದೆ. ಬೆಳಗಾಂ ವಿಭಾಗಕ್ಕೆ ಸಂಬಂಧಿಸಿದಂತೆ ಸಹ ಯೋಜನೆಯನ್ನು ಜಾರಿಗೊಳಿಸಲು ನೆರವು ಏಜೆನ್ಸಿ ಗುರುತಿಸುವಿಕೆ, ಜಾಲ ಆಸ್ಪತ್ರೆಗಳ ಗುರುತಿಸುವಿಕೆ, ಆರೋಗ್ಯ ಮೇಳ ನಡೆಸುವುದು ಇತ್ಯಾದಿ ಪೂರ್ವಸಿದ್ಧತೆ ಮಾಡಿಕೊಳ್ಳಲು ಟೆಂಡರ್ ಪ್ರಕ್ರಿಯೆ ಮಾಡಬೇಕಿರುವ ಕಾರಣ, ಬೆಳಗಾಂ ವಿಭಾಗದಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಇನ್ನೂ ಸುಮಾರು 4 ತಿಂಗಳು ಬೇಕಾಗುತ್ತದೆ.

ಸುವರ್ಣ ಸುರಕ್ಷಾ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರು ಮೇಲೆ ಓದಲಾದ (3) ರ ಪತ್ರದಲ್ಲಿ ಮೇಲ್ಕಂಡ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುತ್ತಾ, ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಬೆಳಗಾಂ ವಿಭಾಗಕ್ಕೆ ವಿಸ್ತರಿಸುವ ಕುರಿತಂತೆ ಸರ್ಕಾರ ಸೂಕ್ತ ಆದೇಶವನ್ನು ಹೊರಡಿಸಬೇಕೆಂದು ಕೋರಿದ್ದಾರೆ.

ವಾಜಪೇಯಿ ಆರೋಗ್ಯಶ್ರೀ ಯೋಜನೆಯು ಚಾಲ್ತಿಯಲ್ಲಿರುವ ಕಾರ್ಯಕ್ರಮವಾಗಿದೆ ಹಾಗೂ ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ರಚಿತವಾಗಿರುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಸರ್ಕಾರವು ಈಗಾಗಲೇ ಬಿಡುಗಡೆ ಮಾಡಿರುವ ರೂ. ರೂ. 21 ಕೋಟಿಗಳ ಪೈಕಿ, ರೂ. 7 ಕೋಟಿಗಳು ವೆಚ್ಚವಾಗಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ಸುಮಾರು ರೂ. 35 ಕೋಟಿಗಳು ವೆಚ್ಚವಾಗಬಹುದೆಂದು ನಿರೀಕ್ಷಿಸಲಾಗಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಜಾರಿಗೊಳಿಸಲು ರೂ. 40 ಕೋಟಿಗಳ ಅನುದಾನವನ್ನು

ಒದಗಿಸಲಾಗಿದೆ. ಗುಲ್ಬರ್ಗಾ ವಿಭಾಗಕ್ಕೆ ಪ್ರಸಕ್ತ ಸಾಲಿನಲ್ಲಿ ಅವಶ್ಯವಿರುವ ಅನುದಾನವನ್ನು ಗಣನೆಗೆ ತೆಗೆದುಕೊಂಡ ನಂತರವೂ ರೂ. 19 ಕೋಟಿಗಳು ಲಭ್ಯವಾಗುತ್ತದೆ. ಪ್ರಸಕ್ತ ಸಾಲಿನ ಉಳಿದ ಆರ್ಥಿಕ ವರ್ಷದಲ್ಲಿ ಬೆಳಗಾಂ ವಿಭಾಗಕ್ಕೆ ಸುಮಾರು ರೂ. 13 ಕೋಟಿಗಳು ಬೇಕಾಗಬಹುದಾದ ಕಾರಣ, ಈ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಬೆಳಗಾಂ ವಿಭಾಗದ 7 ಜಿಲ್ಲೆಗಳಿಗೂ ವಿಸ್ತರಿಸಿದರೂ ಸಾಕಾಗುತ್ತದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲಿಸಿದೆ. ಗುಲ್ಬರ್ಗಾ ವಿಭಾಗದಿಂದ ಬೇರೆ ಜಿಲ್ಲೆಗಳಿಗೆ ವಿಸ್ತರಿಸುವ ಮುನ್ನ ಇಲಾಖೆಯು ಗುಲ್ಬರ್ಗಾದ ವಿಭಾಗದಲ್ಲಿನ ಒಟ್ಟುಗೂಡಿಸಿದ ಅನುಭವವನ್ನು ಅಧ್ಯಯನ ಮಾಡುವಂತೆ ಅಭಿಪ್ರಾಯ ವ್ಯಕ್ತಪಡಿಸಿದೆ. ವಾಜಪೇಯಿ ಆರೋಗ್ಯ ಶ್ರೀ ಯೋಜನೆಯು ಗುಲ್ಬರ್ಗಾ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯಗತವಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಲಭ್ಯವಿರುವ ಅನುದಾನ ಬೆಳಗಾಂ ವಿಭಾಗದ 7 ಜಿಲ್ಲೆಗಳಿಗೆ ವಿಸ್ತರಿಸಿದರೂ ಸಾಕಾಗಬಹುದು ಎಂದು ನಿರೀಕ್ಷಿಸಲಾಗಿದೆ. ವಾಜಪೇಯಿ ಆರೋಗ್ಯ ಶ್ರೀ ಕಾರ್ಯಕ್ರಮ ಸರ್ಕಾರದ ಒಂದು ಪ್ರತಿಷ್ಠಿತ ಕಾರ್ಯಕ್ರಮವಾಗಿದ್ದು, ಈ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಅನುಷ್ಠಾನಗೊಳಿಸಬೇಕಾದ ಬದ್ಧತೆಯನ್ನು ಹೊಂದಿರುವ ಕಾರಣ, ಈ ವಿಷಯವನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಪ್ರಸ್ತಾಪಿಸಲಾಗಿತ್ತು. ಬೆಳಗಾಂ ವಿಭಾಗದ ಜಿಲ್ಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸುವ ಕುರಿತು ತ್ವರಿತವಾಗಿ ನಿರ್ಧಾರ ಕೈಗೊಳ್ಳಬೇಕಿದ್ದ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರ (ವ್ಯವಹರಣೆ ನಿರ್ವಹಣೆ) ನಿಯಮಗಳು, 1977ರ ಮೊದಲನೆ ಅನುಸೂಚಿಯ ಕ್ರಮ ಸಂಖ್ಯೆ 2ರ ಪ್ರಾವಿಜೋ ರನ್ವಯ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಬೆಳಗಾಂ ವಿಭಾಗದ 7 ಜಿಲ್ಲೆಗಳಿಗೆ ವಿಸ್ತರಣೆ ಮಾಡಿ ಆದೇಶವನ್ನು ಹೊರಡಿಸಿ ತದನಂತರ ಸಚಿವ ಸಂಪುಟದ ಘಟನೋತ್ತರ ಅನುಮೋದನೆಯನ್ನು ಪಡೆಯಲು ಮಾನ್ಯ ಮುಖ್ಯ ಮಂತ್ರಿಯವರು ಅನುಮೋದಿಸಿದ್ದಾರೆ.

ಆದುದರಿಂದ, ಈ ಕೆಳಕಂಡ ಆದೇಶ,

ಸರ್ಕಾರಿ ಆದೇಶ ಸಂಖ್ಯೆ : ಆಕುಕ 143 ಸಿಜಿಇ 2010, ಬೆಂಗಳೂರು, ದಿನಾಂಕ : 20ನೇ ಆಗಸ್ಟ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಗುಲ್ಬರ್ಗಾ ವಿಭಾಗದಲ್ಲಿ ಜಾರಿಗೊಳಿಸುತ್ತಿರುವ ರೀತಿಯಲ್ಲಿಯೇ ಬೆಳಗಾಂ ವಿಭಾಗದ ಏಳು ಜಿಲ್ಲೆಗಳಾದ ಬೆಳಗಾಂ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡಗಳಿಗೂ ವಿಸ್ತರಿಸಿ ಜಾರಿಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಯೋಜನೆಯನ್ನು ಜಾರಿಗೊಳಿಸುವ ಮೊದಲು ಅವಶ್ಯವಿರುವ ಪೂರ್ವಸಿದ್ಧತೆಗಳಾದ ನೆರವು ಏಜೆನ್ಸಿ ಗುರುತಿಸುವಿಕೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ಅದರಡಿ ರಚಿತವಾದ ನಿಯಮಗಳನ್ನು ಅನುಸರಿಸಿ ಮಾಡಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕ್ರಮಕೈಗೊಳ್ಳುವುದು. ಹಾಗೆಯೇ ಜಾಲ ಆಸ್ಪತ್ರೆಗಳ ಗುರುತಿಸುವಿಕೆ, ಆರೋಗ್ಯ ಮೇಳ ನಡೆಸುವುದು ಇತ್ಯಾದಿ ಕ್ರಮವನ್ನು ಸಹ ಸದರಿ ಟ್ರಸ್ಟ್ ಕೈಗೊಳ್ಳುವುದು.

ಈ ಕಾರ್ಯಕ್ರಮಕ್ಕೆ ಅವಶ್ಯವಿರುವ ಅನುದಾನವನ್ನು ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2210-80-800-0-15 ರ ಅಡಿಯಲ್ಲಿ ಭರಿಸುವುದು.

ಈ ಬಗ್ಗೆ ಆರ್ಥಿಕ ಇಲಾಖೆಯನ್ನು ಸಮಾಲೋಚಿಸಲಾಗಿ, ಸದರಿ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 953/ವೆಚ್ಚ-5/2010 ದಿನಾಂಕ : 30-07-2010ರಲ್ಲಿ ಅಭಿಪ್ರಾಯ ನೀಡಿದೆ ಹಾಗೂ ಈ ಆದೇಶವನ್ನು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 17 (2)ರ ಪ್ರಾವಿಜೋ ರ ವ್ಯಾಪ್ತಿಯಡಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಪಿ. ಚಂದ್ರಹಾಸ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2305 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

INFRASTRUCTURE DEVELOPMENT SECRETARIAT

Sub: Release of funds towards cost sharing Railway project-Munirabad-Mehaboobnagar new broad gauge railway line project.

Read:
1. G.O.No. IDD 13 NSW 2003 dated. 11-9-2007
2. G.O.No. IDD 1 NSW 2008 dated. 7/11-3-2008
3. Letter No. W.63/CN/BNC/MR/B/GL. Dated. 20-07-2010 of Chief Engineer, (Con.,) SWR, Bangalore.

Preamble:

In the Government Orders referred to at Sl. No. (1) and (2) above, an amount of Rs. 15.00 crore was so far released towards cost sharing for Munirabad-Mehaboobnagar New railway line project.

2. The Chief Engineer, South Western Railway, Bangalore in his letter read at Sl. No. (3) above has requested that an amount of Rs. 15.00 crores may be released immediately for Munirabad (Ginigera)-Raichur new railway line project.

3. The proposal of Railways has been examined and it has been decided to release an amount of Rs. 15.00 crore out of the Budget of Rs. 272.50 crore provided under the Head of Account " 5465-01-190-3-05 (Plan) 211 investment" towards cost sharing for new railway projects during 2008-09.

4. Hence this order.

Government Order No. IDD 01 NSW 2008, Bangalore, Dated: 23-08-2010

After careful examination of the request of Railways, Government is pleased to release Rs. 15.00 crore (Rupees Fifteen Crore only) towards the share of the State Government for the Munirabad- Mehaboobnagar new railway line project

2. The expenditure shall be met under the Head of Account "5465-01-190-3-05 (Plan) 211 investment" out of the budget provision Rs. 272.50 crore. towards cost sharing for new railway projects during 2010-11.

3. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

4. This order is issued with the concurrence of Finance Department vide U.O.Note. No. FD 1342 Exp-I/10 dated 12-08-2010.

By Order and in the name of the Governor of Karnataka

C.A. BABURAVINDRANATH PATEL

Under Secretary to Government,

Infrastructure Development Department.

P.R. No. 2306

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶ್ರೀ ಗಜಾನನ ಬಿದಿರು ಮತ್ತು ಕೈಗಾರಿಕಾ ಘಟಕ ಇವರಿಗೆ ಹೂಬಿಟ್ಟು ಒಣಗಿರುವ ಬೊಂಬುಗಳನ್ನು ಒದಗಿಸುವ ಕುರಿತು.

ಓದಲಾಗಿದೆ : ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಎ7/ಗಬಿ/ಸಿಆರ್-38/09-10. ದಿನಾಂಕ : 19/22-06-2010

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 22-06-2010ರ ಪತ್ರದಲ್ಲಿ ಶ್ರೀ ಗಜಾನನ ಬಿದಿರು ಮತ್ತು ಕೈಗಾರಿಕಾ ಘಟಕ, ಹುಬ್ಬಳ್ಳಿ ಇವರು ಊದುಬತ್ತಿ ತಯಾರಿಕೆಯಲ್ಲಿ ಬೇಕಾದ ಬಿದಿರಿನ ಕಡ್ಡಿಯನ್ನು ಕೆಲಸಕ್ಕೆ ಇತರ ರಾಜ್ಯದಿಂದ ಆಮದು ಮಾಡಿಕೊಳ್ಳುತ್ತಿದ್ದು, ಅದು ಸರಿಯಾದ ವೇಳೆಗೆ ಸಿಗದೇ ಉದ್ಯಮಕ್ಕೆ ತೊಂದರೆಯಾಗುತ್ತಿರುವುದರಿಂದ ಅವರ ಘಟಕದಿಂದ ವಿವಿಧ ರೀತಿಯಲ್ಲಿ ಕಡ್ಡಿ ತಯಾರಿಸಲು 5000 ಟನ್ ಹೂಬಿಟ್ಟ ಬೊಂಬುಗಳನ್ನು ಪೂರೈಸುವಂತೆ ಕೋರಿರುವ ಮೇರೆಗೆ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ ಇವರ ಶಿಫಾರಸ್ಸಿನಂತೆ ಈ ಘಟಕಕ್ಕೆ ಕೆನರಾ ವೃತ್ತದ ಯಲ್ಲಾಪುರ ವಿಭಾಗದಿಂದ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ ಇವರ ಮುಖಾಂತರ ಸರ್ಕಾರ ವಿಧಿಸುವ ದರಗಳ ಆಧಾರದ ಮೇಲೆ 1,000 ಮೆಟ್ರಿಕ್ ಟನ್ ಹೂಬಿಟ್ಟ ಒಣ ಬೊಂಬುಗಳನ್ನು ಮಂಜೂರು ಮಾಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಗಜಾನನ ಬಿದಿರು ಮತ್ತು ಕೈಗಾರಿಕಾ ಘಟಕ, ಹುಬ್ಬಳ್ಳಿ ಇಲ್ಲಿ ಬೊಂಬಿನ ಕಡ್ಡಿ ತಯಾರಿಸಲು ಹೂ ಬಿಟ್ಟು ಒಣಗಿದ 2500 ಟನ್ ಬೊಂಬುಗಳನ್ನು ರೂ. 325.00+ತೆರಿಗೆಗಳು ಹಾಗೂ ಮೇಲ್ವಿಚಾರಕ ದರವನ್ನು ಸೇರಿಸಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಮುಖಾಂತರ ಸರಬರಾಜು ಮಾಡಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಅಪಜೀ 80 ಎಫ್‌ಡಿಪಿ 2010, ಬೆಂಗಳೂರು, ದಿನಾಂಕ : 26ನೇ ಆಗಸ್ಟ್ 2010

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಗಜಾನನ ಬಿದಿರು ಮತ್ತು ಕೈಗಾರಿಕಾ ಘಟಕ, ಹುಬ್ಬಳ್ಳಿ ಈ ಸಂಸ್ಥೆಗೆ ಬೊಂಬಿನ ಕಡ್ಡಿ ತಯಾರಿಸಲು ಹೂಬಿಟ್ಟು ಒಣಗಿದ 2500 ಟನ್ ಬೊಂಬುಗಳನ್ನು ರೂ. 325.00 + ತೆರಿಗೆಗಳು ಹಾಗು ಮೇಲ್ವಿಚಾರಕ ದರವನ್ನು ಸೇರಿಸಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ (ಕೆಎಸ್‌ಎಫ್‌ಐಸಿ) ಮುಖಾಂತರ ಸರಬರಾಜು ಮಾಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಬಿ. ಧನಂಜಯಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 2307

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಬಿ. ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಜನಸ್ಪಂದನ ಕೋಶ) ಇವರ ವಿರುದ್ಧ ಇಲಾಖಾ ವಿಚಾರಣೆ ದಂಡನೆಯನ್ನು ವಿಧಿಸುವ ಬಗ್ಗೆ.

ಓದಲಾಗಿದೆ :

1. ನೋಟೀಸ್ ಸಂಖ್ಯೆ : ಸಿಆಸುಇ 195 ಎಸ್‌ಇಎನ್ 07 ದಿನಾಂಕ : 14-11-2007
2. ಶ್ರೀ ಬಿ.ವಿ. ರಮೇಶ್, ಅಧೀನ ಕಾರ್ಯದರ್ಶಿ ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 07-07-2008.
3. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 195 ಎಸ್ ಇ ಎನ್ 2007, ದಿನಾಂಕ : 13-03-2009
4. ವಿಚಾರಣಾಧಿಕಾರಿಯವರ ವರದಿ ದಿನಾಂಕ : 11-01-2010
5. ನೋಟೀಸ್ ಸಂಖ್ಯೆ : ಸಿಆಸುಇ 195 ಎಸ್‌ಇಎನ್ 07 ದಿನಾಂಕ : 21-01-2010

ಪ್ರಸ್ತಾವನೆ :

ಶ್ರೀ ಬಿ. ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಸ್ತುತ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಜನಸ್ಪಂದನ ಕೋಶ) ಇವರು ಈ ಹಿಂದೆ ನಿಯೋಜನೆ ಮೇಲೆ ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್, ಯಳಂದೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸರ್ಕಾರದ ಅನುಮತಿ ಪಡೆಯದೇ ಶ್ರೀ ಕೆ.ವಿ. ಅನಂತರಾಮು, ನಿವೃತ್ತ ಶಿಕ್ಷಕರು, ಮೈಸೂರು ಇವರಿಗೆ ರೂ. 3.00 ಲಕ್ಷಗಳ ಸಾಲ ನೀಡಿ

ಹಾಗು ಬಡ್ತಿ ವ್ಯವಹಾರವನ್ನು ನಡೆಸಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 21ನ್ನು ಉಲ್ಲಂಘಿಸಿದ ಹಾಗೂ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ಸರ್ಕಾರಕ್ಕೆ ನಿಗದಿತವಾಗಿ ಆಸ್ತಿ ಮತ್ತು ಋಣ ಪಟ್ಟಿ ಸಲ್ಲಿಸದಿರುವ ಆರೋಪಗಳಿಗಾಗಿ ಶ್ರೀ ಬಿ.ವಿ. ರಮೇಶ್, ಅಧೀನ ಕಾರ್ಯದರ್ಶಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 ಮತ್ತು 11-ಎ ರ ಅನ್ವಯ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 14-11-2007ರ ನೋಟೀಸ್ ನೀಡುವ ಮೂಲಕ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಶ್ರೀ ಬಿ. ವಿ. ರಮೇಶ್, ಅಧೀನ ಕಾರ್ಯದರ್ಶಿ, ರವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ : 22-07-2008ರ ಮನವಿಯಲ್ಲಿ ಪ್ರತಿರಕ್ಷಣಾ ಹೇಳಿಕೆಯನ್ನು ಸಲ್ಲಿಸಿ, ಅವರ ವಿರುದ್ಧ ಮಾಡಲಾದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಸದರಿಯವರ ಪ್ರತಿರಕ್ಷಣಾ ಹೇಳಿಕೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅವರು ಸಲ್ಲಿಸಿರುವ ಪ್ರತಿರಕ್ಷಣಾ ಹೇಳಿಕೆಯಲ್ಲಿ ಪರಿಗಣಿಸಬಹುದಾದ ಯಾವ ಅಂಶಗಳು ಕಂಡು ಬಂದಿಲ್ಲವಾದ ಹಿನ್ನೆಲೆಯಲ್ಲಿ ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ವಿಚಾರಣೆಯನ್ನು ಮುಂದುವರಿಸಲು ತೀರ್ಮಾನಿಸಿ, ಮೇಲೆ ಕ್ರಮಸಂಖ್ಯೆ (3) ರಲ್ಲಿ ಓದಲಾದ ದಿನಾಂಕ : 13-03-2009ರ ಆದೇಶದಲ್ಲಿ ಶ್ರೀ ಬಿ.ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ ಇವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ವಿಚಾರಣೆ ನಡೆಸಲು ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು. ಬೆಂಗಳೂರು ಅವರನ್ನು ವಿಚಾರಣಾಧಿಕಾರಿಯಾಗಿಯೂ ಹಾಗೂ ಶಾಖಾಧಿಕಾರಿ, ಸಿ.ಆ.ಸು. ಇಲಾಖೆ (ಸೇವೆಗಳು-ಇ) ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ : 11-01-2010ರ ಪತ್ರದೊಂದಿಗೆ ವಿಚಾರಣಾಧಿಕಾರಿಯವರು ವಿಚಾರಣಾ ವರದಿ ಸಲ್ಲಿಸಿದ್ದು, ಈ ವಿಚಾರಣಾ ವರದಿಯಲ್ಲಿ ಆರೋಪಿತರಾದ ಶ್ರೀ ಬಿ.ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ ಇವರಿಗೆ ಅನೇಕ ಅವಕಾಶಗಳನ್ನು ನೀಡಿದ ನಂತರವೂ ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ; ಶಿಸ್ತು ಪ್ರಾಧಿಕಾರ ಪರ ಹಾಜರಾದ ಸಾಕ್ಷಿಯು ಹಾಜರುಪಡಿಸಿದ ದಾಖಲೆಗಳ ಅನುಸಾರ ಆರೋಪಿ ವಿರುದ್ಧ ಮಾಡಲಾದ ಎರಡು ಆರೋಪಗಳಲ್ಲಿ 1ನೇ ಆರೋಪವಾದ ನಿಗದಿತವಾಗಿ ಆಸ್ತಿ ಮತ್ತು ಋಣ ಪಟ್ಟಿ ಸಲ್ಲಿಸದಿರುವ ಆರೋಪವು ಸಾಬೀತಾಗಿರುತ್ತದೆಂದು ಹಾಗೂ 2ನೇ ಆರೋಪವಾದ ಲೇವಾದೇವಿ ಮಾಡಿದ ಆರೋಪವು ಸಾಕ್ಷಿಗಳ ಗೈರುಹಾಜರಿಯಿಂದಾಗಿ ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ದಿನಾಂಕ : 21-01-2010ರ 2ನೇ ಕಾರಣ ನೋಟೀಸಿನಲ್ಲಿ ಆರೋಪಿತರಾದ ಶ್ರೀ ಬಿ.ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ ಇವರಿಗೆ ಇಲಾಖಾ ವಿಚಾರಣೆಯ ಪ್ರತಿಯನ್ನು ನೀಡಿ ಈ ಬಗ್ಗೆ ಅಹವಾಲು ಏನಾದರೂ ಇದ್ದಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಆದರೆ ನೋಟೀಸ್ ಸ್ವೀಕರಿಸಿದ ಆರೋಪಿತ ಅಧಿಕಾರಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದುದರಿಂದ, ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಶ್ರೀ ಬಿ.ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ ಇವರಿಗೆ ಸಾಬೀತಾದ ಆರೋಪಗಳಿಗನುಗುಣವಾಗಿ ದಂಡನೆಯನ್ನು ವಿಧಿಸಲು ತೀರ್ಮಾನಿಸಿ, ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 195 ಎಸ್‌ಇಎನ್ 2007, ಬೆಂಗಳೂರು, ದಿನಾಂಕ : 18 ನೇ ಆಗಸ್ಟ್ 2010

ಶ್ರೀ ಬಿ.ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಸ್ತುತ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಜನಸ್ಪಂದನ ಕೋಶ) ಇವರಿಗೆ ಮೇಲ್ಕಂಡಂತೆ ಸಾಬೀತಾದ ಆರೋಪಗಳಿಗಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (iii) ರ ಅನ್ವಯ ಒಂದು ವೇತನ ಬಡ್ತಿಯನ್ನು ಸಂಚಿತ ಪರಿಣಾಮರಹಿತವಾಗಿ ತಡೆ ಹಿಡಿಯುವ ದಂಡನೆಯನ್ನು ವಿಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು-3)

ಪಿ.ಆರ್. 2308

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಂ.ಎಸ್. ನಟರಾಜಮೂರ್ತಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು- ಇವರಿಗೆ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಗೌರವಧನ ಹಾಗೂ ವಾಹನ ಭತ್ಯೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂ : ಸಿಆಸುಇ 7 ಎಸ್‌ಇಎನ್ 2002 ದಿನಾಂಕ : 9-2-2007
2. ವಿಚಾರಣಾಧಿಕಾರಿ ರವರ ವರದಿ ದಿ : 18-05-2010
3. ವಿಚಾರಣಾಧಿಕಾರಿ ರವರ ಮನವಿ ದಿ : 18-05-2010

* * *

ಪ್ರಸ್ತಾವನೆ :

ಮೇಲೆ ಕ್ರಮ ಸಂ (1) ರಲ್ಲಿ ಓದಲಾದ ಆದೇಶದಲ್ಲಿ ಬಳ್ಳಾರಿ ಜಿಲ್ಲಾ ಪಂಚಾಯತ್‌ನಲ್ಲಿ ಶ್ರೀ ಎಸ್. ಹನುಮಂತಪ್ಪ, ಕೆ.ಎ.ಎಸ್. (ನಿವೃತ್ತ) ಅಂದಿನ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಶ್ರೀ ಈರಪ್ಪ, ಕೆ.ಎ.ಎಸ್. ಶ್ರೀ ದೊಡ್ಡಎರ್ರಣ್ಣ, ಸೂಪರಿಂಟೆಂಡೆಂಟ್. ಶ್ರೀ ಜಿ. ಕೃಷ್ಣಮೂರ್ತಿ, ಪ್ರ.ದ.ಸ. ಶ್ರೀ ಎ. ವಿಜಯಕುಮಾರ್, ಪ್ರ.ದ.ಸ. ಶ್ರೀ ಪಕ್ಕೀರಪ್ಪ ಕುಮಾರ್, ಪ್ರ.ದ.ಸ. ಶ್ರೀ ಮಹಮ್ಮದ್ ರಫೀಕ್, ದ್ವಿ.ದ.ಸ. ಮತ್ತು ಶ್ರೀಮತಿ. ಎ.ಎಲ್. ಶ್ರೀವಳ್ಳಿ, ರವರು ಬೆರಳಚ್ಚುಗಾರ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ದಿ : 01-07-1984 ರ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗೂಲಿ

ನೌಕರರನ್ನು ಸೇವೆಯಲ್ಲಿ ಸಕ್ರಮಗೊಳಿಸಲು ದಿ : 23-11-2000ರ ಸರ್ಕಾರದ ಯೋಟಾ ಆದೇಶವನ್ನು ಸೃಷ್ಟಿಸಿ ಜಾರಿಗೊಳಿಸಿರುವ ಮತ್ತು ಇದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟು ಮಾಡಿರುವ ಆರೋಪಗಳ ಕುರಿತು ಇಲಾಖಾ ವಿಚಾರಣೆ ನಡೆಸಲು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಶ್ರೀ ಎಂ.ಎಸ್. ನಟರಾಜಮೂರ್ತಿ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಈ ಪ್ರಕರಣದಲ್ಲಿ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂ : (2) ರಲ್ಲಿ ಓದಲಾದ ದಿ : 18-05-2010ರಲ್ಲಿ ವಿಚಾರಣೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂ (3) ರಲ್ಲಿ ಓದಲಾದ ಮನವಿಯಲ್ಲಿ ವಿಚಾರಣಾಧಿಕಾರಿಯವರು ವಿಚಾರಣೆಯನ್ನು ನಡೆಸಿರುವ ಸಂಬಂಧ ಗೌರವಧನ ಹಾಗೂ ಪ್ರಯಾಣ ಭತ್ಯೆ ಮಂಜೂರು ಮಾಡುವಂತೆ ಕೋರಿರುತ್ತಾರೆ. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂ : ಸಿಆಸುಇ 07 ಎಸ್‌ಇಎನ್ 02,(ಸಿಆಸುಇ 220 ಕೆಇಪಿ 07) ಬೆಂಗಳೂರು, ದಿನಾಂಕ : 26 ನೇ ಆಗಸ್ಟ್ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಶ್ರೀ ಎಂ.ಎಸ್. ನಟರಾಜಮೂರ್ತಿ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಬೆಂಗಳೂರು ಇವರಿಗೆ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸಲ್ಲಿಸಿದ್ದಕ್ಕಾಗಿ ಸರ್ಕಾರಿ ಆದೇಶ ಸಂ : ಸಿಆಸುಇ 16 ಸೇಇವಿ 05 ದಿ : 23-08-05 ರನ್ವಯ ರೂ : 6000.00 (ಆರು ಸಾವಿರ ರೂಪಾಯಿಗಳು ಮಾತ್ರ) ಗೌರವಧನವನ್ನು ಹಾಗೂ ಸರ್ಕಾರಿ ಆದೇಶ ಸಂ : ಸಿಆಸುಇ 45 ಸೇಇವಿ 01 ದಿ ; 04-03-02 ರನ್ವಯ ರೂ : 1000.00 (ಒಂದು ಸಾವಿರ ರೂಪಾಯಿಗಳು ಮಾತ್ರ)ಗಳ ಪ್ರಯಾಣ ಭತ್ಯೆಯನ್ನು ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ 2052-ಸಚಿವಾಲಯ ಸಾಮಾನ್ಯ ಸೇವೆಗಳು-090-ಸಚಿವಾಲಯ -01 ಕರ್ನಾಟಕ ಸರ್ಕಾರ ಸಚಿವಾಲಯ-051-ಸಾಮಾನ್ಯ ವೆಚ್ಚಗಳು ರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು-2)

ಪಿ.ಆರ್. 2309

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ. ಅಂದಾನಯ್ಯ, ಎ.ಪಿ.ಸಿ.-181, ಮಂಡ್ಯ ಜಿಲ್ಲಾ ಸಶಸ್ತ್ರ ಪಡೆ, ಮಂಡ್ಯ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೋಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ (2) ಡಿಇ/24/2008-09, ಓ.ಬಿ. 208/09-10, ದಿನಾಂಕ 16-10-2009
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೋಲೀಸ್ ಮಹಾನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರ ಆದೇಶ ಸಂಖ್ಯೆ : ಅಪೀಲು/59/ಮೈಸೂರು 2009-10 ಓ.ಬಿ. : ಸಂ. 58/09-10, ದಿನಾಂಕ 05-3-2010.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 17-4-2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಅಪೀಲು(2)10/2010-11, ದಿನಾಂಕ 14-6-2010.

***

ಪ್ರಸ್ತಾವನೆ :

ಶ್ರೀ ಕೆ. ಅಂದಾನಯ್ಯ, ಎ.ಪಿ.ಸಿ. ಜೀಪು ಚಾಲಕ, ಜಿಲ್ಲಾ ಸಶಸ್ತ್ರ ಪಡೆ, ಮಂಡ್ಯ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ದುರ್ನಡತೆ ಪ್ರದರ್ಶಿಸಿ, ಕರ್ತವ್ಯದಲ್ಲಿ ಲೋಪವೆಸಗಿರುವ ಕಾರಣದ ಮೇಲೆ ಇನ್ನೋರ್ವ ಸಿಬ್ಬಂದಿಯೊಂದಿಗೆ ಕರ್ನಾಟಕ ರಾಜ್ಯ ಪೋಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ 6 ರಡಿಯಲ್ಲಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಶ್ರೀ ಕೆ. ಅಂದಾನಯ್ಯ, ಎ.ಪಿ.ಸಿ.-181 ಹಾಗೂ ಶ್ರೀ ಕುಮಾರಸ್ವಾಮಿ, ಎ.ಪಿ.ಸಿ.-182, ಚಾಲಕರುಗಳು, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿಮ್ಮಗಳನ್ನು ಮದ್ದೂರು ಜೀವನ ರಕ್ಷಾ ಕೇಂದ್ರಕ್ಕೆ ಹಂಚಿಕೆ ಮಾಡಿರುವ ಪೋಲೀಸ್ ಟಾಟಾ ಸ್ಪಿಸಿಯೋ ಜೀಪ್ ನಂ. ಕೆಎ-11ಜಿ-266 ವಾಹನಕ್ಕೆ ಚಾಲಕರಾಗಿ ನಿಯೋಜಿಸಿದ್ದು ನೀವುಗಳು ದಿನಾಂಕ 01-3-2008 ರಿಂದ ದಿನಾಂಕ 21-03-2008 ರವರೆಗೆ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ದಿನಾಂಕ 21-3-2008 ರಂದು ನೀವುಗಳು ಎಪಿಸಿ-118 ಎಸ್. ಮಂಚೇಗೌಡ ರವರಿಗೆ ಮೇಲ್ಕಂಡ ಜೀಪಿನ ಚಾರ್ಜನ್ನು ವಹಿಸಿಕೊಡುವಾಗ ಮೇಲ್ಕಂಡ ಜೀಪಿನ ಸ್ಪೀಡೋ ಮೀಟರ್‌ನಲ್ಲಿರುವ 1,76,117 ಕಿಲೋಮೀಟರನ್ನು ನಮೂದಿಸಿ ಚಾರ್ಜನ್ನು ವರದಿಯಲ್ಲಿ ನೀಡಿರುತ್ತೀರಿ. ಆದರೆ ಲಾಗ್ ಪುಸ್ತಕದಲ್ಲಿ 1,76,117ಕ್ಕೆ ಬದಲಾಗಿ 1,77,464 ಎಂದು ಲಾಗ್ ಪುಸ್ತಕದಲ್ಲಿ ಶ್ರೀ ಕೆ. ಅಂದಾನಯ್ಯ, ಎ.ಪಿ.ಸಿ.-181, ಹಾಗೂ ಶ್ರೀ ಕುಮಾರಸ್ವಾಮಿ, ಎಪಿಸಿ-182, ಆದ ನೀವುಗಳು ತಮ್ಮಿಷ್ಟ

ಬಂದಂತೆ ಬರೆದು ಒಟ್ಟು 1347 ಕಿಲೋಮೀಟರ್ ಗಳನ್ನು ಹೆಚ್ಚುವರಿಯಾಗಿ ಬರೆದು ಸದರಿ ಹೆಚ್ಚುವರಿ ಕಿಲೋಮೀಟರ್‌ಗೆ ಸಂಬಂಧಪಟ್ಟಂತೆ 137 ಲೀಟರ್ ಡೀಸೆಲ್‌ನ್ನು ಹೆಚ್ಚುವರಿಯಾಗಿ ಬರೆದು ಸದರಿ ಹೆಚ್ಚುವರಿ ಡೀಸೆಲ್‌ಗೆ ಲೀಟರ್ ಒಂದಕ್ಕೆ ರೂ. 36-40 ಪೈಸೆಯಂತೆ ಒಟ್ಟು ರೂ. 4914-00 ರೂ.ಗಳನ್ನು ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ನಿಮ್ಮಗಳ ಕರ್ತವ್ಯದಲ್ಲಿ ಅತೀವ ದುರ್ನಡತೆ ಪ್ರದರ್ಶಿಸಿ ಕರ್ತವ್ಯದಲ್ಲಿ ಲೋಪವೆಸಗಿರುತ್ತೀರಿ"

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ : (1)ರಲ್ಲಿ ಓದಲಾದ ದಿನಾಂಕ 16-10-2009ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ 05-3-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 60 ಪೊಸಿಅ 2010, ಬೆಂಗಳೂರು, ದಿನಾಂಕ: 28-8-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಅಂದಾನಯ್ಯ, ಎ.ಪಿ.ಸಿ., ಜೀಪು ಚಾಲಕ, ಜಿಲ್ಲಾ ಸಶಸ್ತ್ರ ಪಡೆ, ಮಂಡ್ಯ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 2330

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಂಗ ಅಧಿಕಾರಿಗಳಿಗೆ Robe Allowance ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : 1) ಸರ್ಕಾರಿ ಆದೇಶ ಸಂಖ್ಯೆ ಲಾ 124 ಎಲ್‌ಎಸಿ 1997, ದಿನಾಂಕ 17-11-2004

2) ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 3388 ಲೆಪ-ಐಆರ್‌ಎಲ್‌ಎ 2009, ದಿನಾಂಕ 15-6-2010

***

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ನ್ಯಾಯಾಂಗ ಇಲಾಖೆಗೆ ಸೇರಿದ ಅಧಿಕಾರಿಗಳಿಗೆ (ಜ್ಯುಡಿಷಿಯಲ್ ಆಫೀಸರ್ಸ್) ಐದು (5) ವರ್ಷಗಳಿಗೊಮ್ಮೆ ರೂ. 5,000-00 ರಂತೆ Robe Allowance ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಸರ್ಕಾರಿ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಂಗ ಅಧಿಕಾರಿಗಳಿಗೆ Robe Allowance ಮಂಜೂರು ಮಾಡುವ ಬಗ್ಗೆ ಮಂಜೂರಾತಿ ಆದೇಶವನ್ನು ಹೊರಡಿಸಬೇಕೆಂದು ಮೇಲೆ (2)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಿಆಸುಇ (ಲೆಕ್ಕಪತ್ರ-ಐಆರ್‌ಎಲ್‌ಎ) ಶಾಖೆಯು ಕೋರಿರುತ್ತದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 421 ಸಅಸೇ 2010, ಬೆಂಗಳೂರು, ದಿನಾಂಕ: 1-9-2010

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರಿ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಮೀನಾಕ್ಷಿ ಎಂ. ಜಾನಿ, ಕಾನೂನು ಕೋಶದ ಮುಖ್ಯಸ್ಥರು ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಐದು ವರ್ಷಗಳಿಗೊಮ್ಮೆ ನೀಡಬೇಕಾದ ರೂ. 5,000/- ರಂತೆ (ರೂಪಾಯಿ ಐದು ಸಾವಿರಗಳು ಮಾತ್ರ) Robe Allowance ಅನ್ನು ಮಂಜೂರು ಮಾಡಲಾಗಿದೆ.

ಈ ವೆಚ್ಚವನ್ನು ಸಚಿವಾಲಯಕ್ಕೆ ಸಂಬಂಧಿಸಿದ Salary Head other allowances ನಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಪಿ.ಆರ್. 2331

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ನಾರಾಯಣಸ್ವಾಮಿ, ಕೆ.ಎ.ಎಸ್. (ನಿ) ಅಧಿಕಾರಿ ಹಾಗೂ ಶ್ರೀ ಎಸ್. ವೈ. ಬಸವರಾಜಪ್ಪ, ಯೋಜನಾ ನಿರ್ದೇಶಕರು ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಶ್ರೀ ಎಸ್. ವೈ. ಬಸವರಾಜಪ್ಪ, ಯೋಜನಾ ನಿರ್ದೇಶಕರು, ಇವರಿಗೆ ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 24 ಎಸ್ಇಎನ್ 07, ದಿನಾಂಕ 11-06-2007 ಮತ್ತು ದಿನಾಂಕ 04-08-2007.

2) ವಿಚಾರಣಾಧಿಕಾರಿಗಳ ವರದಿ ದಿನಾಂಕ 24-07-2009

***

ಪ್ರಸ್ತಾವನೆ :

ಶ್ರೀ ನಾರಾಯಣಸ್ವಾಮಿ, ನಿವೃತ್ತ ಕೆ.ಎ.ಎಸ್. ಅಧಿಕಾರಿ ಇವರು ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಹಾಗೂ ಶ್ರೀ ಎಸ್. ವೈ. ಬಸವರಾಜಪ್ಪ ಇವರು ಯೋಜನಾ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ 2004-05 ಮತ್ತು 2006-07ರ ಅವಧಿಯಲ್ಲಿ ನಿಯಮಗಳನ್ನು ಪಾಲಿಸದೇ ಎಸ್.ಜಿ.ಎಸ್.ವೈ ಯೋಜನೆಯ ಪ್ರಚಾರ ಸಾಮಗ್ರಿಗಳ ಪೂರೈಕೆಗೆ ಆದೇಶ ನೀಡಿದ ಆರೋಪ ಅರ್ಪಿತ ರೂರಲ್ ಮತ್ತು ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ ಚಳ್ಳಕೆರೆ ಇವರಿಂದ ಎಸ್.ಜಿ.ಎಸ್.ವೈ. ಯೋಜನೆಗಳ ಮಾರ್ಗಸೂಚಿ ಬಗ್ಗೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪ್ರಚಾರ ಮಾಡಲು ಪ್ರಚಾರ ಸಾಮಗ್ರಿಗಳನ್ನು ಖರೀದಿಸಿದ ಆರೋಪ ಮತ್ತು ರೂ. 1.0 ಲಕ್ಷಗಳಿಗೂ ಮೇಲ್ಪಟ್ಟ ಖರೀದಿಗೆ ಟೆಂಡರ್ ಕರೆಯುವುದು ಕಡ್ಡಾಯವಾಗಿದ್ದರೂ ಟೆಂಡರ್ ಕರೆಯದೇ ಪ್ರಚಾರ ಸಾಮಗ್ರಿಗಳನ್ನು ಅವಶ್ಯಕತೆ ಇಲ್ಲದೇ ಇದ್ದರೂ ಟಿನ್‌ಪ್ಲೇಟ್‌ಗಳನ್ನು ಖರೀದಿಸಿದ ಆರೋಪ ಮತ್ತು 195 ಗ್ರಾಮ ಪಂಚಾಯತಿಗಳಿಗೆ ಅಗತ್ಯ ಪ್ರಚಾರ ಸಾಮಗ್ರಿಗಳನ್ನು ಖರೀದಿಸದೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪೋಸ್ಟರ್ ಟಿನ್ ಪ್ಲೇಟುಗಳ ಖರೀದಿಸಿದ ಆರೋಪಗಳ ಕುರಿತು ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರಿ ಆದೇಶದಲ್ಲಿ ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 24-07-2009ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿ ಶ್ರೀ ನಾರಾಯಣಸ್ವಾಮಿ, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಹಾಗೂ ಶ್ರೀ ಎಸ್. ವೈ. ಬಸವರಾಜಪ್ಪ, ಯೋಜನಾ ನಿರ್ದೇಶಕರು ಇವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿದೆಯೆಂದು ವರದಿಯನ್ನು ನೀಡಿರುತ್ತಾರೆ.

ವಿಚಾರಣಾ ವರದಿಯನ್ನು ಆರೋಪಿತ ಅಧಿಕಾರಿಗಳಿಗೆ ಎರಡನೇ ಕಾರಣಕೇಳುವ ನೋಟೀಸ್ ಮೂಲಕ ಒದಗಿಸಲಾಗಿತ್ತು ಇದಕ್ಕೆ ಉತ್ತರವಾಗಿ ಶ್ರೀ ನಾರಾಯಣಸ್ವಾಮಿ. ಕೆ.ಎ.ಎಸ್. (ನಿವೃತ್ತ) ಅಧಿಕಾರಿರವರು ಪ್ರಕರಣದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟವಾಗಿರುವುದಿಲ್ಲವೆಂದು ಹಾಗೂ ತಾವು ಸದುದ್ದೇಶದಿಂದ ಕಾರ್ಯನಿರ್ವಹಿಸಿರುವುದರಿಂದ ತಮ್ಮನ್ನು ಆರೋಪದಿಂದ ಮುಕ್ತಗೊಳಿಸಲು ಕೋರಿದ್ದಾರೆ.

ಹಾಗೆಯೇ ಶ್ರೀ ಎಸ್. ವೈ. ಬಸವರಾಜಪ್ಪರವರು ಉತ್ತರ ನೀಡಿ ತಾವು ತಮ್ಮ ಮೇಲಾಧಿಕಾರಿಗಳ ಆದೇಶದಂತೆ ಸದ್ಭಾವನಾ ಮನೋಭಾವದಿಂದ ಪ್ರಾಮಾಣಿಕವಾಗಿಯೂ ಕರ್ತವ್ಯ ನಿರ್ವಹಿಸಿರುವುದರಿಂದ ತಮ್ಮನ್ನು ಆರೋಪ ಮುಕ್ತಗೊಳಿಸಲು ಕೋರಿರುತ್ತಾರೆ. ಇದನ್ನು ಸರ್ಕಾರವು ಪರಿಶೀಲಿಸಿ ಈ ಆರೋಪಿತರು ಸರ್ಕಾರದ ಅನುಮೋದನೆಯಿಲ್ಲದೇ ಪ್ರಚಾರ ಸಾಮಗ್ರಿಗಳನ್ನು ಖರೀದಿಸಿರುವುದು ಹಾಗೂ ಬೇಡಿಕೆ ಪತ್ರಗಳನ್ನು ಪಡೆಯದೆ ಹಾಗೂ ಅವಶ್ಯಕತೆಗೆ ಅನುಸಾರವಾಗಿ ಸಾಮಗ್ರಿಗಳನ್ನು ಖರೀದಿಸದೆ ಸ್ವಪ್ರೇರಣೆಯಿಂದ ಪ್ರಚಾರ ಸಾಮಗ್ರಿಗಳನ್ನು ಖರೀದಿಸಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗುವುದರಿಂದ ವಿಚಾರಣಾ ವರದಿಯನ್ನು ಒಪ್ಪಿಕೊಳ್ಳಲು ಸರ್ಕಾರವು ತೀರ್ಮಾನಿಸಿದೆ. ಪ್ರಕರಣದಲ್ಲಿ ಆರೋಪಿತರಾಗಿರುವ ಶ್ರೀ ನಾರಾಯಣಸ್ವಾಮಿ, ಕೆ.ಎ.ಎಸ್. ರವರು ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರಿಗೆ ದಂಡನೆ ವಿಧಿಸಲು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಪ್ರತ್ಯೇಕವಾಗಿ ಆಯೋಗಕ್ಕೆ ಪತ್ರ ಬರೆಯಲಾಗುತ್ತಿದೆ, ಕಾರಣ ಶ್ರೀ ಎಸ್. ವೈ. ಬಸವರಾಜಪ್ಪ ಇವರಿಗೆ ಸಂಬಂಧಿಸಿದಂತೆ ವಿಚಾರಣಾ ವರದಿಯನ್ನು ಅಂಗೀಕರಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 24 ಎಸ್ಇಎನ್ 2007 (ಸಿಆಸುಇ 147 ಕೆಇವಿ 2007), ಬೆಂಗಳೂರು, ದಿನಾಂಕ: 26-8-2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(iii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಸ್. ವೈ. ಬಸವರಾಜಪ್ಪ, ಹಿಂದಿನ ಯೋಜನಾ ನಿರ್ದೇಶಕರು ಡಿ.ಆರ್.ಡಿ.ಎ. ಕೋಶ ಚಿತ್ರದುರ್ಗ ಹಾಲಿ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಕಚೇರಿ, ಮಡಿಕೇರಿ ಇವರಿಗೆ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ (with cumulative effect) ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ. .

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-2)

ಪಿ.ಆರ್. 2332

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಬಿ. ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : 1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ) ಎಲ್-73/ಸಿಆರ್-14/2008/ಬಿಜಿಕೆಟಿ, ದಿನಾಂಕ 29-06-2010.

2) ತನಿಖಾಧಿಕಾರಿಯವರ ವರದಿ ದಿನಾಂಕ 20-05-2010

3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

***

ಪ್ರಸ್ತಾವನೆ :

ಶ್ರೀ ಬಿ. ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ಗುನ್ಹೆ ಸಂಖ್ಯೆ : 14/2008 ರಲ್ಲಿ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಬಿಜಾಪುರ, ಇಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು (ಪೊಲೀಸ್ ವಿಭಾಗ) ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (1)ರ ಪತ್ರ ದಿನಾಂಕ 29-06-2010ರೊಡನೆ ಕಳುಹಿಸುತ್ತಾ ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಸಿ) ರಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ದಿನಾಂಕ 29-06-2010ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1) ಶ್ರೀ ಸುಬ್ರಮಣಿಯನ್, ತಂದೆ ಸುಂದರಂ, ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್ ಪ್ರಾಜಕ್ಟ್ ಇನ್ ಚಾರ್ಜ್ ಹಾಲವರ್ತಿ, ತಾ/ಜಿ ಕೊಪ್ಪಳ ಹಾಗೂ ಶ್ರೀ ಕೆ. ಮಣಿ, ಪ್ರಾಜಕ್ಟ್ ಇಂಜನಿಯರ್ ಇವರ ದೂರು ದಿನಾಂಕ 10-12-2008.
2) ಪ್ರಥಮ ವರ್ತಮಾನ ವರದಿ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಬಾಗಲಕೋಟೆ ಪ್ರಕರಣದ ಸಂಖ್ಯೆ 14/2008.
3) ಪ್ರಾಯೋಗಿಕ ಪಂಚನಾಮೆ ದಿನಾಂಕ 11-12-2008
4) ಟ್ರ್ಯಾಪ್‌ನ ಮಹಜರ್ ದಿನಾಂಕ 11-12-2008
5) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ : ಪಿಹೆಚ್‌ಐ/ಸಿಎಂಇ/ಲೋಕ್-144/2008-09, ದಿನಾಂಕ 16-12-2008.
6) ಕೃತ್ಯ ನಡೆದ ಸ್ಥಳದ ನಕಾಶೆ :
7) **ಸಾಕ್ಷಿ ಹೇಳಿಕೆಗಳ ಪಟ್ಟಿ :**
    1. ಶ್ರೀ ಸುಬ್ರಮಣಿಯನ್, ತಂದೆ ಸುಂದರಂ, ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್ ಪ್ರಾಜಕ್ಟ್ ಇನ್‌ಚಾರ್ಜ್ ಹಾಲವರ್ತಿ, ತಾ/ಜಿ ಕೊಪ್ಪಳ – ಫಿರ್ಯಾದಿ.
    2. ಶ್ರೀ ಸಂಗಮೇಶ ಭೀಮಶಿ ಮುಂಡರಗಿ ಪ್ರ.ದ.ಸ., ಸಬ್‌ರಿಜಿಸ್ಟ್ರಾರ್ ಆಫೀಸ್, ಬಾಗಲಕೋಟೆ
    3. ಶ್ರೀ ಶಂಕರ ತಂದೆ ವಿಶ್ವನಾಥ ಮಠದ, ದ್ವಿ.ದ.ಸ., ತಹಶೀಲ್ದಾರರ ಕಾರ್ಯಾಲಯ, ಬಾಗಲಕೋಟೆ
    4. ಶ್ರೀ ಶಬ್ಬೀರ ಹುಸೇನಿ ತಂದೆ ಸೈಯದ ಮೆಹಮೂದ ಹುಸೇನಿ ಸಾ: ಕೊಪ್ಪಳ ತಗ್ಗಿನಕೇರಿ
    5. ಶ್ರೀ ಕೆ. ಮಣಿ, ಇಂಜನಿಯರ್, ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್
    6. ಶ್ರೀ ಶಿವಪಾಲ ಅನುರಾಗಿ ತಂದೆ ಪ್ರೇಮಕುಮಾರ ಅನುರಾಗಿ, ಲಾರಿ ನಂ. ಸಿಜೆ-04/ಡಿಎ:2645ರ ಚಾಲಕ.
    7. ಶ್ರೀ ಚಂದ್ರಶೇಖರ ಚಂಗಪ್ಪ ದಳವಾಯಿ, ವಾಣಿಜ್ಯ ತೆರಿಗೆ ಅಧಿಕಾರಿಗಳು ಧೂಳಖೇಡ ಚೆಕ್ ಪೋಸ್ಟ್
    8. ಶ್ರೀ ರಾಮಸ್ವಾಮಿ ಪಡೆಯಪ್ಪ ಸೌದತ್ತಿ, ವಾಣಿಜ್ಯ ತೆರಿಗೆ ಪರಿವೀಕ್ಷಕರು, ಧೂಳಖೇಡ ಚೆಕ್‌ಪೋಸ್ಟ್
    9. ಶ್ರೀ ಈರಪ್ಪ ಗುಂಡಪ್ಪ ಮೆಡ್ಲಿ, ದ್ವಿ.ದ.ಸ., ಧೂಳಖೇಡ ಚೆಕ್‌ಪೋಸ್ಟ್
    10. ಶ್ರೀ ಅರ್ಜುನ ಆನಂದಪ್ಪ ಕೌಟೇಕರ ಸಿಪಾಯಿ, ಧೂಳಖೇಡ ಚೆಕ್‌ಪೋಸ್ಟ್
    11. ಶ್ರೀ ಸಂಗಪ್ಪ ರಾಮಣ್ಣ ಪೂಜಾರಿ, ವಾಣಿಜ್ಯ ತೆರಿಗೆ ಅಧಿಕಾರಿ ಧೂಳಖೇಡ ಚೆಕ್‌ಪೋಸ್ಟ್
    12. ಶ್ರೀ ಮುಕುಂದ ದಾಮೋದರ ನಾಯಿಕ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಉತ್ತರ ವಲಯ, ಬೆಳಗಾಂವ.
    13. ಶ್ರೀ ಜಗದೀಶ ಶಿವಾಜಿ ನಾರಾಯಣಕರ, ಎ.ಇ., ಪಿಡಬ್ಲ್ಯೂಡಿ, ಇಂಡಿ
    14. ಶ್ರೀ ಆರ್. ಎಮ್. ಚವಲಕರ, ದಲಾಯತ್, ಕೆ.ಎಲ್.ಎ., ಬಾಗಲಕೋಟೆ
    15. ಶ್ರೀ ಐ. ಎಂ. ದುಂಡಿಸಿ, ಪಿ.ಸಿ. ಕೆ.ಎಲ್.ಎ., ಬಾಗಲಕೋಟೆ
    16. ಶ್ರೀ ಆರ್. ಎಸ್. ಹೂಗಾರ, ಪಿ.ಸಿ. ಕೆ.ಎಲ್.ಎ.. ಬಾಗಲಕೋಟೆ
    17. ಶ್ರೀ ಎಸ್. ಐ. ಬಿಳೇಕುದುರಿ, ಪಿ.ಸಿ. ಕೆ.ಎಲ್.ಎ., ಬಾಗಲಕೋಟೆ
    18. ಶ್ರೀಮತಿ ಎಸ್.ಎಸ್.ಕೋರ್ತಿ, ಮಹಿಳಾ ಪೇದೆ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ
    19. ಶ್ರೀ ಎಸ್. ಪಿ. ಇನಾಮದಾರ, ಪಿ.ಸಿ. ಕೆ.ಎಲ್.ಎ., ಬಾಗಲಕೋಟೆ
    20. ಶ್ರೀ ಕೆ.ವಿ. ಕುಲಕರ್ಣಿ, ಎಚ್.ಸಿ. ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.

ಈ ಪ್ರಕರಣದಲ್ಲಿ ಫಿರ್ಯಾದಿಯು ತಮ್ಮ ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್ ಮೆಷಿನುಗಳನ್ನು ಛತ್ತೀಸ್ ಗಡ ರಾಜ್ಯದ ರಾಯಪುರದಲ್ಲಿ ಖರೀದಿಸಿ ಲಾರಿ ನಂ. ಸಿಜಿ 04 ಡಿಎ 2645 ರಲ್ಲಿ ಲೋಡ್ ಮಾಡಿಸಿ ಕೊಪ್ಪಳದ ಕಡೆಗೆ ತರುವಾಗ, ಇದರಲ್ಲಿ ಆಪಾದಿತ ಅಧಿಕಾರಿಗಳು ಲಾರಿಯನ್ನು ಘೂಳಕೇಡ ಚೆಕ್‌ಪೋಸ್ಟ್‌ನಲ್ಲಿ ನಿಲ್ಲಿಸಿ, ಲಾರಿಯಲ್ಲಿನ ಮೆಶಿನರಿ ಚೆಕ್ ಮಾಡಿ ಲಾರಿ ಬಿಡಲು ಫಿರ್ಯಾದಿಗೆ 5.00 ಲಕ್ಷ ರೂ.ಗಳ ಲಂಚ ಕೇಳಿ ಪಡೆದುಕೊಂಡ ಅಪರಾಧವಾಗಿರುತ್ತದೆ.

ತನಿಖಾಧಿಕಾರಿಯುವರಾದ ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ ಇವರು ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಸಲ್ಲಿಸಿರುವ ಅಂತಿಮ ತನಿಖಾ ವರದಿಯ ಪರಿಶೀಲನೆಯಿಂದ ಆಪಾದಿತ ಅಧಿಕಾರಿಯಾದ ಶ್ರೀ ಬಿ. ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಇವರ ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2) ರಡಿಯಲ್ಲಿ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ ಸದರಿ ಆಪಾದಿತ ಅಧಿಕಾರಿಯುವರು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಲು ಅರ್ಹರಾಗಿರುತ್ತಾರೆ. ಆದುದರಿಂದ ಸರ್ಕಾರದ ಪೂರ್ವಾನುಮತಿ ಅಗತ್ಯವಾಗಿರುತ್ತದೆ ಎಂದು ಅಪರ ಪೋಲೀಸ್ ಮಹಾನಿರ್ದೇಶಕರು. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಕೋರಿರುತ್ತಾರೆ.

ಆದುದರಿಂದ ಆಪಾದಿತ ಅಧಿಕಾರಿಯನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ ಈ ಪತ್ರದೊಂದಿಗೆ ತನಿಖಾ ವರದಿಯ ನೆರಳಚ್ಚು ಪ್ರತಿ ಪ್ರಥಮ ವರ್ತಮಾನ ವರದಿಯ ಪ್ರತಿ ಟ್ರ್ಯಾಪ್ ಪೂರ್ವದ ಮಹಜರ್, ಟ್ರ್ಯಾಪ್‌ನ ನಡವಳಿಗಳು, ರಾಸಾಯನಿಕ ತಜ್ಞರ ವರದಿ, ವಶಪಡಿಸಿಕೊಂಡ ದಾಖಲೆಗಳ ಪ್ರತಿ, ಕೃತ್ಯನಡೆದ ಸ್ಥಳದ ನಕ್ಷೆ, ದಾಖಲೆಗಳ ಪ್ರತಿಗಳು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಕಳುಹಿಸಿರುತ್ತಾರೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಕೃತ್ಯನಡೆದ ಸ್ಥಳದ ನಕ್ಷೆ, ಆರೋಪಿತರ ಸೇವಾ ವಿವರಗಳು, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಬಿ. ಎಂ. ಪದ್ಮನಾಭ ವಾಣಿಜ್ಯ ತೆರಿಗೆ ಅಧಿಕಾರಿಯನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1)(ಡಿ) ಜೊತೆಗೆ 13(2)ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 34 ವಾತೆತ 2010, ಬೆಂಗಳೂರು, ದಿನಾಂಕ: 25–08–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ. ಆರ್. ಚಂದ್ರಶೇಖರಾರಾಧ್ಯ, ಪೀಠಾಧಿಕಾರಿ, ಆರ್ಥಿಕ ಇಲಾಖೆ, ವಾಣಿಜ್ಯ ತೆರಿಗೆ–2 ಶಾಖೆ ಆದ ನಾನು ಆಪಾದಿತ ಅಧಿಕಾರಿಯಾದ ಶ್ರೀ ಬಿ. ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು. 1977ರ ನಿಯಮ 18ರ ಪ್ರಕಾರ, ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ 25–08–2010 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಆರ್. ಚಂದ್ರಶೇಖರಾರಾಧ್ಯ
ಪೀಠಾಧಿಕಾರಿ
ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2)

ಪಿ.ಆರ್. 2333

ENERGY SECRETARIAT

Sub :- Change of company's name from M/s Prolight Systems to M/s Mimesis Hydel Projects Private Limited-reg.

Read :-
1. Government Order No. : EN 324 NCE 2007, dated 16-09-2009
2. Government Order No. : EN 330 NCE 2007, dated 16-09-2009
3. Letters No. KRED/06/Huligere MHS/2010/2266 dated 30-07-2010 and KRED/06/Harakodage MHS/2010/2267 dated 30-07-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above approval has been accorded for implementation of 2.00 MW mini hydel power project across Bhadra River NR Pura Taluk, Chikamagalur District to M/s Prolight Systems.

In the Government Order read at (2) above, approval has been accorded for implementation of 2.00 MW mini hydel power project across Bhadra River NR Pura Taluk, Chikamagalur District to M/s Prolight Systems.

The registrar of Companies, Bangalore, Karnataka has issued a certificate of incorporation for Mimesis Hydel Projects Private Limited vide CIN No. : U40101KA2008PTC047322 dated : 29-07-2008.

In the letters read at (3) above, the Managing Director, Karnataka Renewable Energy Development Limited, Bangalore has sent a proposal to Government recommending the change of company's name from M/s Prolight Systems to M/s Mimesis Hydel Projects Private Limited, since the proprietor of M/s Prolight Systems Mr. K.S. Deshpal is one of the Director of M/s Mimesis Hydel Projects Private Limited.

The proposal has been examined in detail and issued the following Order :-

Government Order No. EN 350 NCE 2010, Bangalore, dated : 31-08-2010

Government accords approval for the change of company's name from M/s Prolight Systems to M/s Mimesis Hydel Projects Private Limited.

The Government has reserved the power to cancel/modify this Order

The other terms and conditions of the Government Orders read at (1) and (2) above, shall **IPSO FACTO** applicable.

By Order and in the name of the Governor of Karnataka

S. J. Sampath Kumar

P.R. 2346

Under Secretary to Government

Energy Department

ನಗರಾಭಿವೃದ್ಧಿ ಸಚಿವಾಲಯ

ವಿಷಯ : ನೂತನವಾಗಿ ರಚನೆಯಾದ ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶವನ್ನು ರಚಿಸಿ ಹುದ್ದೆಗಳ ಸೃಜನೆ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 59 ಭೂದಾಮ 2008, ದಿನಾಂಕ 26-12-2009

2) ಸರ್ಕಾರದ ಆದೇಶ ಸಂಖ್ಯೆ : ನಅಇ 64 ಬೆಂರೂಪ್ರಾ 2003, ದಿನಾಂಕ 17-6-2003

ಪ್ರಸ್ತಾವನೆ :

ಮೇಲೆ ಓದಲಾದ (1)ರ ಅಧಿಸೂಚನೆಗಳಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ಹೊಸದಾಗಿ ಯಾದಗಿರಿ ಜಿಲ್ಲೆಯನ್ನು ರಚಿಸಿ ದಿನಾಂಕ 26-12-2009ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಜಿಲ್ಲಾಧಿಕಾರಿ ಯಾದಗಿರಿ ಜಿಲ್ಲೆ ಇವರು ಯಾದಗಿರಿ ಜಿಲ್ಲೆಯಲ್ಲಿ ಈ ಹಿಂದೆ ಹೊಸ ಜಿಲ್ಲೆಗಳಾದ ರಾಮನಗರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಮಾದರಿಯನ್ನು ಆಧರಿಸಿ ಹೊಸ ಸಿಬ್ಬಂದಿಯನ್ನು ಸೃಜಿಸುವಂತೆ ಪ್ರಸ್ತಾಪಿಸಿರುತ್ತಾರೆ.

ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಾಗೂ ಆಯಾಯ ಜಿಲ್ಲಾಧಿಕಾರಿಯವರ ಅಧೀನಕ್ಕೊಳಪಟ್ಟು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶವನ್ನು ಸೃಜನೆ ಮಾಡಿದ್ದು, ಈ ಕುರಿತು ಮೇಲೆ ಓದಲಾದ (4)ರ ಆದೇಶದಲ್ಲಿ ಗ್ರೇಡ್-2 ಜಿಲ್ಲೆಗಳಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸೃಜಿಸಿ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ರಚನೆಯಾಗಿರುವ ಯಾದಗಿರಿ ಜಿಲ್ಲೆಯಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶವನ್ನು ರಚನೆ ಮಾಡಲು ಹಾಗೂ ಹುದ್ದೆಗಳನ್ನು ಸೃಜಿಸಲು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಇ 242 ಎಂಎಲ್ಆರ್ 09 (ಭಾಗ), ಬೆಂಗಳೂರು, ದಿನಾಂಕ: 31-8-2010

ಮೇಲೆ ಪ್ರಸ್ತಾವನೆಯಲ್ಲಿ ಪರಿಶೀಲಿಸಿರುವಂತೆ ಹೊಸದಾಗಿ ರಚನೆಗೊಂಡಿರುವ ಯಾದಗಿರಿ ಜಿಲ್ಲೆಗೆ ಯಾದಗಿರಿ ಜಿಲ್ಲಾ ನಗರಾಭಿವೃದ್ಧಿ ಕೋಶವನ್ನು ಈ ಮೂಲಕ ರಚಿಸಲಾಗಿದೆ. ಸದರಿ ಜಿಲ್ಲಾ ನಗರಾಭಿವೃದ್ಧಿ ಕೋಶಕ್ಕೆ ಮೇಲೆ ಓದಲಾದ (2)ರ ಆದೇಶದಲ್ಲಿ ಮಂಜೂರು ಮಾಡಿರುವಂತೆಯೇ ಈ ಕೆಳಗಿನಂತೆ ಸಿಬ್ಬಂದಿಯನ್ನು ಒಳಗೊಂಡಂತೆ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.

1	ಯೋಜನಾ ನಿರ್ದೇಶಕರು	ಕೆ.ಎ.ಎಸ್. (ಕಿರಿಯ ಶ್ರೇಣಿ) / ಕೆ.ಎಂ.ಎ.ಎಸ್. ಅಧಿಕಾರಿ ಹಾಗೂ ಇತರೆ ಇಲಾಖೆಯ ಅದೇ ಸಮನಾಂತರ ಹುದ್ದೆಯ ಅಧಿಕಾರಿಗಳು
2	ಸಹಾಯಕ ಕಾರ್ಯಪಾಲಕ ಅಭಿಯಂತರರು	1 ಹುದ್ದೆ ಪೌರ ಸಿಬ್ಬಂದಿ ಅಥವಾ ಲೋ.ಇ.ಯಿಂದ ನಿಯೋಜನೆ ಮೇರೆಗೆ
3	ಪ್ರಥಮ ದರ್ಜೆ ಸಹಾಯಕರು	1 ಹುದ್ದೆ
4	ದ್ವಿತೀಯ ದರ್ಜೆ ಸಹಾಯಕರು	1 ಹುದ್ದೆ
5	ಆಪ್ತ ಸಹಾಯಕರು/ಶೀಘ್ರಲಿಪಿಗಾರರು/ ಬೆರಳಚ್ಚುಗಾರರು	2 ಹುದ್ದೆ (ಔಟ್ ಸೋರ್ಸ್)
6	ವಾಹನ ಚಾಲಕರು	1 ಹುದ್ದೆ (ಔಟ್ ಸೋರ್ಸ್)

ಎ) ಮೇಲ್ಕಂಡ ಹುದ್ದೆಗಳನ್ನು ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಭರ್ತಿ ಮಾಡಲು ಆದೇಶಿಸಿದೆ.

ಬಿ) ಮೇಲ್ಕಂಡ ಜಿಲ್ಲಾ ನಗರಾಭಿವೃದ್ಧಿ ಕೋಶವು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾಧಿಕಾರಿಗಳ ಅಧೀನದಲ್ಲಿ ಕಾರ್ಯವನ್ನು ನಿರ್ವಹಿಸತಕ್ಕದ್ದು.

ಸಿ) ಮೇಲ್ಕಂಡ ಕೋಶವು ಪೌರಾಡಳಿತ ನಿರ್ದೇಶನಾಲಯವು ಆಗಿಂದ್ದಾಗೆ ಹೊರಡಿಸುವ ಮಾರ್ಗಸೂಚಿಯನುಸಾರ ಕಾರ್ಯನಿರ್ವಹಿಸುವುದು.

ಡಿ) ಈ ಖರ್ಚನ್ನು ವಾರ್ಷಿಕವಾಗಿ ನಗರಾಭಿವೃದ್ಧಿ ಇಲಾಖೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶಗಳಿಗಾಗಿ ಪ್ರತ್ಯೇಕವಾಗಿ ಒದಗಿಸಿರುವ ಎಸ್.ಎಫ್.ಸಿ. ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಆರ್. ರವೀಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 2347

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 'ಬೆಂಗಳೂರು ಐ.ಟಿ. ಬಿಜ್-2010'ರ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಲಾಗಿರುವ ಮಾಹಿತಿ ತಂತ್ರಜ್ಞಾನದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ರಸಪ್ರಶ್ನೆ' ಕಾರ್ಯಕ್ರಮವನ್ನು ನಡೆಸಲು ಅನುದಾನ ಬಿಡುಗಡೆ ಬಗ್ಗೆ-ಆದೇಶ.

ಓದಲಾಗಿದೆ : ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರ ಸಂಖ್ಯೆ : ಮಾತಂನಿ/ಲೆಕ್ಕ-1/24/ಗ್ರಾ.ಅಂ.ಜಾಲ/504/2010-11, ದಿನಾಂಕ 26-08-2010.

ಪ್ರಸ್ತಾವನೆ :

ಮೇಲೆ ಓದಲಾದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶಕರ ದಿನಾಂಕ 26-08-2010ರ ಪತ್ರದಲ್ಲಿ ಬೆಂಗಳೂರು ಐಟಿ.ಬಿಜ್-2010 ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸುವ ಉದ್ದೇಶದಿಂದ ಜಿಲ್ಲಾಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನದಲ್ಲಿ ಮಕ್ಕಳ ಕಲಿಕೆ ಜ್ಞಾನವನ್ನು ವೃದ್ಧಿಸಲು/ಉತ್ತೇಜಿಸಲು ಅನುವಾಗದಂತೆ ಐಟಿ.ಕ್ವಿಜ್ ಕಾರ್ಯಕ್ರಮವನ್ನು ನಡೆಸಲು ಒಟ್ಟು ರೂ. 16,42,500/- (ರೂ. ಹದಿನಾರು ಲಕ್ಷದ ನಲವತ್ತೆರಡು ಸಾವಿರದ ಐದು ನೂರು ಮಾತ್ರ) ಅನುದಾನವನ್ನು ಲೆಕ್ಕ ಶೀರ್ಷಿಕೆ 3451-00-090-2-0-01-059 ಇತರೆ ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಹಾಗೂ ಅಭಿವೃದ್ಧಿಯಡಿಯಲ್ಲಿ 2010-11ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮಾತಂ ಜೈತಂ ಹಾಗೂ ವಿತಂ ಇಲಾಖೆಯು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ರವರ ಸಹಯೋಗದಲ್ಲಿ ಏರ್ಪಡಿಸುತ್ತಿದ್ದ ರಾಜ್ಯಾದ್ಯಂತ ಗ್ರಾಮೀಣ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮವು ಹನ್ನೊಂದನೇ ವರ್ಷಕ್ಕೆ ಕಾಲಿಟ್ಟಿದ್ದು, ಪ್ರತಿ ವರ್ಷದಂತೆ ಬೆಂಗಳೂರು ಐಟಿ.ಬಿಜ್ 2010 ಮೇಳದ ಅಂಗವಾಗಿ ಈ ವರ್ಷವು ಏರ್ಪಡಿಸಲಾಗುತ್ತಿದೆ.

2010ನೇ ಸಾಲಿಗೆ ಅನುದಾನವನ್ನು ದಿನಾಂಕ 17-09-2010 ರಂದು ನಡೆಯುವ ಜಿಲ್ಲಾ ಮಟ್ಟದ ರಸಪ್ರಶ್ನೆ ಕಾರ್ಯಕ್ರಮ ಮತ್ತು ದಿನಾಂಕ 19-10-2010 ರಿಂದ 25-10-2010 ರವರೆಗೆ ನಡೆಯುವ ಪ್ರಾದೇಶಿಕ ಸ್ಪರ್ಧೆಯ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಲು, ಸಭಾಂಗಣದ ವೆಚ್ಚ, ವಿದ್ಯಾರ್ಥಿಗಳನ್ನು ಕರೆತರಲು ವಾಹನಗಳನ್ನು ಏರ್ಪಡಿಸಲು ಹಾಗೂ ರಸ ಪ್ರಶ್ನೆ ಕಾರ್ಯಕ್ರಮ ನಡೆಯುವ ದಿನ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಲು ಹಾಗೂ ಬೆಂಗಳೂರಿನಲ್ಲಿ ದಿನಾಂಕ 30-10-2010 ರಂದು ಬೆಂಗಳೂರು ಐಟಿ.ಬಿಜ್ 2010ರ ಮೇಳದಲ್ಲಿ ನಡೆಯುವ ರಾಜ್ಯ ಮಟ್ಟದ ಅಂತಿಮ ಸುತ್ತಿನಲ್ಲಿ ಭಾಗವಹಿಸಲು ಅರ್ಹ ತಂಡದ ವಿದ್ಯಾರ್ಥಿಗಳಿಗೆ ಮತ್ತು ಅವರೊಡನೆ ಬರುವ ಪೋಷಕರು/ಶಿಕ್ಷಕರು (ಎರಡು ಸದಸ್ಯರಿಗೆ ಮಾತ್ರ) ಪ್ರಯಾಣ ಭತ್ಯೆ ಮತ್ತು ತುಟ್ಟಿ ಭತ್ಯೆಗಳನ್ನು ಭರಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರುಗಳಿಗೆ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವಂತೆ ರೂ. 16,42,500/- ಬಿಡುಗಡೆ ಮಾಡಲು ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 36 ಎಂಡಿಎ 2010, ಬೆಂಗಳೂರು, ದಿನಾಂಕ: 06-09-2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು 'ಬೆಂಗಳೂರು ಐ.ಟಿ. ಬಿಜ್-2010'ರ ಮೇಳದ ಅಂಗವಾಗಿ ಮಾಹಿತಿ ತಂತ್ರಜ್ಞಾನದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ರಸಪ್ರಶ್ನೆ' ಕಾರ್ಯಕ್ರಮವನ್ನು ನಡೆಸಲು ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಅನುಬಂಧದಲ್ಲಿ ತೋರಿಸಿರುವಂತೆ) ಒಟ್ಟು ರೂ. 16,42,500/- (ರೂ. ಹದಿನಾರು ಲಕ್ಷದ ನಲವತ್ತೆರಡು ಸಾವಿರದ ಐದು ನೂರು ಮಾತ್ರ) ಅನುದಾನವನ್ನು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **"3451-00-090-2-01 ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಮತ್ತು ಅಭಿವೃದ್ಧಿ - 059-ಇತರೆ ಖರ್ಚು (ಯೋಜನೆ)"** ಇದರಡಿಯಲ್ಲಿ ಒದಗಣೆ ಮಾಡಲಾದ ಅನುದಾನದಿಂದ ಭರಿಸತಕ್ಕದ್ದು.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವಿತರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಈ ಅನುದಾನದ ಬಳಕೆಯ ಬಗ್ಗೆ ಉಪಯೋಗಿತಾ ದೃಢೀಕರಣ ಪತ್ರಗಳನ್ನು ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಂದ ಹಾಗೂ ಕಿಯೋನಿಕ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಂದ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-5-2008 ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 36 ಎಂಡಿಎ 2010, ದಿನಾಂಕ 06-09-2010

ಕ್ರಮ ಸಂಖ್ಯೆ	ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು	ಪ್ರಾದೇಶಿಕ ಮಟ್ಟಕ್ಕಾಗಿ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ (ತಂಡಗಳು)	ರಸಪ್ರಶ್ನೆ ಪೂರ್ಣ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿರುವ ಅನುದಾನ
1	ಬೆಂಗಳೂರು ಉತ್ತರ	12 ತಂಡಗಳು	12500.00
2	ಬಾಗಲಕೋಟೆ	25 ತಂಡಗಳು	25000.00
3	ಬೆಂಗಳೂರು ಗ್ರಾಮಾಂತರ	25 ತಂಡಗಳು	25000.00
4	ಬೆಂಗಳೂರು ದಕ್ಷಿಣ	12 ತಂಡಗಳು	12500.00
5	ರಾಮನಗರ	25 ತಂಡಗಳು	25000.00
6	ಚಿಕ್ಕೋಡಿ (ಬೆಳಗಾವಿ ಉತ್ತರ)	12 ತಂಡಗಳು	12500.00
7	ಬೆಳಗಾವಿ ದಕ್ಷಿಣ	12 ತಂಡಗಳು	12500.00
8	ಬಳ್ಳಾರಿ	25 ತಂಡಗಳು	50000.00
9	ಬೀದರ್	25 ತಂಡಗಳು	60000.00
10	ಬಿಜಾಪುರ	25 ತಂಡಗಳು	25000.00
11	ಚಾಮರಾಜನಗರ	25 ತಂಡಗಳು	25000.00
12	ಚಿಕ್ಕಮಗಳೂರು	25 ತಂಡಗಳು	25000.00
13	ಚಿಕ್ಕಬಳ್ಳಾಪುರ	25 ತಂಡಗಳು	25000.00
14	ಚಿತ್ರದುರ್ಗ	25 ತಂಡಗಳು	25000.00
15	ಕೂರ್ಗ್	25 ತಂಡಗಳು	25000.00
16	ದಕ್ಷಿಣ ಕನ್ನಡ	25 ತಂಡಗಳು	55000.00
17	ಗದಗ	25 ತಂಡಗಳು	25000.00
18	ಯಾದಗಿರ್	25 ತಂಡಗಳು	40000.00
19	ಹಾಸನ	50 ತಂಡಗಳು	25000.00
20	ಹಾವೇರಿ	50 ತಂಡಗಳು	55000.00
21	ಕೋಲಾರ	50 ತಂಡಗಳು	25000.00
22	ಕೊಪ್ಪಳ	50 ತಂಡಗಳು	25000.00
23	ಮಂಡ್ಯ	50 ತಂಡಗಳು	25000.00
24	ರಾಯಚೂರು	50 ತಂಡಗಳು	50000.00
25	ಶಿವಮೊಗ್ಗ	50 ತಂಡಗಳು	30000.00
26	ಮಧುಗಿರಿ	25 ತಂಡಗಳು	12500.00
27	ಉತ್ತರ ಕನ್ನಡ	50 ತಂಡಗಳು	25000.00
28	ಶಿರಸಿ	12 ತಂಡಗಳು	25000.00
29	ದಾವಣಗೆರೆ	25 ತಂಡಗಳು	25000.00
30	ಉಡುಪಿ	25 ತಂಡಗಳು	55000.00
31	ಗುಲ್ಬರ್ಗ	25 ತಂಡಗಳು	40000.00
		ಒಟ್ಟು	**922500.00**

ಕ್ರಮ ಸಂಖ್ಯೆ	ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು	ಪ್ರಾದೇಶಿಕ ಮಟ್ಟದಲ್ಲಿ ಭಾಗವಹಿಸುತ್ತಿರುವ ತಂಡಗಳು	ಪ್ರಾದೇಶಿಕ ಹಂತದ ರಸಪ್ರಶ್ನೆ ಕಾರ್ಯಕ್ರಮ ನಡೆಸಲು 3 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ ಹೆಚ್ಚುವರಿ ಅನುದಾನ
1	ಧಾರವಾಡ	275 ತಂಡಗಳು	70000.00
2	ಮೈಸೂರು	250 ತಂಡಗಳು	65000.00
3	ತುಮಕೂರು	250 ತಂಡಗಳು	65000.00
		ಒಟ್ಟು	200000.00
		ಒಟ್ಟು	**1122500.00**

ಕಾರ್ಯಕ್ರಮಕ್ಕೆ ಬೇಕಾಗಿರುವ ಒಟ್ಟು ಮೊತ್ತ

1	ಸಭಾಂಗಣ	100000
2	ದೂರದರ್ಶನ ಪ್ರಸಾರ	150000
3	ಪ್ರಮಾಣ ಪತ್ರ ಏಳು ರಾಜ್ಯಗಳಲ್ಲಿ ಸಭಾಂಗಣಗಳು ಮತ್ತು ಪ್ರಶ್ನೆ ಪತ್ರಿಕೆಗಳು	250000
4	ಬಹುಮಾನಿತರಿಗೆ ಜಮ್ಮು ಕಾಶ್ಮೀರಕ್ಕೆ ರೈಲು ಪ್ರಯಾಣ ಭತ್ಯೆ	20000.00
5	ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ	1122500.00
	ಒಟ್ಟು ಮೊತ್ತ	**1642500.00**

ಎಂ. ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2348

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ನಗರಾಭಿವೃದ್ಧಿ ಇಲಾಖೆಯ ಕಡತಗಳು ಕಾಣೆಯಾಗಿರುವುದಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಸೇಇವಿ 2010, ಬೆಂಗಳೂರು, ದಿನಾಂಕ: 04–09–2010

ಶ್ರೀ ವಸಂತ್ ಶ್ರೀಧರ್ ಕುಲಕರ್ಣಿ ಮತ್ತು ಇತರರು–ವಿರುದ್ಧ–ಸರ್ಕಾರ ಮತ್ತು ಇತರರು ಇವರಿಗೆ ಸಂಬಂಧಿಸಿದಂತೆ ಘನ ಸರ್ವೋಚ್ಚ ನ್ಯಾಯಾಲಯದ ಮುಂದಿರುವ ಎಸ್.ಎಲ್.ಪಿ. (ಸಿವಿಲ್) ಪ್ರಕರಣ ಸಂಖ್ಯೆ : 6662–6670/2002ಕ್ಕೆ ನಗರಾಭಿವೃದ್ಧಿ ಇಲಾಖೆಯ ಅಭಿವೃದ್ಧಿ ಪ್ರಾಧಿಕಾರ ಶಾಖೆಯಲ್ಲಿ ಕಡತ ಸಂಖ್ಯೆ ನಅಇ 118 ಬೆಮಪ್ರಾ 2000 ಇದರೊಂದಿಗೆ ಜೋಡಣೆಯಾಗಿರುವ ಕಡತ ಸಂಖ್ಯೆ : ನಅಇ 172 ಬೆಮಪ್ರಾ 1998 ಈ ಕಡತವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿತ್ತು ಘನ ಸರ್ವೋಚ್ಚ ನ್ಯಾಯಾಲಯಕ್ಕೆ ಅಗತ್ಯವಾಗಿ ಒದಗಿಸಬೇಕಾಗಿರುವ ಕಡತ ಸಂಖ್ಯೆ ನಅಇ 172 ಬೆಮಪ್ರಾ 1998 ಮತ್ತು ನಅಇ 118 ಬೆಮಪ್ರಾ 2000 ಈ ಎರಡು ಕಡತಗಳು ಲಭ್ಯವಾಗದೇ ಇರುವ ಹಿನ್ನೆಲೆಯಲ್ಲಿ ಸದರಿ ಕಡತಗಳು ಕಣ್ಮರೆ/ಕಳೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದಲೂ :

ಕಡತಗಳು ಕಣ್ಮರೆ/ಕಳೆದು ಹೋಗಿರುವುದಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯ ಶಿಫಾರಸ್ಸಿನಂತೆ ಹೊಣೆಗಾರರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದು ಅವಶ್ಯಕವೆಂದು ಸರ್ಕಾರವು ಭಾವಿಸಿರುವುದರಿಂದಲೂ :

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಡಿ)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಮೇಲೆ ಹೇಳಿದ ಆರೋಪಗಳಿಗಾಗಿ ಶಿಸ್ತಿನ ಕ್ರಮವನ್ನು ಕೈಗೊಳ್ಳುವುದನ್ನು ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳನ್ನು ಈ ಮೂಲಕ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ :

1) ಶ್ರೀ ಎಸ್. ಜೆ. ಸಂಪತ್ ಕುಮಾರ್ (ಹಿಂದಿನ ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ) ಪ್ರಸ್ತುತ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.
2) ಶ್ರೀ ಶಾಂತರಾಮ್ ನಾಯಕ್, ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ
3) ಶ್ರೀ ಟಿ. ಹಾಲಸಿದ್ಧಪ್ಪ (ಹಿಂದಿನ ಸಹಾಯಕರು, ನಗರಾಭಿವೃದ್ಧಿ ಇಲಾಖೆ) ಪ್ರಸ್ತುತ ಹಿರಿಯ ಸಹಾಯಕರು, ಸಿ.ಆ.ಸು.ಇ. (ಸೇವೆಗಳು–ಡಿ)
4) ಶ್ರೀ ಜಗದೀಶರೆಡ್ಡಿ (ಹಿಂದಿನ ಸಹಾಯಕರು, ನಗರಾಭಿವೃದ್ಧಿ ಇಲಾಖೆ) ಪ್ರಸ್ತುತ ಹಿರಿಯ ಸಹಾಯಕರು, ಮಾನ್ಯ ಪ್ರವಾಸೋದ್ಯಮ ಸಚಿವರ ಆಪ್ತ ಶಾಖೆ.
5) ಶ್ರೀ ಎಲ್. ರಮೇಶ್, ಸಹಾಯಕರು, ನಗರಾಭಿವೃದ್ಧಿ ಇಲಾಖೆ
6) ಶ್ರೀ ಟಿ. ಹೆಚ್. ಚಿಕ್ಕಹುಚ್ಚಯ್ಯ, ಕಿರಿಯ ಸಹಾಯಕರು, ನಗರಾಭಿವೃದ್ಧಿ ಇಲಾಖೆ

ಅಮಾನತ್ತಿನ ಅವಧಿಯಲ್ಲಿ ಮೇಲ್ಕಂಡ ಅಧಿಕಾರಿ/ನೌಕರರುಗಳು ಕೆ.ಸಿ.ಎಸ್. ಆರ್ಸ್, ನಿಯಮ 98ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಮೇಲ್ಕಂಡ ಅಧಿಕಾರಿ/ನೌಕರರುಗಳು ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 2349

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರುಗಳ ಉಪಯೋಗಕ್ಕಾಗಿ 9 ಹೊಸ ಟೊಯೋಟಾ ಕರೋಲಾ ಅಲ್ಟಿಸ್ (ಪೆಟ್ರೋಲ್) ಕಾರುಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್‌ರವರ ಪತ್ರ ಸಂ. : ಹೆಚ್‌ವಿಬಿ.33/2009, ದಿನಾಂಕ 29-07-2010.

ಪ್ರಸ್ತಾವನೆ :

ಮೇಲೆ ಪ್ರಸ್ತಾವನೆಯಲ್ಲಿ ಓದಲಾದ ದಿನಾಂಕ 29-07-2010ರ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದಲ್ಲಿ ಭಾರತ ಸರ್ಕಾರದ ದಿನಾಂಕ 3-11-2009ರ ಅಧಿಸೂಚನೆಯನ್ನು ಉಲ್ಲೇಖಿಸುತ್ತಾ, ಅದರನ್ವಯ ಭಾರತ ಸರ್ಕಾರದ ಕಾನೂನು ಮತ್ತು ನ್ಯಾಯ ಮಂತ್ರಾಲಯ (ನ್ಯಾಯಾಂಗ ಇಲಾಖೆ)ವು ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರುಗಳ ವೃಂದ ಬಲವನ್ನು 41 ರಿಂದ 50 ಕ್ಕೆ ಹೆಚ್ಚಿಸಿದ್ದು, 9 ಹೆಚ್ಚುವರಿ ನ್ಯಾಯಾಧೀಶರ ಹುದ್ದೆಗಳನ್ನು ಗುಲ್ಬರ್ಗಾ ಮತ್ತು ಧಾರವಾಡ ಸಂಚಾರಿ ಪೀಠಗಳಿಗಾಗಿ ಸೃಜಿಸಲಾಗಿದೆಯೆಂದು ತಿಳಿಸಲಾಗಿದೆ. ಮುಂದುವರೆದು, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಮತ್ತು ಮಾನ್ಯ ನ್ಯಾಯಾಧೀಶರುಗಳ ಉಪಯೋಗಕ್ಕಾಗಿ 40 ಟೊಯೋಟ ಕರೋಲಾ ಕಾರುಗಳು, 1 ಕರೋಲಾ ಅಲ್ಟಿಸ್ ಕಾರು ಮತ್ತು 1 ಹೊಂಡ ಸಿವಿಕ್ ಕಾರುಗಳು ಒಟ್ಟಾರೆ 42 ಹವಾ ನಿಯಂತ್ರಿತ ಪೆಟ್ರೋಲ್ ಕಾರುಗಳನ್ನು ಖರೀದಿಸಿರುವುದಾಗಿ ತಿಳಿಸಲಾಗಿದೆ. ಮತ್ತೂ ಮುಂದುವರೆದು the High Court Judges (Salaries and conditions of service) Act, 1954 ರ ಸೆಕ್ಷನ್ 22ರಲ್ಲಿ "Every Judge shall be entitled to a staff car and two hundred litres of Fuel per month or the actual consumption of fuel whichever is less" ಎಂದಿರುವುದರಿಂದ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ವೃಂದ ಬಲವು ಹೆಚ್ಚಾಗಿರುವುದರಿಂದ 9 ಹೊಸ ವಾಹನಗಳನ್ನು ಅವಶ್ಯಕವಾಗಿ ಖರೀದಿಸಿ, ಹೊಸ ಹುದ್ದೆಗಳಿಗೆ ನೇಮಕವಾಗುವ ನ್ಯಾಯಾಧೀಶರುಗಳು ಅಧಿಕಾರ ಸ್ವೀಕಾರ ಮಾಡಿದ ಕೂಡಲೇ ಅವರ ಉಪಯೋಗಕ್ಕಾಗಿ ಒದಗಿಸಬೇಕಾಗುವುದೆಂದು ತಿಳಿಸಲಾಗಿದೆ.

ಆದ್ದರಿಂದ, 9 ಹೊಸÀ Toyota Corolla Altis 1.8 G Suffix H2-Petrol, Manual Transmission (Pearl White Colour) with A/c ಕಾರುಗಳನ್ನು ರೂ. 1,04,14,440/- ರಷ್ಟು ಅಂದಾಜು ಮೊತ್ತದಲ್ಲಿ ಖರೀದಿಸಲು (ಪ್ರತಿಯೊಂದು ವಾಹನದ ಮೊತ್ತ 10,97,100/- + ಕೆ.ಜಿ.ಐ.ಡಿ. ವಿಮೆ ರೂ. 40,000/- + Accessories, Number Board, Name Board, Registration fee etc., Rs. 20,000/- = ಒಟ್ಟಾರೆ ರೂ. 11,57,160/) ಅನುಮತಿಯನ್ನು ನೀಡುವಂತೆಯೂ ಹಾಗೂ 2010-11ನೇ ಸಾಲಿನ ಲೆಕ್ಕ ಶೀರ್ಷಿಕೆ <u>2014 Administration of Justice-00-102 High Court 0 02-195 Transportation Charges non-plan</u> ಅಡಿಯಲ್ಲಿ ಹೆಚ್ಚುವರಿ ಅನುದಾನವನ್ನು ಒದಗಿಸಿದಲ್ಲಿ ಕಾರುಗಳನ್ನು ಖರೀದಿಸಿ ಮಾನ್ಯ ನ್ಯಾಯಾಧೀಶರುಗಳ ಉಪಯೋಗಕ್ಕಾಗಿ ಒದಗಿಸಲಾಗುತ್ತದೆಯೆಂದು ತಿಳಿಸುತ್ತಾ, ಕರ್ನಾಟಕ ಉಚ್ಚ ನ್ಯಾಯಾಲಯದ 9 ಹೊಸ ಕಾರುಗಳನ್ನು ಖರೀದಿಸುವ ಪ್ರಸ್ತಾವನೆಗೆ ಅನುಮತಿ ಹಾಗೂ ಉಚ್ಚ ನ್ಯಾಯಾಲಯದ ಲೆಕ್ಕ ಶೀರ್ಷಿಕೆಯಡಿ ಹೆಚ್ಚುವರಿ ಮೊತ್ತದ ಆರ್ಥಿಕ ಅನುಮೋದನೆಯನ್ನು ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 43 ಸೇಉನ್ಯಾ 2010, ಬೆಂಗಳೂರು, ದಿನಾಂಕ: 04-09-2010

ಕರ್ನಾಟಕ ಉಚ್ಚ ನ್ಯಾಯಾಲಯದ ಹೊಸ ಹುದ್ದೆಗಳಿಗೆ ನೇಮಕವಾಗುವ ನ್ಯಾಯಾಧೀಶರುಗಳ ಉಪಯೋಗಕ್ಕಾಗಿ 9 ಹೊಸ ಟಯೋಟ ಕರೋಲಾ ಅಲ್ಟಿಸ್ (ಪೆಟ್ರೋಲ್) ಕಾರುಗಳನ್ನು (Toyota Corolla Altis 1.8G Suffix H2-Petrol, Manual Transmission (Pearl White colour) with A/c) ಪ್ರತಿಯೊಂದು ಕಾರನ್ನು ಒಟ್ಟಾರೆ ಬೆಲೆ ರೂ. 11,57,160/- (ರೂಪಾಯಿ ಹನ್ನೊಂದು ಲಕ್ಷದ ಐವತ್ತೇಳು ಸಾವಿರದ ನೂರ ಅರವತ್ತು ಮಾತ್ರ) ಗಳಿಗೆ ಖರೀದಿಸಲು ನ್ಯಾಯಾಧೀಶರ ನೇಮಕವಾದ ನಂತರ ಅಧಿಕಾರ ಸ್ವೀಕಾರದ ಬಗ್ಗೆ ದೃಢಪಡಿಸಿಕೊಂಡ ನಂತರವೇ ಖರೀದಿಸುವ ಷರತ್ತಿನೊಂದಿಗೆ ಸರ್ಕಾರದ ಅನುಮತಿ ನೀಡಲಾಗಿದೆ. ಈ ಖರೀದಿಗಾಗಿ ಹೆಚ್ಚುವರಿ ಅನುದಾನದ ಬಿಡುಗಡೆಗೆ ಸೂಕ್ತ ಸಮಯದಲ್ಲಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಖರೀದಿಸಲು ಬೇಕಾಗಿರುವ ರೂ. 104,14 ಲಕ್ಷಗಳನ್ನು ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂ. ಆಇ 684 ವೆಚ್ಚ-12/10, ದಿನಾಂಕ 24-08-2010ರಲ್ಲಿ ನೀಡಿರುವ ಸಹಮತದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 2350

INFRASTRUCTURE DEVELOPMENT SECRETARIAT

Sub :- Construction of Kolar – Chickballapura Railway line (Gauge Conversion)

Read :- 1. Government Order No. : IDD 35 NSW 2009, dated 24-04-2009

2. Letter No. W63/CN/BNC/MR/B/GL, dated 20-07-2010 from CE/CON.EAST/SWR, Bangalore.

***

Preamble:

Railways are one of the most convenient and widely used means of travel in India and also a very critical component in the logistics. The use of rail network for freight and passenger transport has the potential to reduce road congestion improve safety, improve economic efficiencies and reduce environmental impacts. To increase the rail density in the State, the State Govt. had taken initiatives to take up rail projects on cost sharing basis (50:50, 2/3rd and 1/3rd etc.,) since 2002. Keeping in view the facts that the allocations for railways has to be increased for early commissioning of railway projects, the State Government has decided to undertake some of the ongoing railway projects in the State, also on cost sharing basis.

Accordingly in G. O. read at (1) above, Government of Karnataka the issue had been examined in the Cabinet and decided to take up the balance work of Kolar-Chickballapura gauge conversion railway project on (50:50 cost sharing between GoK & Railway). This project was sanctioned during 2006-2007 and the total length of the project is 90 kms & cost of the project is Rs. 287.99 crore. The expenditure so far is Rs. 107.83 crore, the project is being taken up from 2010-11 onwards on cost sharing basis between railways and GoK from 2010-11.

The Chief Engineer, South Western Railway, Bangalore in his letter read at Sl. No. (2) above, has stated that the total releases made by Railways upto 31-03-2010 is Rs. 107.83 crores and the balance amount of Rs. 180-16 crores is to be shared equally by Railway/GoK. He has stated that the deposit required from GoK for this year is Rs. 40.00 crore.

The proposal of Railways has been examined and it has been decided to release an amount of Rs. 30.00 crore (Rupees Thirty crore only) out of the Budget of Rs. 272.50 crore provided under the Head of Account “5465-01-190-3-05 (Plan) 211 investment” towards cost sharing for new railway projects during 2010-11.

Hence this Order

Government Order No. IDD 80 NSW 2009, Bangalore, dated : 3-09-2010

After careful examination of the request of Railways, Government is pleased to undertake the balance project work of construction of Kolar-Chickballapura Gauge conversion railway line on 50:50 cost sharing basis and to release an amount of Rs. 30.00 crore (Rupees thirty crore only) being the part of the share of GoK.

The expenditure shall be met under the Head of Account ‘5465-01-190-3-05”(Plan) 211 investment out of the budget provision Rs. 272.50 crore, towards cost sharing for new railway projects during 2010-11.

The Chief Executive Officer, K-RIDE is authorized to draw the amount on a payee’s receipt duly countersigned by the Under Secretary to Government. Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

This order is issued in accordance with the concurrence of Finance Department given vide U.O. Note No. FD 1403 Exp-1/2010, dated 25-08-2010.

By Order and in the name of the Governor of Karnataka

C. A. Baburavindranath Patel

Under Secretary to Government

Infrastructure Development Department

P.R. No. 2351

INFRASTRUCTURE DEVELOPMENT SECRETARIAT

Sub :- Construction of an underpass below the RoB under construction by NHAI over the LC No. 14 on NH-7 near the Bangalore international Airport Project site – release of funds.

Read :- 1. G. O. No. IDD 2 DIA 2010, Dated 20-03-2010

2. Letter No. DGM(IPD-1)/918/2010-11, Dated 19-07-2010 of the Deputy General Manager (IPD-T-I)

3. Letter No. DGM(IPD-I) /1120/2010-11, Dated 11-08-2010 of the Deputy General Manager, KSIIDC.

***

Preamble:

The NHAI in addition to the road widening works has taken up the work of construction of the underpass below ROB at the L.C. No. 14 on the request of KSIIDC at an estimated cost of Rs. 1,47,60,112-00. In G.O. Dated 20-03-2010 read at (1) above Government had released an amount of Rs. 100 lakhs to KSIIDC towards the construction of underpass below the ROB at L.C. No. 14 on NH-7 near Bangalore International Airport for providing access to the Devanahalli Business Park being developed by Government through KSIIDC.

In the letter dated 19-07-2010 read at Sl. No. (2) above, the Deputy General Manager (IPD-T-1) has stated that NHAI, vide, its letter dated 26-03-2010 has informed that the competent authority has accorded final approval for the construction of the underpass as well as the service roads connecting the underpass on either side at a cost of Rs. 2,12,05,961.00 as per the details given below :-

a)	Under pass construction	:	Rs. 1,41,30,612/-
b)	Service Roads connecting the under pass	:	Rs. 70,75,349
			Rs. 2,12,05,961/-

Further he has stated that NHAI has now requested KSIIDC to deposit the above amount towards cost of construction of the underpass as well as the service roads connecting the underpass.

NHAI is also developing the stretch of service roads from Hebbal flyover to Udayagiri along with the development of

A) Elevated corridor flyover from Columbia Hospital upto Vidyashilpa School at Yelahanka :
B) Construction of Road Under Bridge (RUB) to Yelahanka by-pass service roads ;
C) Six lane fly-over of 800 mtrs. Length at Kogilu cross ;
D) Pedestrian underpass at Venkatala ;
E) Eight lane underpasses at Bagalur cross and Usmanhalli ;
F) Six lane flyover at Vidyanagar cross ;
G) Non-Vehicular underpass at Chikkajala

Hence, KSIIDC was requested to clarify whether the development of the above mentioned stretch of service roads from Hebbal to Udayagiri would also cover the earlier proposed service road near the Underpass access to the Devanahalli Business Park. Accordingly the clarification was received from KSIIDC vide letter dated 11-08-2010 read at Sl. No. (3) that NHAI will be developing the service roads upto the starting point of the ROB at level crossing No. 14 and further extension of the service roads upto the vent underpass constructed near by the DBP area has been agreed by NHAI in order to give specific entry and exit to the DBP and hence NHAI has requested to make the payment for the construction of the service roads as well as vent underpass amounting to a total of Rs. 2,12,05,961-00. Hence KSIIDC has requested to release Rs. 1,12,05,961.00 being the balance of the revised estimate.

The Government have examined the above proposal and hence the following Order.

Government Order No. IDD 2 DIA 2010, Bangalore, dated : 4-09-2010

After careful examination of the proposal, sanction of the Government is hereby accorded for release of Rs. 100.00 lakhs (Rupees hundred lakhs only) to KSIIDC being the balance payment of the revised cost towards the construction of underpass and service roads for access to the Devanahalli Business Park near Bangalore International Airport Limited.

This expenditure shall be met from the Head of account '5465-01-190-2-07-051-Development of 408 acres of Govt. land adjacent to BIAP" out of the budget provision of Rs. 100.00 lakhs during the year 2010-11.

The Managing Director, KSIIDC is authorized to draw the amount on a payees receipt duly countersigned by the Under Secretary to Government, Infrastructure Development Department.

This order is issued in accordance with the financial powers delegated to Principal secretaries/Secretaries to Government vide G.O. No. FD 1 TFP 08 dated 16-05-2008.

By Order and in the name of the Governor of Karnataka
C. A. Baburavindranath Patel
Under Secretary to Government
Infrastructure Development Department

P.R. No. 2352

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಡಾ|| ರಶ್ಮಿ, ಎಲ್. ಇವರ ಪಶುವೈದ್ಯಾಧಿಕಾರಿ ಹುದ್ದೆಯ ನೇಮಕಾತಿಯನ್ನು ರದ್ದುಪಡಿಸುವಿಕೆ

ಓದಲಾಗಿದೆ : 1) ಅಧಿಸೂಚನೆ ಸಂಖ್ಯೆ : ಪಸಂಮೀ 263 ಪಸಸೇ 2007, ದಿನಾಂಕ 26-06-2009
2) ಡಾ|| ರಶ್ಮಿ, ಎಲ್. ಇವರ ಮನವಿ ದಿನಾಂಕ 01-07-2009
3) ಸರ್ಕಾರಿ ಪತ್ರ ಸಂಖ್ಯೆ : ಪಸಂಮೀ 426 ಪಸಸೇ 2009, ದಿನಾಂಕ 04-08-2009
4) ಸರ್ಕಾರಿ ಪತ್ರ (ನೆನಪೋಲೆ) ಸಂಖ್ಯೆ : ಪಸಂಮೀ 426 ಪಸಸೇ 2009, ದಿನಾಂಕ 31-10-2009.
5) ಸರ್ಕಾರಿ ಪತ್ರ ಸಂಖ್ಯೆ : ಪಸಂಮೀ 426 ಪಸಸೇ 2009, ದಿನಾಂಕ 06-03-2010
6) ಪತ್ರ ಸಂಖ್ಯೆ ಆಪಸಂ/ಸಿಬ್ಬಂದಿ-2/ವಿವ-95/2008-09, ದಿನಾಂಕ 25-07-2010

ಪ್ರಸ್ತಾವನೆ :

ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಪಶುವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಯಾಗಿದ್ದ ಡಾ|| ರಶ್ಮಿ, ಎಲ್. ಇವರನ್ನು ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಪಶುಚಿಕಿತ್ಸಾಲಯ, ವೆಂಕಟಯ್ಯನಛತ್ರ,

ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಲಾಗಿತ್ತು. ನೇಮಕಾತಿ ಆದೇಶದಲ್ಲಿ ಆದೇಶ ಸ್ವೀಕರಿಸಿದ 15 ದಿನಗಳ ಒಳಗೆ ಕರ್ತವ್ಯಕ್ಕೆ ಹಾಜರಾಗುವಂತೆ, ಹಾಜರಾಗದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 18(3)ರನ್ವಯ ಯಾವುದೇ ಮುನ್ಸೂಚನೆ ಇಲ್ಲದ ನೇಮಕಾತಿ ರದ್ದುಪಡಿಸಲಾಗುವುದೆಂದು ಸಹ ತಿಳಿಸಲಾಗಿತ್ತು.

ಮೇಲೆ ಕ್ರಮಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಡಾ॥ ರಶ್ಮಿ, ಎಲ್. ಅವರು ಎಂ.ವಿ.ಎಸ್ಸಿ, ಉನ್ನತ ವ್ಯಾಸಂಗ ಮಾಡುತ್ತಿದ್ದು ವ್ಯಾಸಂಗವು ಡಿಸೆಂಬರ್ 2009ಕ್ಕೆ ಮುಕ್ತಾಯಗೊಳ್ಳುವುದರಿಂದ, ಪಶುವೈದ್ಯಾಧಿಕಾರಿ ಹುದ್ದೆಯ ಕರ್ತವ್ಯಕ್ಕೆ ಹಾಜರಾಗಲು ದಿನಾಂಕ 31-12-2009ರವರೆಗ ಕಾಲಾವಕಾಶ ವಿಸ್ತರಿಸುವಂತೆ ಕೋರಿದ್ದರು.

ಮೇಲೆ ಕ್ರಮಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಪಶುವೈದ್ಯಾಧಿಕಾರಿಯ ಹುದ್ದೆಯ ಕರ್ತವ್ಯಕ್ಕೆ ಹಾಜರಾಗಲು ಕಾಲಾವಕಾಶ ವಿಸ್ತರಿಸುವ ಸಂಬಂಧ ಕೆಲವು ಅಂಶಗಳಿಗೆ ಮಾಹಿತಿ/ದಾಖಲೆ ಒದಗಿಸುವಂತೆ ಡಾ॥ ರಶ್ಮಿಯವರನ್ನು ಕೋರಲಾಗಿತ್ತು. ಸದರಿಯವರಿಂದ ಮಾಹಿತಿ ಬಾರದ ಕಾರಣ ತದನಂತರ ಮೇಲೆ ಕ್ರಮಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಒಂದು ವಾರದೊಳಗೆ ಮಾಹಿತಿ ಒದಗಿಸಲು ತಪ್ಪಿದಲ್ಲಿ ಕಾಲಾವಕಾಶ ವಿಸ್ತರಣೆ ಮನವಿಯನ್ನು ತಿರಸ್ಕರಿಸಿ ನೇಮಕಾತಿ ರದ್ದುಪಡಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ ಡಾ॥ ರಶ್ಮಿಯವರಿಗೆ ನೆನಪೋಲೆಯೊಂದನ್ನು ಸಹ ಬರೆಯಲಾಗಿತ್ತು. ಆದಾಗ್ಯೂ ಇದುವರೆಗೂ ಸದರಿಯವರು ಯಾವುದೇ ಮಾಹಿತಿ/ದಾಖಲೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಡಾ॥ ರಶ್ಮಿ, ಎಲ್ ರವರಿಂದ ಮಾಹಿತಿ ಬಾರದ ದೊರೆಯದ ಕಾರಣ ಮೇಲೆ ಓದಲಾದ ಕ್ರಮಸಂಖ್ಯೆ (5)ರ ಪತ್ರದಲ್ಲಿ ಸದರಿಯವರು ನೇಮಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕುವ ಬಗ್ಗೆ ವರದಿ ಸಲ್ಲಿಸುವಂತೆ ಆಯುಕ್ತರನ್ನು ಕೋರಲಾಗಿತ್ತು. ಮೇಲೆ ಓದಲಾದ ಕ್ರಮಸಂಖ್ಯೆ : (6) ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಡಾ॥ ರಶ್ಮಿ, ಎಲ್. ಇವರು ನೇಮಿಸಿದ ಸ್ಥಳ ಪಶುಚಿಕಿತ್ಸಾಲಯ, ವೆಂಕಟಯ್ಯನಛತ್ರ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ಮತ್ತು ಸದರಿಯವರು ಪಶುವೈದ್ಯಾಧಿಕಾರಿ ಹುದ್ದೆಗೆ ನೇಮಕಾತಿ ಹೊಂದಿ ನೇಮಕಾತಿ ಆದೇಶದ ಷರತ್ತಿನಂತೆ ಇದುವರೆಗೂ ಕರ್ತವ್ಯದ ಮೇಲೆ ಹಾಜರಾಗದಿರುವುದರಿಂದ ಹಾಗೂ ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸುವ ಸಂಬಂಧ ಕೋರಲಾದ ಮಾಹಿತಿಯನ್ನು ಇದುವರೆಗೂ ಸಲ್ಲಿಸದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 18(3)ರನ್ವಯ ಡಾ॥ ರಶ್ಮಿ, ಎಲ್. ರವರ ಪಶುವೈದ್ಯಾಧಿಕಾರಿ ಹುದ್ದೆಯ ನೇಮಕಾತಿಯನ್ನು ರದ್ದುಪಡಿಸಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಡಾ॥ ರಶ್ಮಿ, ಎಲ್. ಇವರು ಉನ್ನತ ವ್ಯಾಸಂಗ ಪೂರ್ಣಗೊಳಿಸಿ ಪಶುವೈದ್ಯಾಧಿಕಾರಿ ಹುದ್ದೆಗೆ ಹಾಜರಾಗಲು ಕಾಲಾವಕಾಶ ವಿಸ್ತರಿಸುವ ಸಂಬಂಧ ಕೋರಿರುವ ಮಾಹಿತಿ/ದಾಖಲೆ ಒದಗಿಸಿರುವುದಿಲ್ಲ. ನೆನಪೋಲೆ ಬರೆದು ಕಾಲಾವಕಾಶ ವಿಸ್ತರಣೆ ಪಡೆಯಲು ಅಂತಿಮ ಅವಕಾಶ ನೀಡಿದಾಗ್ಯೂ ಅದಕ್ಕೂ ಸಹ ಸ್ಪಂದಿಸಿರುವುದಿಲ್ಲ ಮತ್ತು ನೇಮಿಸಿದ ಸ್ಥಳದಲ್ಲಿ ಇದುವರೆಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಇದರಿಂದಾಗಿ ಡಾ॥ ರಶ್ಮಿ, ಎಲ್. ಇವರಿಗೆ ಸರ್ಕಾರಿ ಸೇವೆಗೆ ಸೇರಲು ಆಸಕ್ತಿ ಇಲ್ಲದಿರುವುದು ಮತ್ತು ಸರ್ಕಾರಿ ಸೇವೆಗೆ ಸೇರಲು ಇಷ್ಟವಿಲ್ಲದಿರುವ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ ಇಲಾಖಾ ಆಯುಕ್ತರ ಶಿಫಾರಸ್ಸಿನಂತೆ ನೇಮಕಾತಿ ಆದೇಶದ ಷರತ್ತಿನಂತೆ ಕರ್ತವ್ಯಕ್ಕೆ ಹಾಜರಾಗದ ಡಾ॥ ರಶ್ಮಿ, ಎಲ್. ಇವರ ಪಶುವೈದ್ಯಾಧಿಕಾರಿ ಹುದ್ದೆಯ ನೇಮಕಾತಿಯನ್ನು ರದ್ದುಪಡಿಸುವುದು ಸೂಕ್ತ ಎಂದು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಆದೇಶ ಸಂಖ್ಯೆ: ಪಸಂಮೀ 426 ಪಸಸೇ 2009, ಬೆಂಗಳೂರು, ದಿನಾಂಕ: 30-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ರಶ್ಮಿ, ಎಲ್. ಇವರು ಎಂ.ವಿ.ಎಸ್ಸಿ., ಉನ್ನತ ವ್ಯಾಸಂಗ ಪೂರ್ಣಗೊಳಿಸುವ ಸಂಬಂಧ ಕಾಲಾವಕಾಶ ವಿಸ್ತರಣೆಗೆ ಕೋರಿರುವ ಮಾಹಿತಿಯನ್ನು ಸಲ್ಲಿಸದಿರುವುದರಿಂದ ಹಾಗೂ ನೇಮಕಾತಿ ಆದೇಶದ ಷರತ್ತಿನಂತೆ ನೇಮಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗದಿರುವುದರಿಂದ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಶಿಫಾರಸ್ಸಿನಂತೆ ಡಾ॥ ರಶ್ಮಿ, ಎಲ್. ಇವರ ಪಶುವೈದ್ಯಾಧಿಕಾರಿ ಹುದ್ದೆಯ ನೇಮಕಾತಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 18(3) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಪಿ. ನಾಗರಾಜ

ಪೀಠಾಧಿಕಾರಿ-2

ಪಿ.ಆರ್. 2353

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ ಆದೇಶ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಜಿಎಡಿ 7 ಡಿಎಸ್‌ಡಬ್ಲ್ಯೂ 69 ದಿನಾಂಕ : 19-10-1972.
2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 215 ಎಲ್‌ಎಂಎಕ್ಸ್ 86 ದಿನಾಂಕ : 20-10-1990.
3. ಅಧಿಸೂಚನೆ ಸಂಖ್ಯೆ : ಸಿಆಸುಇ 667 ಎಲ್‌ಎಂಎಕ್ಸ್ 98 ದಿನಾಂಕ : 22-10-1999.
4. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 11 ಈಸಪ 2008, ದಿನಾಂಕ : 18-06-2008.
5. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರ ಪತ್ರ ಸಂಖ್ಯೆ : ಜಿಇಎ 878/2010-11 ದಿನಾಂಕ : 2-8-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1), (2) ಮತ್ತು (3)ರಂತೆ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ರಚಿಸುವ ಬಗ್ಗೆ ನಿಯಮಗಳನ್ನು ರೂಪಿಸಲಾಗಿದೆ. ಅದರಂತೆ, ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಕಾಲಕಾಲಕ್ಕೆ ಎರಡು ವರ್ಷಗಳ ಅವಧಿಗೆ ಪುನರ್ ರಚಿಸಲಾಗುತ್ತಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿನ ದಿನಾಂಕ : 18-06-2008ರ ಸರ್ಕಾರದ ಆದೇಶದಲ್ಲಿ ರಚಿಸಲಾಗಿರುವ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯ ಎರಡು ವರ್ಷಗಳ ಅವಧಿಯು ದಿನಾಂಕ : 17-06-2010ಕ್ಕೆ ಮುಕ್ತಾಯಗೊಂಡಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಮುಂದಿನ 2 ವರ್ಷಕ್ಕೆ ಪುನರ್ ರಚಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 1 ಈಸಪ 2010, ಬೆಂಗಳೂರು, ದಿನಾಂಕ: 26.08.2010

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಮತ್ತು ನೌಕರರ ಸಂಘದ ಪ್ರತಿನಿಧಿಗಳನ್ನೊಳಗೊಂಡ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಸರ್ಕಾರವು ಕೆಳಕಂಡಂತೆ ಪುನರ್ ರಚಿಸಿದೆ.

ಸರ್ಕಾರದ ಪ್ರತಿನಿಧಿಗಳು

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ – ಅಧ್ಯಕ್ಷರು
2. ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಆಡಳಿತ) – ಸದಸ್ಯರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ) – ಸದಸ್ಯರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ – ಸದಸ್ಯರು
5. ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ – ಸದಸ್ಯರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ) – ಸದಸ್ಯರು
7. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಸದಸ್ಯರು

ನೌಕರರ ಸಂಘದ ಪ್ರತಿನಿಧಿಗಳು

ಕ್ರಸಂ	ಹೆಸರು ಮತ್ತು ಕಛೇರಿ	ಇಲಾಖೆ	ಸಮಿತಿಯಲ್ಲಿನ ಪದನಾಮ
01.	ಶ್ರೀ ಎಲ್. ಬೈರಪ್ಪ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.	ಕರ್ನಾಟಕ ಸರ್ಕಾರದ ಸಚಿವಾಲಯ, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.	ಸದಸ್ಯರು
02.	ಶ್ರೀ ರಂಗೇಗೌಡ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ್‌ರಾವ್ ವೃತ್ತ, ಬೆಂಗಳೂರು.	ಸದಸ್ಯರು
03.	ಶ್ರೀ ಬಿ.ಎಸ್. ಪ್ರಭಾಕರ್ ಪ್ರಸಾದ್ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.	ಸಿಟಿ ಸಿವಿಲ್ ಕೋರ್ಟ್, ಕೋರ್ಟ್ ಕಾಂಪ್ಲೆಕ್ಸ್, ಪೋಸ್ಟ್ ಆಫೀಸ್ ರಸ್ತೆ, ಬೆಂಗಳೂರು.	ಸದಸ್ಯರು
04.	ಶ್ರೀ ಚೌಡಯ್ಯ ಖಜಾಂಚಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.	ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರೇಸ್ ಕೋರ್ಸ್ ರಸ್ತೆ, ಖನಿಜ ಭವನ, ಬೆಂಗಳೂರು.	ಸದಸ್ಯರು
05.	ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಗಾಂಧಿನಗರ, ಬೆಂಗಳೂರು.	ಶಿಕ್ಷಣ ಇಲಾಖೆ	ಸದಸ್ಯರು
06.	ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ಗ್ರೂಪ್-ಡಿ ನೌಕರರ ಸಂಘ, ಬೆಂಗಳೂರು.	ಲೋಕೋಪಯೋಗಿ ಇಲಾಖೆ	ಸದಸ್ಯರು
07.	ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ವಾಹನ ಚಾಲಕರ ಕೇಂದ್ರ ಸಂಘ, ಕೆ.ಕೆ.ಗೆಸ್ಟ್‌ಹೌಸ್ ಆವರಣ ಹೈಗ್ರೌಂಡ್, ಬೆಂಗಳೂರು.	ಆರೋಗ್ಯ ಇಲಾಖೆ	ಸದಸ್ಯರು
08.	ಶ್ರೀ ಜಿ. ಸಿದ್ದಗಂಗಯ್ಯ ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ, ಅಧಿಕಾರಿಗಳ ಸಂಘ, ಬಹುಮಹಡಿ ಕಟ್ಟಡ, ಬೆಂಗಳೂರು.	ಕರ್ನಾಟಕ ಸರ್ಕಾರ ಸಚಿವಾಲಯ, ಲೋಕೋಪಯೋಗಿ ಇಲಾಖೆ.	ಸದಸ್ಯರು

09.	ಶ್ರೀ ಪುಟ್ಟೇಗೌಡ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.	ಕಂದಾಯ ಇಲಾಖೆ	ಸದಸ್ಯರು
10.	ಶ್ರೀ ಜಿ.ಎಂ. ಸಣ್ಣಮುದ್ದಯ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ತುಮಕೂರು.	ಜಿಲ್ಲಾ ಪಂಚಾಯತ್	ಸದಸ್ಯರು
11.	ಶ್ರೀ ಹೆಚ್. ಅಪ್ಪಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಮಂಡ್ಯ.	ರಾಜ್ಯ ಲೆಕ್ಕಪತ್ರ ಇಲಾಖೆ	ಸದಸ್ಯರು
12.	ಶ್ರೀಮತಿ ಪ್ರಭಾ ಅಧೀಕ್ಷಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.	ಖಜಾನೆ ಇಲಾಖೆ	ಸದಸ್ಯರು

2. ಜಂಟಿ ಸಮಾಲೋಚನಾ ಸಮಿತಿಯ ಅಧ್ಯಕ್ಷರು, ಸಮಿತಿಯ ಮೊದಲನೆಯ ಸಭೆಯಲ್ಲಿ ಸದಸ್ಯರೊಡನೆ ಸಮಾಲೋಚಿಸಿ, ಸದಸ್ಯರಲೊಬ್ಬರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸುವರು.

3. ಈ ಪುನರ್ ರಚಿಸಲಾದ ಜಂಟಿ ಸಮಾಲೋಚನಾ ಸಮಿತಿಯು ದಿನಾಂಕ : 19-10-1972 ರಲ್ಲಿನ ಸರ್ಕಾರದ ಆದೇಶದ ಸಂಖ್ಯೆ : ಜಿಎಡಿ 7 ಡಿಎಸ್‌ಡಬ್ಲ್ಯೂ 69ರ ನಿಯಮ 7(ಬಿ)ರ ಪ್ರಕಾರ ಈ ಆದೇಶ ಹೊರಡಿಸಿದ ದಿನಾಂಕದಿಂದ ಎರಡು (2) ವರ್ಷಗಳ ಅವಧಿಯವರೆಗೆ ಇರುತ್ತದೆ.

4. ಸಮಿತಿಯ ವ್ಯವಹಾರಗಳನ್ನು ದಿನಾಂಕ : 19-10-1972ರ ಸರ್ಕಾರದ ಆದೇಶ ಸಂಖ್ಯೆ : ಜಿಎಡಿ 7 ಡಿಎಸ್‌ಡಬ್ಲ್ಯೂ 69 ಮತ್ತು ತದನಂತರದ ತಿದ್ದುಪಡಿಗಳಿಗನುಗುಣವಾಗಿ ನಡೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಬಿ. ದೇಪೂರ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಾಧ್ಯಯನ)

ಪಿ.ಆರ್. ನಂ. 2341

FOREST, ENVIRONMENT AND ECOLOGY SECRETARIAT

CORRIGENDUM

No. FEE 176 FAP 2010, BANGALORE, DATED : 18-08-2010

The words appearing "Additional Principal Chief Conservator of Forests (Development) Member Secretary and Mission Director" in the Corrigendum No. FEE 217 FAP 2006, dated : 28-09-2007 of the order dated : 22-02-2007 read as "Chief Conservator of Forests (NAFP-&-Bamboo Mission).

By Order and in the name of the Governor of Karnataka
P.R. KALAVATHI
Under Secretary to Government,
Forest, Environment and Ecology Department

P.R. No. 2342

FOREST, ENVIRONMENT AND ECOLOGY SECRETARIAT

CORRIGENDUM

No. FEE 176 FAP 2010, BANGALORE, DATED : 18-08-2010

The words appearing "Additional Principal Chief Conservator of Forests (Development) in the Order Portion Executive Body Sl. No. 17 and General Body Sl. No. 25 of the G.O. No. FEE 217 FAP 2006, dated : 28-09-2007 read as "Chief Conservator of Forests (NAFP-&-Bamboo Mission).

By Order and in the name of the Governor of Karnataka
P.R. KALAVATHI
Under Secretary to Government,
Forest, Environment and Ecology Department

P.R. No. 2343

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕೆಳದರ್ಜೆಗಿಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 548, ಎಸ್‌ಎಎಸ್ 08 ದಿನಾಂಕ : 31-01-2009.
2. ಸರ್ಕಾರದ ಆದೇಶ ಸಂಖ್ಯೆ : ಸಿಐ 50 ಎಸ್‌ಜಿಎಫ್ 2009, ದಿನಾಂಕ : 18-03-2009.
3. ಸರ್ಕಾರದ ಪತ್ರ ಸಂಖ್ಯೆ : ಡಿಪಿಎಆರ್/365/ಎಸ್‌ಎಎಸ್/2009, ದಿನಾಂಕ : 19-08-2010.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿನ, ದಿನಾಂಕ : 31-01-09ರ ಸಿ.ಆ.ಸು. ಇಲಾಖೆ ಅಧಿಸೂಚನೆಯಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕೆಳದರ್ಜೆಗಿಳಿಸಿ ಸದರಿ ಹುದ್ದೆಗೆ ಶ್ರೀ ಎ.ಕೆ. ಮೊನ್ನಪ್ಪ, ಭಾ.ಆ.ಸೇ. ರವರನ್ನು ನೇಮಿಸಲಾಗಿದ್ದು, ಅದರಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಮೇಲೆ ಓದಲಾದ (2)ರಲ್ಲಿರುವ ದಿನಾಂಕ : 18-03-2009ರ ಆದೇಶದಲ್ಲಿ ಐ.ಎ.ಎಸ್. ವೇತನ ಶ್ರೇಣಿ 15600-39100 + Pay Grade 7600ಕ್ಕೆ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿರುವ ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆಸು.ಇ. (ಸೇವೆಗಳು-1)ರವರ ದಿನಾಂಕ : 19-08-2010ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ದಿನಾಂಕ : 31-01-2011ರವರೆಗೆ ಅಥವಾ ಹುದ್ದೆಯನ್ನು ಪುನರ್‌ಜೀವಿತಗೊಳಿಸುವವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶ ಹೊರಡಿಸುವಂತೆ, ಸೂಚಿಸಿದ್ದಾರೆ. ಆದ್ದರಿಂದ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 130 ಎಸ್‌ಜಿಎಫ್ 2010, ಬೆಂಗಳೂರು, ದಿನಾಂಕ: 03.09.2010

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಮೇರೆಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ತಾತ್ಕಾಲಿಕವಾಗಿ ದಿನಾಂಕ : 31-01-2011ರವರೆಗೆ ಅಥವಾ ಈ ಹುದ್ದೆಯನ್ನು ಪುನರ್‌ಜೀವಿತಗೊಳಿಸುವವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2344

ಪಿ. ಆನಂದ್‌ಕುಮಾರ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2010-11ನೇ ಸಾಲಿಗೆ ಮೊದಲನೇ ಕಂತಿನ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ. 01. ಡಬ್ಲ್ಯೂಜಿಪಿ. 2010, ದಿನಾಂಕ : 20-04-2010.
2. ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂಖ್ಯೆ : ಪಿಸಿ(ಪಿ)19/125/ಕೆಎಆರ್/2010 – ಡಬ್ಲ್ಯೂಜಿಎಸ್ ದಿನಾಂಕ : 10-08-2010.
3. ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂಖ್ಯೆ : ಪಿಸಿ(ಪಿ)19/320/ಎಸ್‌ಸಿಎ/2010 – ಡಬ್ಲ್ಯೂಜಿಎಸ್ ದಿನಾಂಕ : 10-08-2010
4. ಆರ್ಥಿಕ ಇಲಾಖೆಯ ಜಮಾ ಧೃಢೀಕರಣ ಪತ್ರ CCS No. FD. 13. BGL-2010 ದಿನಾಂಕ : 20-08-2010.

ಪ್ರಸ್ತಾವನೆ:

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನವನ್ನು ಮೇಲೆ ಓದಲಾದ ಪತ್ರ (1)ರಂತೆ 2010-11ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ (2) ರಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2010-11ನೇ ಸಾಲಿನಲ್ಲಿ ರೂ. 2924.00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತದೆ. ಇದರಲ್ಲಿ ಶೇ. 90 ಭಾಗ ಅಂದರೆ ರೂ. 2631.60 ಲಕ್ಷ ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿರುವ ನಿಧಿ ರೂಪದ್ದಾಗಿದ್ದು, ಉಳಿಕೆ ಶೇ. 10 ಭಾಗ ಅಂದರೆ ರೂ. 292.40 ಲಕ್ಷ ರಾಜ್ಯದ ಪಾಲಾಗಿರುತ್ತದೆ. ಆ ಸಚಿವಾಲಯವು ಮೇಲೆ ಓದಲಾದ ಪತ್ರ (3)ರಲ್ಲಿ ಪ್ರಸಕ್ತ ಸಾಲಿನ ಒಟ್ಟಾರೆ ಅನುದಾನ ರೂ. 2924.00 ಲಕ್ಷ ಪೈಕಿ ಶೇ. 90ರಷ್ಟು ಅಂದರೆ ರೂ. 2631.60 ಲಕ್ಷ ಆಗಲಿದ್ದು, ಅದರಲ್ಲಿ ಶೇ. 75ರಷ್ಟು ವಿಶೇಷ ಕೇಂದ್ರ ಅನುದಾನದ ನಿಧಿ ಭಾಗದ ಮೊತ್ತವಾದ ರೂ. 1973.70 ಲಕ್ಷಗಳನ್ನು ಮೊದಲನೇ ಕಂತಿನ ಅನುದಾನವಾಗಿ ರಾಜ್ಯಕ್ಕೆ ಬಿಡುಗಡೆ ಮಾಡಿದೆ. ಈ ಅನುದಾನವು ರಾಜ್ಯ ಸರ್ಕಾರದ ಖಾತೆಗೆ ಜಮಾ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಪತ್ರ(4)ರಂತೆ ಜಮಾ ಧೃಢೀಕರಣ ಪತ್ರವನ್ನು ನೀಡಿರುತ್ತದೆ. ಈ ಅನುದಾನದ ಜೊತೆಗೆ ರಾಜ್ಯದ ಪಾಲಿನ ಶೇ. 10 ಅನುದಾನವಾದ ರೂ. 219.30 ಲಕ್ಷ ಗಳನ್ನು ಸೇರಿಸಿ ರಾಜ್ಯದ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ. 3. ಪಘಯೋ 2010(ಭಾ) ಬೆಂಗಳೂರು, ದಿನಾಂಕ: 01.09.2010

ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು 2010-11ನೇ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆಯ ಅನ್ವಯ ಅನುಷ್ಠಾನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊದಲನೇ ಕಂತಿನ ವಿಶೇಷ ಕೇಂದ್ರ ಅನುದಾನ ರೂ. 1973.70 ಲಕ್ಷ ಮತ್ತು ರಾಜ್ಯದ ಪಾಲಿನ ಶೇ. 10 ಅನುದಾನವಾದ ರೂ. 219.30 ಲಕ್ಷಗಳನ್ನು ಸೇರಿಸಿ ಒಟ್ಟಾರೆ ರೂ. 2193.00 ಲಕ್ಷಗಳ ಪೈಕಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಯೋಜನಾ ಕೋಶಕ್ಕೆ ರೂ. 22.50 ಲಕ್ಷ ಅನುದಾನ ಹೊಂದಾಣಿಕೆ ಮಾಡಿಕೊಂಡು ಬಾಕಿ ಉಳಿದ

ಅನುದಾನ ರೂ. 2170.50 ಲಕ್ಷಗಳನ್ನು (ರೂ. ಇಪ್ಪತ್ತೊಂದು ಕೋಟಿ ಎಪ್ಪತ್ತು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ) ರಾಜ್ಯದ 11 ಜಿಲ್ಲಾ ಪಂಚಾಯತಿಗಳಿಗೆ ಅನುಬಂಧ-1 ರಲ್ಲಿ ತೋರಿಸಿರುವಂತೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

1. 2010-11ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಯ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ನಮೂದಿಸಿರುವ ಕಾರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.
2. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.
3. ಒಂದು ವಲಯಕ್ಕೆ ನಿಗದಿಪಡಿಸಿರುವ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು.
4. ಸಾಂಬಾರು ಮಂಡಳಿಯ ಕಾರ್ಯಕ್ರಮಗಳಿಗೆ ಪ್ರಸ್ತುತ ಕಂತಿನಲ್ಲಿ ಒದಗಿಸಿರುವ ಅನುದಾನ ರೂ. 9.61 ಲಕ್ಷಗಳನ್ನು ಆ ಮಂಡಳಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯು ಬಿಡುಗಡೆ ಮಾಡುವುದು.
5. 2009-10ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚಾಗದೇ ಉಳಿದ ಅನುದಾನವನ್ನು 2010-11ನೇ ಸಾಲಿಗೆ ನಿಮ್ಮ ಜಿಲ್ಲೆಯ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಸಮಯದಲ್ಲಿ ಹೊಂದಾಣಿಕೆ ಮಾಡಲಾಗುವುದು ಹಾಗೂ ಪ್ರಸಕ್ತ ಸಾಲಿನ **ಮೊದಲನೇ ಕಂತಿನ ಅನುದಾನದಲ್ಲಿ ಶೇಕಡ 60ಕ್ಕಿಂತ ಹೆಚ್ಚಾಗಿ ಖರ್ಚು ಮಾಡಿದಲ್ಲಿ ಮಾತ್ರ ಎರಡನೇ ಕಂತಿನ ಅನುದಾನ ಈ ಸಾಲಿನಲ್ಲಿ ಕೇಂದ್ರದಿಂದ ಬಿಡುಗಡೆಯಾಗಲಿದೆ ಎಂಬ ಅಂಶವನ್ನು ಮುಖ್ಯವಾಗಿ ಗಮನಿಸುವುದು.**
6. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲೇ ಪ್ರತಿ ತ್ರೈಮಾಸಿಕ ವರದಿಯನ್ನು ಸಕಾಲದಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು. (Statement-I-Financial, Statement-II-Physical, verification report for beneficiary oriented schemes, verification report for schemes relating to construction works).
7. ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು-ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆಯುವುದು. 2551-ಗುಡ್ಡಗಾಡು ಪ್ರದೇಶಗಳು-01-ಪಶ್ಚಿಮ ಘಟ್ಟಗಳು-001-ನಿರ್ದೇಶನ ಮತ್ತು ಆಡಳಿತ-0-01-ಯೋಜನಾ ಕೋಶ-059-ಇತರೆ ಖರ್ಚು(ಯೋಜನೆ)-2551-01-001-0-01-059, 2551-01-001-0-01-422(SCP) ಮತ್ತು 2551-01-001-0-01-423(TSP)

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ.ಗ್ರಾಅಪ.192.ಪಿಬಿಎಸ್. 2010ರ ದಿನಾಂಕ : 30-08-2010ರಲ್ಲಿ ಸಹಮತಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ.ಎ. ಮೇಘಣ್ಣವರ
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು
ಹಾಗೂ ಪದ ನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಅನುಬಂಧ-1

ಸರ್ಕಾರದ ಆದೇಶ ಸಂ.ಗ್ರಾಅಪ. 3. ಪಘಯೋ 2010(ಭಾ) ಬೆಂಗಳೂರು, ದಿನಾಂಕ : 01-09-2010

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2010-11ನೇ ಸಾಲಿನ ಜಿಲ್ಲಾವಾರು ಮೊದಲನೇ ಕಂತಿನ ಅನುದಾನ ಬಿಡುಗಡೆ ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	2010-11ನೇ ಸಾಲಿನ ಜಿಲ್ಲಾವಾರು ಅನುದಾನ ಹಂಚಿಕೆ	ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿರುವ ಮೊದಲನೇ ಕಂತಿನ ಅನುದಾನ				ಕಾಲಂ 4ರ ಪೈಕಿ ಸಾಂಬಾರು ಮಂಡಳಿಗೆ ಬಿಡುಗಡೆ ಆಗಿರುವ ಅನುದಾನ
			2551-01-001-0-01-059 ಇತರೆ ಖರ್ಚು	2551-01-001-0-01-422 SCP	2551-01-001-0-01-423 TSP	ಒಟ್ಟು ಮೊತ್ತ	
1	2	3	4	5	6	7	8
1	ಬೆಳಗಾಂ	467.75	166.92	69.41	114.49	350.82	-
2	ಚಾಮರಾಜನಗರ	86.20	27.64	22.20	14.81	64.65	-
3	ಚಿಕ್ಕಮಗಳೂರು	276.35	119.77	66.60	20.89	207.26	-
4	ದಕ್ಷಿಣ ಕನ್ನಡ	206.30	88.50	39.22	27.00	154.72	-
5	ಧಾರವಾಡ	67.20	32.31	7.22	10.87	50.40	-
6	ಹಾಸನ	221.65	76.70	82.20	7.34	166.24	2.65
7	ಕೊಡಗು	247.90	114.78	35.36	35.78	185.92	2.50

8	ಮೈಸೂರು	96.95	31.39	22.50	18.82	72.71	–
9	ಶಿವಮೊಗ್ಗ	410.45	211.72	73.39	22.73	307.84	2.48
10	ಉತ್ತರ ಕನ್ನಡ	516.40	307.01	48.26	32.03	387.30	1.98
11	ಉಡುಪಿ	296.85	160.43	33.64	28.57	222.64	–
	ಒಟ್ಟು :	2894.00	1337.17	500.00	333.33	2170.50	9.61
12	ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ ಯೋಜನಾ ಕೋಶ	30.00	22.50	0	0	22.50	–
	ಜುಮ್ಲಾ	**2924.00**	**1359.67**	**500.00**	**333.33**	**2193.00**	**9.61**

ಪಿ.ಎ. ಮೇಘಣ್ಣವರ
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು
ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. ನಂ. 2345

ನಗರಾಭಿವೃದ್ಧಿ ಸಚಿವಾಲಯ

ವಿಷಯ : ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಿವಿಧ ಬಡಾವಣೆಗಳನ್ನು ದಾವಣಗೆರೆ ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 30 ಎಂಐಬಿ 76, ದಿನಾಂಕ 28-09-1977.
2. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 4 ಎಂಐಬಿ 79, ದಿನಾಂಕ 3-01-1980.
3. ಸರ್ಕಾರದ ಆದೇಶ ಸಂಖ್ಯೆ: ವನಇ 4 ಎಂಐಬಿ 87, ದಿನಾಂಕ 15-04-1987.
4. ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರರವರ ಪತ್ರ ಸಂಖ್ಯೆ: ದಾಹನಪ್ರಾ/ತಾಶಾ/02/ಸಿಆರ್/126/2006-07/145, ದಿನಾಂಕ: 8-5-2009
5. ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ ಇವರ ಪತ್ರ ಸಂಖ್ಯೆ: ದಾಮನಪಾ/ಕಾಇಂ/09-10, ದಿನಾಂಕ:18-3-2010

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ದಾವಣಗೆರೆ ನಗರಾಭಿವೃದ್ಧಿ ಮಂಡಳಿಗೆ ಮಂಡಕ್ಕಿಬಟ್ಟಿ ಪುನರ್ವಸತಿಗಾಗಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (2) ರ ಆದೇಶದಲ್ಲಿ ದಾವಣಗೆರೆ ನಗರಾಭಿವೃದ್ಧಿ ಮಂಡಳಿಗೆ ದಾವಣಗೆರೆಯ ಬೀಡಿ ಕಾರ್ಮಿಕರು, ಆರ್ಥಿಕವಾಗಿ ಹಿಂದುಳಿದ ವರ್ಗದ ಸಂಘಕ್ಕೆ ಅನೆಕೊಂಡ ಗ್ರಾಮದಲ್ಲಿ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ ದಾವಣಗೆರೆ ನಗರಾಭಿವೃದ್ಧಿ ಮಂಡಳಿಗೆ ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯಲ್ಲಿ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಲು ಮಂಜೂರಾತಿ ನೀಡಿ, ಆದೇಶಿಸಲಾಗಿದೆ.

ಮೇಲೆ ಓದಲಾದ (4)ರ ಪತ್ರದಲ್ಲಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ಸರ್ ಮಿರ್ಜಾ ಇಸ್ಮಾಯಿಲ್‌ನಗರ ಬಡಾವಣೆ (ಬೀಡಿ ಕಾರ್ಮಿಕರ ಪುನರ್‌ವಸತಿ ಯೋಜನೆ) ಹಾಗೂ ಶ್ರೀ ಮಹಮ್ಮದಾಲಿ ಜೋಹರ್‌ನಗರ ಬಡಾವಣೆ (ಮಂಡಕ್ಕಿಬಟ್ಟಿ ಪುನರ್‌ವಸತಿ ಯೋಜನೆ) ಗಳನ್ನು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿದ್ದು, ನಾಗರೀಕರಿಗೆ ನೀರು ಪೂರೈಕೆ, ರಸ್ತೆ ನಿರ್ವಹಣೆ ಹಾಗೂ ಒಳಚರಂಡಿ ನಿರ್ವಹಣೆ ಮತ್ತು ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮತ್ತು ಕಟ್ಟಡಗಳ ನವೀಕರಣದಂತಹ ವಿಷಯಗಳಿಗೆ ನಗರಸಭೆಗೆ ಬಂದು ತುರ್ತಾಗಿ ಕಾಮಗಾರಿಗಳನ್ನು ನಿರ್ವಹಿಸಲು ಒತ್ತಾಯ ಮಾಡುತ್ತಿರುತ್ತಾರೆಂದು ತಿಳಿಸಿ, ಈ ಬಗ್ಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಆಡಳಿತಾತ್ಮಕ ತೊಂದರೆಯಾಗಿರುವುದರಿಂದ ಮೇಲ್ಕಂಡ ಬಡಾವಣೆಗಳು ನಗರಸಭೆಯ ವ್ಯಾಪ್ತಿಯ ಮಧ್ಯಭಾಗದಲ್ಲಿರುವುದರಿಂದ ಇವುಗಳನ್ನು ನಿರ್ವಹಣೆಗಾಗಿ ನಗರಸಭೆಗೆ ಹಸ್ತಾಂತರಿಸಲು ಕೋರಿರುತ್ತಾರೆ.

ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆರವರು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರವು ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯ 109 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಬಡಾವಣೆ, ಸರ್ ಮಿರ್ಜಾ ಇಸ್ಮಾಯಿಲ್ ಬಡಾವಣೆಯ 36 ಎಕರೆ 28 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಬೀಡಿ ಕಾರ್ಮಿಕರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಪುನರ್ವಸತಿ ಬಡಾವಣೆ, ಶ್ರೀ ಮಹಮ್ಮದಾಲಿ ಜೋಹರ್‌ನಗರ ಬಡಾವಣೆಯನ್ನು 38 ಎಕರೆ 38 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ದಾವಣಗೆರೆ ನಗರದ ಮಂಡಕ್ಕಿಭಟ್ಟಿ ಕಾರ್ಮಿಕರ ಪುನರ್ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿದ್ದು, ಸದರಿ ಬಡಾವಣೆಗಳನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಮಹಾನಗರ ಪಾಲಿಕೆಯ ಕಂದಾಯಾಧಿಕಾರಿಗಳು ಹಾಗೂ ಸಂಬಂಧಿಸಿದ ಅಭಿಯಂತರರು ಪರಿವೀಕ್ಷಣೆ ಮಾಡಿದ್ದು, ಬಡಾವಣೆಗಳಿಗೆ ಪ್ರಾಧಿಕಾರವು ಮೂಲಭೂತ

ಸೌಕರ್ಯಗಳನ್ನು ಒದಗಿಸಿದ್ದು, ಸದರಿ ಬಡಾವಣೆಗಳ ನಿರ್ವಹಣೆಗಾಗಿ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲು ಒಪ್ಪಿಗೆ ನೀಡಿ ಸಂಬಂಧಿಸಿದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 138 ಬೆಂರೂಪ್ರಾ 2009, ಬೆಂಗಳೂರು, ದಿನಾಂಕ: 8ನೇ ಜೂನ್ 2010.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 30 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ಸರ್ ಮಿರ್ಜಾ ಇಸ್ಮಾಯಿಲ್‌ನಗರ ಬಡಾವಣೆ (ಬೀಡಿ ಕಾರ್ಮಿಕರ ಪುನರ್‌ವಸತಿ ಯೋಜನೆ) ಹಾಗೂ ಶ್ರೀ ಮಹಮ್ಮದಾಲಿ ಜೋಹರ್‌ನಗರ ಬಡಾವಣೆ (ಮಂಡಕ್ಕಿಭಟ್ಟಿ ಪುನರ್‌ವಸತಿ ಯೋಜನೆ) ಗಳನ್ನು ದಾವಣಗೆರೆ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಂ.ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 1497

ಶಿಕ್ಷಣ ಸಚಿವಾಲಯ

188	SHIVAPUTRA GIRGANTE S/O SHANKREPPA GIRGANTE BELUR TQ. BASAVA KALYAN DIST. BIDAR BIDAR-585346	942	01/07/79	C1/PDP BA B.Ed	56.89
189	MIRZAMAHBOOB BAIG MIRZA MAHBOOB BAIG POST KAMALAPUR TQ & DIST GULBARGA GULBARGA-585313	315	01/06/80	2B/RL Bsc B.Ed	56.00
190	JALEEL AHMED KHAN NO.467, DODDAKAVALANDE VILLAGE AND POST NANJANGUD TALUK MYSORE DIST MYSORE-571312	192	28/04/83	2B/RL BA B.Ed	56.00
191	SIKANDAR IBRAHIM NADAF SIKANDAR I NADAF AT POST NADI INGLAGAON TQ ATHANI BELGAUM-591304	599	01/05/83	2B BA B.Ed	56.00

SL. NO.	NAME OF THE CANDIDATE	INT. NO.	D_O_B	RESVN./ QUALN	PERCENTAGE
192	MAQDUM RIYAZ S/O FAYAZ AHAMED NEAR KABEERSWAMY MAT CHITRADURGA (TQ & DIST) CHITRADURGA DISTRICT-577501	308	26/02/86	2B BA B.Ed	56.00
193	HUSENASA RAJESA SALIMANI AT;PO;BENAL RS TQ;BAGEWADI DT;BIJAPUR BENAL, BAGEWADI-586201	166	08/07/78	2B/PDP BA B.Ed	55.78
194	SHIVANAND NAVI SHIVANAND NAVI AT POST-KAMBAGI TQ-BIJAPUR DIST.BIJAPUR-586125	566	01/06/83	2A/PDP BA B.Ed	54.89

V. B. PATIL
Secretary
Karnataka Public Service Commission.

PR-754

ಜಿಲ್ಲಾಧಿಕಾರಿಯವರ ಕಛೇರಿ, ತುಮಕೂರು ಜಿಲ್ಲೆ, ತುಮಕೂರು

ಅಧಿಕೃತ ಜ್ಞಾಪನ

ನಂ.ವಿಎಎಸ್ ಸಿಆರ್ 305/08–09, ದಿನಾಂಕ:23ನೇ ನವೆಂಬರ್, 2010

ವಿಷಯ: ತುಮಕೂರು ಜಿಲ್ಲೆಯ ಕಂದಾಯ ಇಲಾಖೆಯ ಗ್ರಾಮಲೆಕ್ಕಾಧಿಕಾರಿಗಳ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾದ ಹುದ್ದೆಗಳಿಗೆ ನೇಮಕಾತಿ ಆದೇಶದಂತೆ ಕರ್ತವ್ಯಕ್ಕೆ ಹಾಜರಾಗದ ಅಭ್ಯರ್ಥಿಗಳ ಆದೇಶ ರದ್ದುಪಡಿಸಿ ಹೆಚ್ಚುವರಿ ಪಟ್ಟಿ (waiting list) ನ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 299 ಬಿಎಸ್‌ಸಿ 2006. ದಿನಾಂಕ:03.02.2009.

2) ಸರ್ಕಾರದ ಅಧಿಸೂಚನೆ ನಂ.ಕಂಇ 299 ಬಿಎಸ್‌ಸಿ 2006 ದಿನಾಂಕ:24.07.2009 ಮತ್ತು 08.09.2009.

3) ಈ ಕಾರ್ಯಾಲಯದ ಸಮಸಂಖ್ಯೆ ಅಧಿಸೂಚನೆ ದಿನಾಂಕ:26.09.2009.

4) ಸರ್ಕಾರದ ಆದೇಶ ನಂ.ಆರ್‌ಡಿ 130 ಬಿಎಸ್‌ಸಿ 2007 ದಿನಾಂಕ:04.12.2007 ಮತ್ತು 09.02.2009.

5) ಈ ಕಛೇರಿಯ ದಿನಾಂಕ:30.11.2009ರ ಅಧಿಸೂಚನೆ.

6) ಈ ಕಛೇರಿಯ ಇದೇ ಕ್ರಮಾಂಕ ದಿನಾಂಕ:22.12.2009ರ ಅಧಿಸೂಚನೆ.

7) ಜಿಲ್ಲಾಧಿಕಾರಿಗಳು ದಿನಾಂಕ:28.01.2010ರ ಅಭ್ಯರ್ಥಿಗಳೊಂದಿಗೆ ನೇರ ಸಂದರ್ಶನ.

8) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರ ಪತ್ರದ ಸಂಖ್ಯೆ: ಕಂಇ.3198 ಸೇಬಿ 2010, ದಿನಾಂಕ:11.02.2010.

9) ಈ ಕಛೇರಿಯ ಈ ಪತ್ರದ ಸಮಸಂಖ್ಯೆ ದಿನಾಂಕ:02.03.2010.

ಸರ್ಕಾರದ ಉಲ್ಲೇಖ (1)ರ ಅಧಿಸೂಚನೆಯನ್ವಯ ತುಮಕೂರು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ 30 ಹುದ್ದೆಗಳಿಗೆ ಹಾಗೂ ಉಲ್ಲೇಖ (4)ರಲ್ಲಿ ತುಮಕೂರು ಜಿಲ್ಲೆಗೆ ಪ್ರತಿ ತಾಲ್ಲೂಕು ಕಛೇರಿಯ ಭೂಮಿ ಕೇಂದ್ರಗಳಿಗೆ ತಲಾ 05 ರಂತೆ 10 ತಾಲ್ಲೂಕು ಕೇಂದ್ರಗಳಿಗೆ ಮಂಜೂರಾಗಿರುವ 50 ಹುದ್ದೆಗಳು ಸೇರಿ ಒಟ್ಟು 80 ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಭರ್ತಿಗೊಳಿಸಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ನೀಡಲಾಗಿದೆ.

ಅದರಂತೆ, ಕರ್ನಾಟಕ ನಾಗರೀಕ ಸೇವಾ (Revenue Sub ordinate Branch) (Cadre and Recruitment) (Amendment) ನಿಯಮಗಳು, 2009ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ವಯ ಮೇಲ್ಕಂಡ ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಉಲ್ಲೇಖ (3)ರ ಅಧಿಸೂಚನೆಯ ಮೂಲಕ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಸ್ವೀಕೃತಿಯಾದ ಅರ್ಜಿಗಳನ್ನು ಅರ್ಹತೆ ಮತ್ತು ಮೀಸಲಾತಿಯನ್ವಯ ವಿಂಗಡಿಸಿ ಅರ್ಹ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿಯನ್ನು 1:3 ಅನುಪಾತದಲ್ಲಿ ಉಲ್ಲೇಖ (5)ರಲ್ಲಿನ ಅಧಿಸೂಚನೆಯಂತೆ ಪ್ರಕಟಿಸಲಾಯಿತು. ಹಾಗೂ ಈ ಪಟ್ಟಿಯ ಬಗ್ಗೆ ಆಕ್ಷೇಪಣೆ/ ತಕರಾರು ಅರ್ಜಿಗಳನ್ನು ಸಲ್ಲಿಸಲು ದಿನಾಂಕ:14.12.2009ರವರೆಗೆ ಕಾಲಾವಕಾಶವನ್ನು ನೀಡಲಾಯಿತು.

ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ದಿನಾಂಕ:15.12.2009ರಂದು ಪರಿಶೀಲಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:5887–5898/2009ರ ಪ್ರಕರಣದ ಅಂತಿಮ ತೀರ್ಮಾನಕ್ಕೊಳಪಡುವ ಷರತ್ತಿನ ಮೇರೆಗೆ ಅಂತಿಮ ಆಯ್ಕೆ ಪಟ್ಟಿಯನ್ನು ಉಲ್ಲೇಖ (6)ರಲ್ಲಿ ಕಾಣಿಸಿರುವ ಅಧಿಸೂಚನೆಯಂತೆ ದಿನಾಂಕ:22.12.2009ರಂದು ಪ್ರಕಟಿಸಲಾಯಿತು.

ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಗ್ರಾಮಲೆಕ್ಕಾಧಿಕಾರಿ ನೇರ ನೇಮಕಾತಿ ಪ್ರಾಧಿಕಾರ, ತುಮಕೂರು ಇವರು ದಿನಾಂಕ:28.01.2010ರಂದು ವೈಯಕ್ತಿಕ ಸಂದರ್ಶನ ನಡೆಸಲಾಯಿತು.

ಆಯ್ಕೆಯಾದ 80 ಅಭ್ಯರ್ಥಿಗಳ ಪೈಕಿ 77 ಅಭ್ಯರ್ಥಿಗಳಿಗೆ ಉಲ್ಲೇಖ 9 ರಂತೆ ನೇಮಕಾತಿ ಆದೇಶವನ್ನು ನೀಡಲಾಗಿತ್ತು. ಈ 77 ಅಭ್ಯರ್ಥಿಗಳ ಪೈಕಿ ದಿನಾಂಕ:02.03.2010ರ ನೇಮಕಾತಿ ಆದೇಶದ ಕ್ರಮಸಂಖ್ಯೆ 01, 17, 22, 36, 39, 55, 69, 75ರ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದ ಈ 8 ಅಭ್ಯರ್ಥಿಗಳ ನೇಮಕಾತಿಯನ್ನು ರದ್ದುಪಡಿಸಿದೆ. ಹಾಗೂ ನೇಮಕಾತಿ ತಡೆಹಿಡಿಯಲಾಗಿದ್ದ ಆಯ್ಕೆ ಪಟ್ಟಿಯ 03 ಅಭ್ಯರ್ಥಿಗಳು ಸೇರಿ ಒಟ್ಟು 11 ಹುದ್ದೆಗಳಿಗೆ ಹೆಚ್ಚುವರಿ ಪಟ್ಟಿ (waiting list) ಯಲ್ಲಿ (ದಿನಾಂಕ:22.12.2009ರಂದು ಪ್ರಕಟಿಸಿರುವಂತೆ) ನೇಮಕಾತಿ ಮಾಡಬೇಕಾದ 11 ಹುದ್ದೆಗಳಿಗೆ ಮೀಸಲಾತಿ ಅನ್ವಯ ಲಭ್ಯವಿರುವ 9 ಅರ್ಹ ಅಭ್ಯರ್ಥಿಗಳ ವಿವರ ಈ ಕೆಳಕಂಡಂತೆ ಇದ್ದು ಈ ಪೈಕಿ ಕ್ರ.ಸಂ. 1, 2, 3, 7, 8 ಮತ್ತು 9ರಲ್ಲಿ ಹೆಸರಿಸಿರುವ ಅಭ್ಯರ್ಥಿಗಳ ಬಾಬ್ತು ಪೂರ್ಣ ಪ್ರಮಾಣದಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದ ಸಿಂಧುತ್ವದ ಮಾಹಿತಿ ಬಂದಿದ್ದು, ಉಳಿದ ಕ್ರ.ಸಂ.4, 5 ಮತ್ತು 6 ರಲ್ಲಿ ಹೆಸರಿಸಿರುವ ಅಭ್ಯರ್ಥಿಗಳ ಬಾಬ್ತು ಪೂರ್ಣ ಪ್ರಮಾಣದಲ್ಲಿ (ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದ) ಸಿಂಧುತ್ವ ಬಂದಿರುವುದಿಲ್ಲ. ಹೆಸರಿಸಿರುವ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರಗಳ ಬರುವಿಕೆಯನ್ನು ಕಾಯ್ದಿರಿಸಿ ಈ ಆದೇಶದಲ್ಲಿನ ಕ್ರಮಸಂಖ್ಯೆ:1 ರಿಂದ 9 ರಲ್ಲಿ ಹೆಸರಿಸಿರತಕ್ಕ ಆಯ್ಕೆಯಾದ ಅಭ್ಯರ್ಥಿಗಳನ್ನು ಗ್ರಾಮಲೆಕ್ಕಾಧಿಕಾರಿ ಹುದ್ದೆಯ ರೂ.5800–100–6000–125–6500–150–7100–175–7800–200–8600–225–9500–250–10500 ವೇತನ ಶ್ರೇಣಿಯಲ್ಲಿ ಅವರ ಹೆಸರಿನ ಎದುರು ನಮೂದಿಸಿರುವ ಕಾರ್ಯಸ್ಥಳಕ್ಕೆ ಈ ಕೆಳಕಂಡ ನಿಬಂಧನೆಗಳನುಸಾರ ನೇಮಕಾತಿಗೊಳಿಸಿ ಆದೇಶ ಹೊರಡಿಸಿದೆ.

ಕ್ರ. ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ನೇಮಕಗೊಳಿಸಿದ ಹುದ್ದೆ ಮತ್ತು ಕಾರ್ಯಸ್ಥಳ	ಯಾರಲ್ಲಿ ಹಾಜರಾಗತಕ್ಕದ್ದು
1.	ಲಕ್ಷ್ಮೀ ಪಿ.ಎಲ್. ಬಿನ್ ಲಕ್ಷ್ಮೀನರಸಿಂಹ ಗುಪ್ತ, ವಜ್ಜನಕುರಿಕೆ, ಕೋಳಾಲ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.	ಭೂಮಿ ಕೇಂದ್ರ ತಾಲ್ಲೂಕು ಕಛೇರಿ ಮಧುಗಿರಿ	ತಹಶೀಲ್ದಾರ್ ಮಧುಗಿರಿ ತಾಲ್ಲೂಕು
2.	ಭೀಮಕುಮಾರ್ ಹೆಚ್. ಬಿನ್ ಹನುಮಂತಯ್ಯ ಬನ್ನೀನಗರ, ಶಿರಾ, ತುಮಕೂರು ಜಿಲ್ಲೆ.	ಹುಲೀಕುಂಟೆ ವೃತ್ತ ಹುಲೀಕುಂಟೆ ಹೋ. ಶಿರಾ ತಾಲ್ಲೂಕು.	ತಹಶೀಲ್ದಾರ್, ಶಿರಾ ತಾಲ್ಲೂಕು.
3.	ವನೀತಾ ಆರ್. ಬಿನ್ ರಾಧಾಕೃಷ್ಣ ಕೆ.ಎಸ್. ಕೋಳಿಹಳ್ಳಿ, ಹಿರೇಹಳ್ಳಿ ಅಂಚೆ, ತುಮಕೂರು ತಾಲ್ಲೂಕು.	ಭೂಮಿಕೇಂದ್ರ ತಾಲ್ಲೂಕು ಕಛೇರಿ, ತುರುವೇಕೆರೆ ತಾಲ್ಲೂಕು.	ತಹಶೀಲ್ದಾರ್ ತುರುವೇಕೆರೆ ತಾಲ್ಲೂಕು.
4.	ಮೋನಿಷ ಆರ್. ಬಿನ್ ರಾಮಕೃಷ್ಣಯ್ಯ, ಸಿಂಗನಹಳ್ಳಿ ಕಾಲೋನಿ, ಹಿರೇಹಳ್ಳಿ ಅಂಚೆ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು	ಭೂಮಿ ಕೇಂದ್ರ ತಾಲ್ಲೂಕು ಕಛೇರಿ ಕುಣಿಗಲ್ ತಾಲ್ಲೂಕು.	ತಹಶೀಲ್ದಾರ್ ಕುಣಿಗಲ್ ತಾಲ್ಲೂಕು.
5.	ವೀರೇಶ್‌ಕುಮಾರ್ ಎಸ್. ಬಿನ್ ಶಾಂತಾಚಾರ್ ಕಟ್ಟೇನಹಳ್ಳಿ, ಕೋರ (ಅಂಚೆ) ತುಮಕೂರು ತಾಲ್ಲೂಕು.	ಬೇವಿನಹಳ್ಳಿ ವೃತ್ತ, ಗೌಡಗೆರೆ ಹೋಬಳಿ, ಶಿರಾ ತಾಲ್ಲೂಕು.	ತಹಶೀಲ್ದಾರ್ ಶಿರಾ ತಾಲ್ಲೂಕು.
6.	ರಜಾಲಿ ಹೆಚ್.ಎ. ಬಿನ್ ಅಲಿ ನವಾಜ್ ಇಂದಿರಾ ಕಾಲೋನಿ, ಹೊಳವನಹಳ್ಳಿ ಅಂಚೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.	ಸಿಂಗನಹಳ್ಳಿ ವೃತ್ತ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.	ತಹಶೀಲ್ದಾರ್ ಮಧುಗಿರಿ ತಾಲ್ಲೂಕು.
7.	ವಿಜಯಲಕ್ಷ್ಮೀ ಹೆಚ್.ಎಂ. ಬಿನ್ ಮರಿಯಣ್ಣ ಹೆಚ್. ಹೊಸೂರು ಗ್ರಾಮ, ಗೌಡಗೆರೆ ಹೋಬಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.	ಭೂಮಿಕೇಂದ್ರ ತಾಲ್ಲೂಕು ಕಛೇರಿ, ಪಾವಗಡ ತಾಲ್ಲೂಕು.	ತಹಶೀಲ್ದಾರ್ ಪಾವಗಡ ತಾಲ್ಲೂಕು.
8.	ಮಹೇಶ್ ಜಿ. ಬಿನ್ ಗಂಗಣ್ಣ, ಗಂಗೇನಪುರ, ಎಣ್ಣೆಗೆರೆ ಅಂಚೆ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.	ಶಟ್ಟಿಗೆರೆ ವೃತ್ತ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು	ತಹಶೀಲ್ದಾರ್ ಕುಣಿಗಲ್ ತಾಲ್ಲೂಕು.
9.	ದೀಪಾ ಜಿ.ಆರ್. ಬಿನ್ ರಂಗನಾಥ್ ಜಿ.ಆರ್. ಮನೆ ನಂ.515, ಐ.ಬಿ. ಹಿಂಭಾಗ, ಮಹಾಲಕ್ಷ್ಮೀನಗರ, 2ನೇ ಅಡ್ಡರಸ್ತೆ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.	ಮಡಿಕೆಹಳ್ಳಿ ವೃತ್ತ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು	ತಹಶೀಲ್ದಾರ್, ಕುಣಿಗಲ್ ತಾಲ್ಲೂಕು.

ಷರತ್ತುಗಳು:

1) ಈ ನೇಮಕಾತಿಯು ಮಾನ್ಯ ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯಲ್ಲಿ ದಾಖಲಾಗಿರುವ ಅರ್ಜಿ ನಂ.5887–5898/2009 ಪ್ರಕರಣಗಳಲ್ಲಿ ಆಗಬಹುದಾದ ಅಂತಿಮ ತೀರ್ಮಾನಕ್ಕೊಳಪಡುವ ಷರತ್ತಿಗೊಳಪಟ್ಟಿದೆ.
2) ನೇಮಕವಾದ ಅಭ್ಯರ್ಥಿಗಳು ಈ ಆದೇಶ ದಿನಾಂಕದಿಂದ 15 ದಿವಸಗಳೊಳಗಾಗಿ ಅವರ ಹೆಸರಿನ ಮುಂದೆ ಸೂಚಿಸಿರತಕ್ಕ ತಾಲ್ಲೂಕು, ತಹಶೀಲ್ದಾರ್ ರವರ ಸಮಕ್ಷಮದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಈ ನೇಮಕವನ್ನು ಒಂದು ವೇಳೆ ತಿರಸ್ಕರಿಸಿದಲ್ಲಿ, 3 ದಿನಗಳೊಳಗಾಗಿ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು.
3) ಅಭ್ಯರ್ಥಿಯು ತನ್ನ ಹುಟ್ಟಿದ ದಿನಾಂಕ, ಶೈಕ್ಷಣಿಕ ಅರ್ಹತೆಗಳ ಪ್ರಮಾಣ ಪತ್ರ ಹಾಗೂ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ) ಹಾಗೂ ಅಭ್ಯರ್ಥಿಯು ವಾಸಿಸುತ್ತಿರುವ ಕ್ಷೇತ್ರ, ಸಂಬಂಧಿಸಿದ ಕನಿಷ್ಠ ಇಬ್ಬರು ಗಣ್ಯವ್ಯಕ್ತಿಗಳಿಂದ ನೀಡಲ್ಪಟ್ಟ ನಡತೆ ಪ್ರಮಾಣ ಪತ್ರ ಇವುಗಳ ಮೂಲ ಪ್ರತಿಗಳನ್ನು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.
4) ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾದ ದಿನಾಂಕದಿಂದ 2 ವರ್ಷಗಳ ಅವಧಿಗೆ ಪರಿವೀಕ್ಷಣಾ ಅವಧಿಯಲ್ಲಿದ್ದು (ಪ್ರೊಬೇಷನರಿ) ಅವರು ಈ ಅವಧಿಯಲ್ಲಿ ಕೆಳಗೆ ನಮೂದಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು. (1) ಅಕೌಂಟ್ಸ್ ಲೋಯರ್ (2) ರೆವಿನ್ಯೂ ಲೋಯರ್ (3) ಕನ್ನಡ ಭಾಷಾ ಪರೀಕ್ಷೆ (ಎಸ್.ಎಸ್.ಎಲ್.ಸಿ. ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳದಿದ್ದಲ್ಲಿ, ಕನ್ನಡ ಭಾಷೆ ಪರೀಕ್ಷೆಯನ್ನು ಪಾಸು ಮಾಡತಕ್ಕದ್ದು) ಈ ಅವಧಿಯಲ್ಲಿ ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡದಿದ್ದಲ್ಲಿ ಅಥವಾ ಕೆಲಸ ಕಾರ್ಯಗಳು ತೃಪ್ತಿಕರವಾಗಿರದಿದ್ದಲ್ಲಿ ಅವರನ್ನು ಸೇವೆಯಿಂದ ತೆಗೆದುಹಾಕಲಾಗುವುದು.
5) ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು ಸರ್ಕಾರವು ಇಚ್ಛಿಸಿದಲ್ಲಿ ಅಥವಾ ಹುದ್ದೆಗಳು ರದ್ದಾದಲ್ಲಿ ಅಥವಾ ಸಿಂಧುತ್ವದ ನೈಜತೆ ಸಾಬೀತಾಗದಿದ್ದಲ್ಲಿ ಅಥವಾ ಸುಳ್ಳು ಮಾಹಿತಿ ನೀಡಿ, ಉದ್ಯೋಗ ಪಡೆದಿರುವ ಕಂಡುಬಂದಲ್ಲಿ ಅವರನ್ನು ಯಾವುದೇ ಸಮಯದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಸೇವೆಯಿಂದ ತೆಗೆದುಹಾಕಲಾಗುವುದು.
6) ಅಭ್ಯರ್ಥಿಯು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದ ರೀತ್ಯಾ "ನಿಷ್ಠೆಯ ಪ್ರಮಾಣ ವಚನ" ಸ್ವೀಕರಿಸತಕ್ಕದ್ದು.
7) ಅಭ್ಯರ್ಥಿಗಳು ಸರ್ಕಾರದ ಸಕ್ಷಮ ಜಿಲ್ಲಾ ವೈದ್ಯಕೀಯ ಪ್ರಾಧಿಕಾರದಿಂದ ಪಡೆದಿರುವ ದೈಹಿಕ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.
8) ಸರ್ಕಾರದ ಸುತ್ತೋಲೆ ಸಂ.ಕಂಇ 54 ಬಿಎಸ್‌ಸಿ 2007 ದಿನಾಂಕ:27.03.2007ರ ಅನ್ವಯ ಅಂತರ ಜಿಲ್ಲಾ ವರ್ಗಾವಣೆಗೆ ತುಮಕೂರು ಜಿಲ್ಲೆಯಲ್ಲಿ ಕನಿಷ್ಠ ಪಕ್ಷ 05 ವರ್ಷಗಳ ಸೇವೆಯನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು.
9) ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ ಗುರುತಿನ ಚೀಟಿಯನ್ನು ಈ ಕಾರ್ಯಾಲಯದಲ್ಲಿ ಹಾಜರುಪಡಿಸತಕ್ಕದ್ದು. ನಂತರ ಆಯಾ ತಾಲ್ಲೂಕಿನ ತಹಶೀಲ್ದಾರರು ಅದನ್ನು ಉದ್ಯೋಗ ವಿನಿಮಯ ಕೇಂದ್ರಕ್ಕೆ ಸರಂಡರ್ ಮಾಡುವುದು.
10) ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957 ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮಾವಳಿ 1966 ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಇತರ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ.
11) ಇದು ನೇರ ನೇಮಕಾತಿ ಹುದ್ದೆ ಆದ ಕಾರಣ ಅಭ್ಯರ್ಥಿಯು ಸೇವೆಗೆ ಸೇರಿದ ದಿನಾಂಕದಿಂದ ಜೇಷ್ಠತೆಯನ್ನು ಪರಿಗಣಿಸಲಾಗುವುದು.
12) ಗ್ರಾಮಲೆಕ್ಕಿಗರ ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವಾಗ ರೂ.1000–00 (ರೂಪಾಯಿಗಳು ಒಂದು ಸಾವಿರ ಮಾತ್ರ) ಭದ್ರತಾ ಠೇವಣಿಯನ್ನು ನಗದು ರೂಪದಲ್ಲಾಗಲೀ, ಅಥವಾ ರಾಷ್ಟ್ರೀಯ ಉಳಿತಾಯ ಪತ್ರದ ಮೂಲಕವಾಗಲೀ ಸಂಬಂಧಪಟ್ಟ ತಹಶೀಲ್ದಾರ್‌ರವರಲ್ಲಿ ಹಾಜರುಪಡಿಸತಕ್ಕದ್ದು. ಅಥವಾ ಈ ಮೊತ್ತಕ್ಕೆ ಭದ್ರತಾ ಮುಚ್ಚಳಿಕೆ ಪತ್ರವನ್ನು ಛಾಪಾ ಕಾಗದದಲ್ಲಿ ಬರೆಯಿಸಿ ಇಬ್ಬರ ಜಾಮೀನು ಕೊಡತಕ್ಕದ್ದು. ತಹಶೀಲ್ದಾರರು ಈ ಮೊತ್ತದ ರಾಷ್ಟ್ರೀಯ ಉಳಿತಾಯ ಪತ್ರದ ಮೂಲಕ ಸರ್ಕಾರಕ್ಕೆ ಪ್ಲೆಡ್ಜ್ ಮಾಡಿಕೊಳ್ಳತಕ್ಕದ್ದು.
13) ಅಭ್ಯರ್ಥಿಯು ಇಲಾಖೆಯಿಂದ ಕಾಲಕಾಲಕ್ಕೆ ನಿಗದಿಪಡಿಸಿದ ಹಾಗೂ ನಿಗದಿಪಡಿಸಲಾಗುವ ವಿವಿಧ ಪರೀಕ್ಷೆ/ ತರಬೇತಿಗಳನ್ನು ಯಶಸ್ವಿಯಾಗಿ ಮುಗಿಸತಕ್ಕದ್ದು.
14) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಹಾಗೂ ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಹಾಗೂ ಮೇಲೆ ಸೂಚಿಸಿದ ಕಾರ್ಯಸ್ಥಳಗಳಲ್ಲಿ ವರದಿ ಮಾಡಿಕೊಳ್ಳುವ ಮೊದಲು ಮುಂಚಿನ ಸೇವೆಯಿಂದ ಬಿಡುಗಡೆ ಆದೇಶ ಪಡೆದಿರಬೇಕು.
15) ಅಭ್ಯರ್ಥಿಗಳು ತಮ್ಮ ಕುಟುಂಬದ ಒಟ್ಟು ಚರ–ಸ್ಥಿರ ಆಸ್ತಿಯ ವಿವರದ ಬಗ್ಗೆ ವರದಿ ಸಲ್ಲಿಸತಕ್ಕದ್ದು.
16) ಅಭ್ಯರ್ಥಿಗೆ ಕೆಲಸಕ್ಕೆ ಹಾಜರಾಗುವ ಸಂದರ್ಭದಲ್ಲಿ ಪ್ರಯಾಣ ಭತ್ಯೆ ಅಥವಾ ಇತರೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.

17) ಈ ನೇಮಕಾತಿ ಆದೇಶದಲ್ಲಿನ ಅಭ್ಯರ್ಥಿಗಳ ವೇತನವನ್ನು ಪ್ರಥಮ ವೇತನ ಡ್ರಾ ಮಾಡಲು ಈ ಕಛೇರಿಯ ಆದೇಶ ಪಡೆಯದೆ ಡ್ರಾ ಮಾಡದಿರಲು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಸೂಚಿಸಿದೆ.

ಡಾ. ಸಿ. ಸೋಮಶೇಖರ

ಪಿ.ಆರ್.777

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಗ್ರಾಮಲೆಕ್ಕಾಧಿಕಾರಿಗಳ
ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ, ತುಮಕೂರು ಜಿಲ್ಲೆ.

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ:ಇಡಿ 89 ಡಿಟಿಇ 2010, ಬೆಂಗಳೂರು, ದಿನಾಂಕ:15ನೇ ನವೆಂಬರ್, 2010

ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಈ ಕೆಳಕಂಡ ಅಭ್ಯರ್ಥಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರ ಹುದ್ದೆಗಳಿಗೆ (ಎ.ಐ.ಸಿ.ಟಿ.ಇ. ವೇತನ ಶ್ರೇಣಿ ರೂ.18400–22400ರ) ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಮೇರೆಗೆ ನೇಮಕಾತಿ ಮಾಡಲಾಗಿದೆ.

ಕ್ರಮ ಸಂಖ್ಯೆ	ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ	ನೇಮಿಸಲಾದ ಸ್ಥಳ
(1)	(2)	(3)
1	ಡಾ: ಕರಿಸಿದ್ಧಪ್ಪ Professor & Head Vice Principal, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಮಲೆನಾಡು ಕಾಲೇಜ್ ಆಫ್ ಇಂಜಿನಿಯರಿಂಗ್, ಹಾಸನ–573201.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ
2.	ಡಾ: ಪ್ರಕಾಶ್ ಕೆ.ಬಿ. ಪ್ರೊಫೆಸರ್ & ಸಿವಿಲ್ ಇಂಜಿನಿಯರಿಂಗ್ ವಿಭಾಗ, ಕೆ.ಎಲ್.ಇ. ಸೊಸೈಟಿ ಕಾಲೇಜು ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ, ಉದ್ಯಮ್‌ಭಾಗ್, ಬೆಳಗಾಂ–590008.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ
3.	ಡಾ: ಪುಂಡರೀಕ ಜ. ನಂ.39, ಕೃಪಾನಿಧಿ, ರಾಯಲ್ ರಿಫ್ಲೆಕ್ಸ್ ಲೇಔಟ್, ಉತ್ತರಹಳ್ಳಿ ಕೆಂಗೇರಿ ಮುಖ್ಯರಸ್ತೆ, ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್, ಎಜುಕೇಷನ್ ಎದುರು, ಬೆಂಗಳೂರು–560060.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ
4.	ಡಾ: ಚಂದ್ರಶೇಖರ ಕೆ.ಜಿ. # 1269, 4ನೇ ಕ್ರಾಸ್, ಪಡುವಣ ರೋಡ್, ಟಿ.ಕೆ. ಲೇಔಟ್, ಮೈಸೂರು–570023.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ.
5.	ಡಾ: ಕೃಷ್ಣ. ಕೆ.ಸಿ. ಮನೆ ನಂ.5176, ಸರಸ್ವತಿಪುರಂ, 9ನೇ ಕ್ರಾಸ್, ಹೇಮಾವತಿನಗರ, 1ನೇ ಮುಖ್ಯರಸ್ತೆ, ಹಾಸನ–573201.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ.
6.	ಡಾ: ವೆಂಕಟೇಶ್ ಅಪ್ಪರಾಯ್ ರಾಯ್ಕರ್, ತಿರುಮಲ 3ನೇ ಮೈನ್, 4ನೇ ಕ್ರಾಸ್, ಕಲ್ಯಾಣನಗರ, ಹುಬ್ಬಳ್ಳಿ–510031.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ.

ಸದರಿ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೊಳಪಟ್ಟಿರುತ್ತವೆ.

1) ಈ ನೇಮಕಾತಿ ತಾತ್ಕಾಲಿಕವಾಗಿದ್ದು ಆಗಿಂದಾಗ್ಗೆ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.

2) ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ಹಾಗೂ ನಡತೆಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಕರ್ನಾಟಕ ಸೇವಾ (ಸೇವಾ ಮತ್ತು ಕನ್ನಡ ಭಾಷೆ ಪರೀಕ್ಷೆಗಳು) ನಿಯಮಗಳು, 1974ರ ಅಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಹಾಗೂ ಇತರೆ ಪರೀಕ್ಷೆಗಳಲ್ಲಿ ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.

4) ಇವರ ಸೇವಾ ಜ್ಯೇಷ್ಠತೆಯು ಪ್ರಸ್ತುತ ಕರ್ನಾಟಕ ಲೋಕ ಸೇವಾ ಆಯೋಗವು ನಿರ್ಧರಿಸಿದಂತೆ ಇರತಕ್ಕದ್ದು. ನಂತರ ಕರ್ನಾಟಕ ಲೋಕ ಸೇವಾ ಆಯೋಗವು ಕ್ರೋಢೀಕೃತ ಜ್ಯೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಹಾಗೂ ತದನಂತರ ಹಾಗೂ ಸರ್ಕಾರ ಹೊರಡಿಸುವ ಅಧಿಸೂಚನೆಯಂತೆ ಇರತಕ್ಕದ್ದು.

5) ಇವರ ನೇಮಕಾತಿಯು ಪ್ರಸ್ತಾಪಿತ ಪ್ರಾಂಶುಪಾಲರ ಹುದ್ದೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿರುವ ಅರ್ಜಿ ಸಂಖ್ಯೆ:967–968/10, 974/10, 1381–1383/10, 1824/10, 1927/2009 ಮತ್ತು 1929–59/09 ಹಾಗೂ 4480/10, 4498/10, 4507/10, 5707/10, 5460–5461/10ರಲ್ಲಿನ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.

6) ನೇಮಿಸಲಾದ ಸ್ಥಳಗಳಿಗೆ ನೇಮಕಾತಿ ಆದೇಶವನ್ನು ಸ್ವೀಕರಿಸಿದ 15 ದಿನಗಳೊಳಗೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

7) * ಈ ಅಭ್ಯರ್ಥಿಯ ಮೂಲ ದಾಖಲೆಗಳಲ್ಲಿ ಭಿನ್ನ ಭಿನ್ನ ಹೆಸರುಗಳು ನಮೂದಾಗಿದ್ದು ಅವುಗಳನ್ನು ಎರಡು ತಿಂಗಳೊಳಗಾಗಿ ಸರಿಪಡಿಸಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎನ್. ಜಗದೀಶ್

ಪಿ.ಆರ್.778

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಕಾರಾಗೃಹಗಳ ಇಲಾಖೆ

ಕಾರಾಗೃಹಗಳ ಉಪ ಮಹಾನಿರೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಅಂಚೆ, ಬೆಂಗಳೂರು–100

ಟೆಂಡರ್ ಪ್ರಕಟಣೆ

ಸಂಖ್ಯೆ: ಕೇಕಾಬೆಂ/ಅಂಗಡಿಮಳಿಗೆ/10531/2010–11 ದಿನಾಂಕ:25/29ನೇ ನವೆಂಬರ್, 2010

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸಮುಚ್ಚಯದಲ್ಲಿನ ಅಂಗಡಿ ಮಳಿಗೆಗಳಿಗೆ ಬಹಿರಂಗ ಹರಾಜು ಮೂಲಕ ಸ್ಪರ್ಧಾತ್ಮಕ ದರಗಳನ್ನು ಕರೆದು 2010–11ನೇ ಸಾಲಿಗೆ ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ನೀಡುವ ಬಹಿರಂಗ ಹರಾಜನ್ನು ದಿನಾಂಕ:16.12.2010ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿದೆ. ಸಾರ್ವಜನಿಕರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸುವಂತೆ ಕೋರಿದೆ.

ಈ ಸಂಸ್ಥೆಯಲ್ಲಿ ಸುಮಾರು 4500ಕ್ಕೂ ಹೆಚ್ಚಿನ ಬಂದಿಗಳಿದ್ದು, ಪ್ರತಿದಿನ (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ನೂರಾರು ಜನರು ಸಂದರ್ಶನಕ್ಕೆ ಬಂದು ಹೋಗುತ್ತಿರುತ್ತಾರೆ. ಅಲ್ಲದೆ 600 ಜನ ಸಿಬ್ಬಂದಿಗಳು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಮುಚ್ಚಯದಲ್ಲಿರುವ 187 ವಸತಿ ಗೃಹಗಳಲ್ಲಿ ಸಿಬ್ಬಂದಿಗಳು ವಾಸ ಇರುವುದರಿಂದ ಸದಾ ಜನದಟ್ಟಣೆಯಿಂದ ಕೂಡಿರುವ ಈ ಸ್ಥಳದಲ್ಲಿ ಅಂಗಡಿ ಮಳಿಗೆಗಳನ್ನು ನಡೆಸುವುದರಿಂದ ವ್ಯಾಪಾರಿ ಉದ್ದೇಶವು ಸಫಲವಾಗುವ ಭರವಸೆ ನೀಡುತ್ತಾ, ಆಸಕ್ತಿಯುಳ್ಳ ಸಾರ್ವಜನಿಕರು ಹರಾಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದೆ.

ಅಂಗಡಿ ಮಳಿಗೆಗಳು ತಿಂಗಳ ಬಾಡಿಗೆ ಮತ್ತು ಇತರೇ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ವಾಣಿಜ್ಯ ಮಳಿಗೆಯ ಹೆಸರು/ ಕ್ರಮ ಸಂಖ್ಯೆ	ವಿಸ್ತೀರ್ಣ ಚ.ಅಡಿಗಳಲ್ಲಿ	ಅವಧಿ	ನಿಗದಿಪಡಿಸಿರುವ ಮಾಸಿಕ ಬಾಡಿಗೆ ಶುಲ್ಕ	10 ತಿಂಗಳ ಬಾಡಿಗೆಯಷ್ಟು ಭದ್ರತಾ ಠೇವಣಿ	ಹರಾಜಿನಲ್ಲಿ ಭರಿಸಬೇಕಾದ ಇಡುಪು ಠೇವಣಿ
1.	ಫ್ಯಾನ್ಸಿ ಮಳಿಗೆ–01	(3.25x6) (1 ಯೂನಿಟ್)	11 ತಿಂಗಳು	980/–	ಹರಾಜಿನಲ್ಲಿ ಕೂಗಿದ ಬಾಡಿಗೆಯ 10 ತಿಂಗಳ ಮೊತ್ತವನ್ನು ಠೇವಣಿಯಾಗಿ ಇಡುವುದು	1,000/–
2.	ಬಾರ್‌ಬರ್ ಮಳಿಗೆ–02	(3.25x6) (1 ಯೂನಿಟ್)	11 ತಿಂಗಳು	980/–		1,000/–
3.	ಬೇಕರಿ ಮಳಿಗೆ–03	(3.25x6) (2 ಯೂನಿಟ್)	11 ತಿಂಗಳು	1960/–		2,000/–
4.	ಹಾಲಿನ ಮಳಿಗೆ–04	(3.25x6) (1 ಯೂನಿಟ್)	11 ತಿಂಗಳು	980/–		1,000/–
5.	ದಿನಸಿ ಮಳಿಗೆ–05	(3.25x6) (2 ಯೂನಿಟ್)	11 ತಿಂಗಳು	1960/–		2,000/–
6.	ತರಕಾರಿ ಮಳಿಗೆ–06	(3.25x6) (1 ಯೂನಿಟ್)	11 ತಿಂಗಳು	980/–		1,000/–
7.	ಉಪಾಹಾರ ಮಳಿಗೆ–07	(3.25x6) (2 ಯೂನಿಟ್)	11 ತಿಂಗಳು	1960/–		2,000/–
8.	ದಾಸ್ತಾನು ಮಳಿಗೆ–10	(3.25x6) (1 ಯೂನಿಟ್)	11 ತಿಂಗಳು	980/–		1,000/–
9.	ಹಿಟ್ಟಿನ ಗಿರಣಿ–11	(3.25x6) (1 ಯೂನಿಟ್)	11 ತಿಂಗಳು	980/–		1,000/–

ಮೇಲ್ಕಂಡ ಅಂಗಡಿ ಮಳಿಗೆಗಳಿಗೆ ಭಾಗವಹಿಸುವವರು ಸಂಬಂಧಪಟ್ಟ ಮಹಾನಗರ ಪಾಲಿಕೆಯ ಅಧಿಕಾರಿಯಿಂದ ಸಂಬಂಧಿಸಿದ ಲೈಸನ್ಸ್ ಪಡೆದುಕೊಂಡಿರಬೇಕು. ಬಹಿರಂಗ ಹರಾಜಿನಲ್ಲಿ ಅದರ ದಾಖಲೆಗಳನ್ನು ಒಪ್ಪಿಸಬೇಕಾಗುವುದು.

ಮೇಲ್ಕಂಡ ಅಂಗಡಿ ಮಳಿಗೆಯನ್ನು ಹೆಚ್ಚಿನ ಮೊಬಲಿಗೆ ಹರಾಜಿನಲ್ಲಿ ಪಡೆದುಕೊಂಡ ಮೇಲೆ ಹರಾಜಿನಲ್ಲಿ ಕೂಗಿರುವ ಹೆಚ್ಚಿನ ಮೊಬಲಗು 10 ತಿಂಗಳ ಬಾಡಿಗೆ ಮೇಲೆ ಶೇಕಡಾ 10ರಷ್ಟು ಪ್ರಾರಂಭಿಕ ಠೇವಣಿಯನ್ನು ಸ್ಥಳದಲ್ಲಿಯೇ ಭರಿಸಬೇಕಾಗುವುದು. ಮಂಜೂರಾದ ದರಖಾಸ್ತುದಾರರು ಭದ್ರತಾ ಠೇವಣಿ ಮೊತ್ತವನ್ನು ಪಾವತಿಸದೇ ಹಾಗೂ ಕರಾರು ಮಾಡಿಕೊಳ್ಳಲು ವಿಳಂಬ ಮಾಡಿದಲ್ಲಿ ತಾವು ಪಾವತಿ ಮಾಡಿರುವ ಇ.ಎಂ.ಡಿ. ಮೊತ್ತ ಮತ್ತು ಪ್ರಾರಂಭಿಕ ಠೇವಣಿಯ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನೂತನವಾಗಿ ಮರು ಹರಾಜು ಪ್ರಕ್ರಿಯೆಯ ದರಖಾಸ್ತು ಕರೆಯಲಾಗುವುದು.

ಹೆಚ್ಚಿನ ಮಾಹಿತಿಗಳು ಮತ್ತು ನಿಬಂಧನೆಗಳು ವಿವರಗಳು ಬೇಕಾಗಿದ್ದಲ್ಲಿ ಕಾರಾಗೃಹಗಳ ಉಪಮಹಾನಿರೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು ಇವರಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಹರಾಜಿನ ದರವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ರವರ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಕಾರಾಗೃಹಗಳ ಉಪ ಮಹಾನಿರೀಕ್ಷಕರು,
ಕೇಂದ್ರ ಕಾರಾಗೃಹ, ಬೆಂಗಳೂರು.

ಪಿ.ಆರ್.784

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೇಮಕಾತಿ ಆದೇಶ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಜವಾನರ (ಡಿ-ಗ್ರೂಪ್) ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ:21.11.2001 ರನ್ವಯ ಪ್ರಕಟಿಸಿರುವ ಬ್ಯಾಕ್‌ಲಾಗ್ ನೇಮಕಾತಿ ನಿಯಮಗಳು 2001 (ದಿನಾಂಕ:22.11.2001 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

2) ಈ ಕಛೇರಿಯ ಅಲಾಟ್‌ಮೆಂಟ್ ಆದೇಶ ಸಂಖ್ಯೆ: EST-2-235/2003-04 ದಿನಾಂಕ:21.09.2010.

ಪ್ರಸ್ತಾವನೆ:

ಈ ಇಲಾಖೆಯ ಕೆಳಕಂಡ ಜಿಲ್ಲಾ ನೇಮಕಾತಿ ಘಟಕದಲ್ಲಿ (ಡಿ-ಗ್ರೂಪ್) ಜವಾನರ ವೃಂದದಲ್ಲಿ ಕೆಳಕಂಡಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ.

ಕ್ರಸಂ.	ಜಿಲ್ಲೆ	ಸದರಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ		
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1.	ಬೆಂಗಳೂರು ಜಿಲ್ಲಾ ನೇಮಕಾತಿ ಘಟಕ	ನಾಲ್ಕು	ಎರಡು	ಆರು

ಮೇಲೆ ಗುರುತಿಸಿದ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ ಕೆಳಕಂಡ ಅಭ್ಯರ್ಥಿಯನ್ನು ಈ ಕಛೇರಿಯ ಉಲ್ಲೇಖ (2)ರ ಅಲಾಟ್‌ಮೆಂಟ್ ಆದೇಶದಲ್ಲಿ ಮೇಲ್ಕಂಡ ಜಿಲ್ಲಾ ನೇಮಕಾತಿ ಘಟಕಕ್ಕೆ ಅಲಾಟ್ ಮಾಡಿರುವುದರಿಂದ ಕೆಳಕಂಡ ಅಭ್ಯರ್ಥಿಯನ್ನು ಸದರಿ ಜಿಲ್ಲಾ ನೇಮಕಾತಿ ಘಟಕದಲ್ಲಿ ಜವಾನರೆಂದು ನೇಮಕ ಮಾಡಿಕೊಳ್ಳುವ ಸಲುವಾಗಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: EST-2-235/03-04, ದಿನಾಂಕ:2ನೇ ಡಿಸೆಂಬರ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (1)ರ ಬ್ಯಾಕ್‌ಲಾಗ್ ನಿಯಮಗಳನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಉಲ್ಲೇಖ (2)ರಲ್ಲಿನ ಅಲಾಟ್‌ಮೆಂಟ್ ಆದೇಶದಲ್ಲಿ ಕಂಡುಬಂದ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಈ ಜಿಲ್ಲೆಯಲ್ಲಿ ಖಾಲಿ ಇರುವ ಜವಾನರ ಹುದ್ದೆಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ರೂ.4800-100-6000-125-6500-150-7100-175-7275ರ ವೇತನ ಶ್ರೇಣಿಯಲ್ಲಿ ತಾತ್ಕಾಲಿಕವಾಗಿ ಜವಾನರೆಂದು ನೇಮಕ ಮಾಡಲಾಗಿದೆ. ಹಾಗೂ ಕೆಳಕಂಡ ಅಭ್ಯರ್ಥಿಯನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಕಛೇರಿಗೆ ಜವಾನರೆಂದು ಸ್ಥಳ ನಿಯುಕ್ತಿಗೊಳಿಸಿದೆ.

ಕ್ರ ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	SC / ST	ಜನ್ಮ ದಿನಾಂಕ	3-7-2004ರ ಅಂತ್ಯಕ್ಕೆ ಅಭ್ಯರ್ಥಿಯ ವಯಸ್ಸು ವ-ತಿಂ-ದಿ	ವಿದ್ಯಾರ್ಹತೆ ಮತ್ತು ಶೇಕಡವಾರು ಅಂಕಗಳು	ಅಭ್ಯರ್ಥಿಯನ್ನು ಜವಾನರೆಂದು ನೇಮಕ ಮಾಡಿದ ಕಛೇರಿ	ಅಭ್ಯರ್ಥಿಯನ್ನು ಯಾವ ಮೀಸಲಾತಿ ಅಡಿಯಲ್ಲಿ ಮತ್ತು ಯಾವ ವರ್ಗೀಕರಣದ ಅಡಿಯಲ್ಲಿ ನೇಮಕ ಮಾಡಲಾಗಿದೆಯೋ ಅದರ ವಿವರ
1	2	3	4	5	6	7	8

1	2	3	4	5	6	7	8
1.	ಬಿ. ಮುನಿಯಪ್ಪ S/o ಬುಟ್ಟಾರಪ್ಪ ಹೊಲೇರಹಳ್ಳಿ, ಬಿಜ್ಜವರ ಅಂಚೆ, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ	ST	22.09.1974	29-09-11	ಏಳನೇ ತರಗತಿ 85.500	ಜಿಲ್ಲಾ ನೋಂದಣಿ ಕಛೇರಿ, ಶಿವಾಜಿನಗರ ನಂ.2, 1 ಮತ್ತು 2ನೇ ಮಹಡಿ, ಬಿಡಿಎ ಮುಖ್ಯರಸ್ತೆ, ಬಾಣಸವಾಡಿ ಬೆಂಗಳೂರು-560043.	ಪರಿಶಿಷ್ಟ ಪಂಗಡ ಗ್ರಾಮೀಣ ಅಭ್ಯರ್ಥಿ ಮುಖ್ಯಪಟ್ಟಿ

ಈ ನೇಮಕಾತಿ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಮತ್ತು ಅಭ್ಯರ್ಥಿಗಳು ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಷರತ್ತುಗಳು:

1) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು ಸದರಿ ಅಭ್ಯರ್ಥಿಯನ್ನು ಯಾವುದೇ ನೋಟೀಸ್ ಅಥವಾ ಕಾರಣ ನೀಡದೇ ಯಾವುದೇ ಘಳಿಗೆಯಲ್ಲಾದರೂ ಕೆಲಸದಿಂದ ತೆಗೆದು ಹಾಕುವ ಷರತ್ತಿಗೆ ಒಳಪಟ್ಟು ನೇಮಕಾತಿ ಮಾಡಲಾಗಿದೆ.
2) ಈ ನೇಮಕಾತಿ ಆದೇಶವು ಯಾವುದೇ ಸಂದರ್ಭದಲ್ಲಾದರೂ ತಿದ್ದೋಲೆ ಮತ್ತು ಮಾರ್ಪಾಡಿಗೆ ಒಳಪಟ್ಟಿರುತ್ತದೆ.
3) ಸದರಿ ಅಭ್ಯರ್ಥಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿನ ನಿಬಂಧನೆಗಳಿಗೆ ಒಳಪಡಿಸಿ ಮತ್ತು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷದ ಪರೀಕ್ಷಾರ್ಥ ಅವಧಿಗೆ ಒಳಪಡಿಸಿ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ.
4) ಎರಡು ವರ್ಷದ ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳು ತಮ್ಮ ವರ್ಗಾವಣೆಗಾಗಿ ರಾಜಕೀಯ ಅಥವಾ ಇನ್ಯಾವುದೇ ರೀತಿಯ ಒತ್ತಡ ತಂದಲ್ಲಿ ಅಂತಹವರ ವಿರುದ್ಧ ಕಾನೂನು ರೀತ್ಯಾ ಶಿಸ್ತು ಕ್ರಮ ಜರುಗಿಸಲಾಗುವುದು.
5) ನೇಮಕಾತಿ ಮಾಡಿರುವ ಸ್ಥಳದ ಅಥವಾ ಕಛೇರಿಯ ಮಾರ್ಪಾಡಿಗಾಗಿ ಯಾವುದೇ ಮನವಿಗಳನ್ನು ಯಾವುದೇ ಕಾರಣಕ್ಕಾಗಲೀ ಪುರಸ್ಕರಿಸಲಾಗುವುದಿಲ್ಲ.
6) ಈ ನೇಮಕಾತಿಯು ಆಗಿಂದಾಗ್ಗೆ ಜಾರಿಯಲ್ಲಿರುವ ಸೇವಾ ಷರತ್ತುಗಳು ನಿಯಮ ಮತ್ತು ಆದೇಶಗಳಿಗೆ ಒಳಪಡುತ್ತದೆ. ಹಾಗೂ ಸದರಿ ಅಭ್ಯರ್ಥಿಗಳು ಕೆ.ಸಿ.ಎಸ್.ಆರ್. ಮತ್ತು ಕೆ.ಸಿ.ಎಸ್ (ನಡತೆ) ನಿಯಮಗಳು 1966ರಲ್ಲಿನ ಮತ್ತು ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಗಳು 1957ರಲ್ಲಿನ ಹಾಗೂ ಆಗಿಂದಾಗ್ಗೆ ಜಾರಿಗೆ ಬರುವ ಹಾಗೂ ಜಾರಿಯಲ್ಲಿರುವ ಇತರೆ ಸೇವಾ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಡುತ್ತಾರೆ.
7) ಈ ಆದೇಶ ಮುಟ್ಟಿದ 15 (ಹದಿನೈದು) ದಿನಗಳ ಅವಧಿಯೊಳಗೆ ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗತಕ್ಕದ್ದು ಒಂದು ವೇಳೆ ನಿಗದಿತ ಅವಧಿಯೊಳಗೆ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಈ ನೇಮಕಾತಿ ರದ್ದಾಗುವುದು ಹಾಗೂ ನೇಮಕಾತಿ ಬಗ್ಗೆ ಅಭ್ಯರ್ಥಿಯು ಯಾವ ಹಕ್ಕನ್ನೂ ಹೊಂದಿರುವುದಿಲ್ಲವೆಂದು ತಿಳಿಯತಕ್ಕದ್ದು.
8) ಅಭ್ಯರ್ಥಿಗಳು ಅವರ ಕಾರ್ಯ, ಕರ್ತವ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ತೃಪ್ತಿಕರವಾಗಿ ಮಾಡತಕ್ಕದ್ದು.
9) ಅಭ್ಯರ್ಥಿಗಳು ಅವರ ದುರ್ವರ್ತನೆಯಿಂದ, ದುರ್ನಡತೆಯಿಂದ ಹಾಗೂ ಉದಾಸೀನತೆಯಿಂದ ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಿದಂತೆ ಉಂಟುಮಾಡುವ ಎಲ್ಲಾ ರೀತಿಯ ಆರ್ಥಿಕ ನಷ್ಟಗಳನ್ನು ಸರ್ಕಾರಕ್ಕೆ ಸದರಿ ಅಭ್ಯರ್ಥಿಗಳು ಭರಿಸಿಕೊಡಲು ಬದ್ದರಾಗಿರುತ್ತಾರೆ ಹಾಗೂ ಹೊಣೆಗಾರರಾಗಿರುತ್ತಾರೆಂದು ತಿಳಿಯತಕ್ಕದ್ದು.
10) ಅಭ್ಯರ್ಥಿಗಳು ಅವರ ಕರ್ತವ್ಯಗಳನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಗಳನ್ನು ಗುಪ್ತವಾಗಿಟ್ಟು ಅದರ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಪಾಡತಕ್ಕದ್ದು.
11) ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರದಿಂದ ಸತ್ಯಾಪನೆಗೆ ಒಳಪಡುತ್ತವೆ.
12) ಅಭ್ಯರ್ಥಿಯು ತಮ್ಮ ಜಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಇತ್ಯಾದಿಯಾಗಿ ಯಾವುದೇ ವಿಚಾರದಲ್ಲಿ ಅಭ್ಯರ್ಥಿಯು ನೀಡಿರುವ ವಿವರಗಳು ಸುಳ್ಳೆಂದಾಗಲೀ ಅಥವಾ ತಪ್ಪೆಂದಾಗಲೀ ತಿಳಿದು ಬಂದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
13) ಅಭ್ಯರ್ಥಿಗಳು ಸಲ್ಲಿಸಿರುವ ಆಯಾಯ ಮೀಸಲಾತಿ ಪ್ರಮಾಣ ಪತ್ರಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯಾಯ ಮೀಸಲಾತಿ category ಯಲ್ಲಿ ನೇಮಕ ಮಾಡಿರುವುದರಿಂದ ಸದರಿ ಅಭ್ಯರ್ಥಿಗಳು ಆಯಾಯ ಮೀಸಲಾತಿ category ಗೆ ಸೇರಿದವರಲ್ಲವೆಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.
14) ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಲ್ಲವೆಂದು ಸತ್ಯಾಪನೆಯಿಂದ ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.

15) ಅಭ್ಯರ್ಥಿಯು KGID ಯಲ್ಲಿ ಸರ್ಕಾರಿ ವಿಮೆಯನ್ನು ಕಡ್ಡಾಯವಾಗಿ ಕೆಲಸಕ್ಕೆ ಹಾಜರಾದ ಕೂಡಲೇ ಮಾಡತಕ್ಕದ್ದು.

16) ಅಭ್ಯರ್ಥಿಯು ಕೆಳಕಂಡ ದಾಖಲೆಗಳನ್ನು ತಾವು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ತಪ್ಪದೇ ಹಾಜರುಪಡಿಸತಕ್ಕದ್ದು.

(1) ಅಭ್ಯರ್ಥಿಯು ತಮ್ಮ passport Size ನ ಎರಡು ಇತ್ತೀಚಿನ ಫೋಟೋ

(2) ವಿದ್ಯಾರ್ಹತೆಯ ಬಗ್ಗೆ ಏಳನೇ ತರಗತಿ ಮೂಲ ಅಂಕಪಟ್ಟಿ (Original)

(3) ಜನ್ಮ ದಿನಾಂಕದ ಬಗ್ಗೆ ಮೂಲ T.C. (Original)

(4) ಸಂಬಂಧಪಟ್ಟ ಸರ್ಕಾರಿ ಜಿಲ್ಲಾ ಸರ್ಜನ್‌ನಿಂದ ನಿಗದಿತ ನಮೂನೆಯಲ್ಲಿ ಪಡೆದ ವೈದ್ಯಕೀಯ ದೈಹಿಕ ಪ್ರಮಾಣ ಪತ್ರ (Original) (Physical Fitness Certificate)

(5) ಅಭ್ಯರ್ಥಿಯು ಕಡೆಯದಾಗಿ ಹಾಜರಾಗಿದ್ದ ಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ನಡತೆ ಪ್ರಮಾಣ ಪತ್ರ (Original)

17) ನೇಮಕಾತಿ ಹೊಂದಿದ ಅಭ್ಯರ್ಥಿಯು ಗ್ರಾಮೀಣ ಅಭ್ಯರ್ಥಿಯಾಗಿರುವುದರಿಂದ ನಿಗದಿತ ನಮೂನೆ–2ರಲ್ಲಿ ಗ್ರಾಮೀಣ ಮೂಲ ಮೀಸಲಾತಿ ಪ್ರಮಾಣ ಪತ್ರವನ್ನು ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.

ಅಭ್ಯರ್ಥಿಗಳು ಕೆಳಕಂಡ ನಮೂನೆಗಳನ್ನು ಮತ್ತು ಮುಚ್ಚಳಿಕೆಗಳನ್ನು ಕೆಲಸಕ್ಕೆ ಹಾಜರಾಗುವ ಮುನ್ನ ತಪ್ಪದೇ ಬರೆದುಕೊಡತಕ್ಕದ್ದು

18) ಅಭ್ಯರ್ಥಿಯು ಭಾರತದ ಸಂವಿಧಾನಕ್ಕೆ ಬದ್ಧರಾಗಿರುವ ಬಗ್ಗೆ ಪ್ರತಿಜ್ಞಾ ವಿಧಿಯನ್ನು ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.

19) ಅಭ್ಯರ್ಥಿಯು ಮದುವೆಯಾಗಿದ್ದಲ್ಲಿ ಒಬ್ಬರೇ ಪತಿ ಅಥವಾ ಪತ್ನಿ ಹೊಂದಿರುವ ಬಗ್ಗೆ ಕೆ.ಸಿ.ಎಸ್. (ನಡತೆ) ನಿಯಮಗಳು 1966 ರಲ್ಲಿನ ನಿಯಮ 28ರ ರೀತ್ಯ ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿರುವ ಘೋಷಣಾ ಪತ್ರವನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.

20) ಒಂದು ವೇಳೆ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸುಳ್ಳು ಅಥವಾ ನಕಲಿ ಎಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಮತ್ತು ನೇಮಕಾತಿಯನ್ನು ಶಾಶ್ವತವಾಗಿ ರದ್ದುಪಡಿಸಲಾಗುವುದು ಹಾಗೂ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ KCS (CCA) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಬದ್ಧನಾಗಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು 20/– ರೂ.ಗಳ ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ–1 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

21) ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ನಾವುದೇ ಅಭ್ಯರ್ಥಿಯು ಅವರ ಆಯ್ಕೆಯನ್ನು ದಾಖಲೆ ಸಹಿತ establish ಮಾಡಿದಲ್ಲಿ ಅಥವಾ ನನ್ನ ನೇಮಕಾತಿಯು ಅಸಿಂಧುವೆಂದು ದಾಖಲೆಗಳ ಸಹಿತ ಸಾಬೀತು ಪಡಿಸಿದಲ್ಲಿ ನನ್ನ ನೇಮಕಾತಿಯನ್ನು ಯಾವುದೇ ಸೂಚನೆ ಇಲ್ಲದೇ ಶಾಶ್ವತವಾಗಿ ರದ್ದುಗೊಳಿಸಿ ನನ್ನ ಬದಲಿಗೆ ಬೇರೊಬ್ಬರನ್ನು ಆಯ್ಕೆ ಮಾಡಬಹುದು ಎಂಬ ಬಗ್ಗೆ ಅಭ್ಯರ್ಥಿಯು 20/– ರೂ. ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ–2 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

22) ಒಂದು ವೇಳೆ ನಾನು ಈ ಇಲಾಖೆಯಲ್ಲಿ ಜವಾನರೆಂದು ನೇಮಕಾತಿ ಹೊಂದುವ ಮೊದಲು ಅಥವಾ ನಾನು ಜವಾನರೆಂದು ನೇಮಕಾತಿ ಹೊಂದಿ ಈ ಇಲಾಖೆಯಲ್ಲಿ ಜವಾನರಾಗಿ ಸರ್ಕಾರಿ ಕೆಲಸಕ್ಕೆ ಹಾಜರಾದ ದಿನಾಂಕದ ನಂತರ ನಾನು ಸರ್ಕಾರಿ ಸೇವೆಯಿಂದ ಶಾಶ್ವತವಾಗಿ ನಿರ್ಗಮಿಸುವ ದಿನಾಂಕದವರೆಗಿನ ಅವಧಿಯಲ್ಲಿ ಅಂದರೆ ನಾನು ಈ ಇಲಾಖೆಯಲ್ಲಿ ಸರ್ಕಾರಿ ನೌಕರನಾಗಿರುವ ಅವಧಿಯಲ್ಲಿ ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ನಾವುದೇ ಅಭ್ಯರ್ಥಿಯಾಗಲೀ ಅಥವಾ ಬೇರೆ ಇನ್ನಾವುದೇ ಸಾರ್ವಜನಿಕರಾಗಲೀ ದಾಖಲೆಗಳ ಸಹಿತ ಸಕಾರಣಗಳೊಂದಿಗೆ ನಾನು ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿಲ್ಲವೆಂದಾಗಲೀ ಅಥವಾ ನಾನು ಸಲ್ಲಿಸಿರುವ ಏಳನೇ ತರಗತಿಯ ಅಂಕಪಟ್ಟಿಯು ನಕಲಿ (ಖೊಟ್ಟಿ) ಎಂದಾಗಲೀ ದಾಖಲೆಗಳ ಸಹಿತ ಸಾಬೀತುಪಡಿಸಿದಲ್ಲಿ ನನ್ನ ಆಯ್ಕೆಯನ್ನು ಮತ್ತು ಈ ನನ್ನ ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಯಾವುದೇ ಘಳಿಗೆಯಲ್ಲಾದರೂ ಶಾಶ್ವತವಾಗಿ ರದ್ದುಪಡಿಸುವುದಕ್ಕೂ ಹಾಗೂ ಯಾವುದೇ ಕಾರಣ ನೀಡದೇ ಅಥವಾ ಯಾವುದೇ ನೋಟೀಸ್ ನೀಡದೇ ನನ್ನನ್ನು ಸರ್ಕಾರಿ ಸೇವೆಯಿಂದ ಶಾಶ್ವತವಾಗಿ ವಜಾ ಮಾಡುವುದಕ್ಕೂ ನಾನು ಒಪ್ಪಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು 20/– ರೂ. ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ–3 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

23) ಸರ್ಕಾರದವರು ಈ ಹಿಂದೆ ಜಾರಿಯಲ್ಲಿದ್ದ ನಿವೃತ್ತಿ ಪಿಂಚಣಿ ಸೌಲಭ್ಯ ಯೋಜನೆಗೆ ಬದಲಾಗಿ ದಿನಾಂಕ:01.04.2006 ರಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: FD (SPL)-04 PET 2005, ದಿನಾಂಕ:31.03.2006ರ ಆದೇಶದಲ್ಲಿ ಹೊಸದಾಗಿ New defined Contributory Pension Scheme ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಈ ಹೊಸ ಪಿಂಚಣಿ ಯೋಜನೆಯು ದಿನಾಂಕ:01.04.2006 ರಿಂದ ಅಥವಾ ತದನಂತರ ನೇಮಕಾತಿ ಹೊಂದಿದ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ ಎಂದು ಆದೇಶ ಮಾಡಿರುತ್ತಾರೆ. ಆದ್ದರಿಂದ ಈ ಜಿಲ್ಲೆಯಲ್ಲಿ ನೇಮಕ ಹೊಂದಿದ ಸದರಿ ನೌಕರರು ದಿನಾಂಕ:31.03.2006ರ ಸದರಿ ಸರ್ಕಾರದ ಆದೇಶದನ್ವಯ ಹೊಸ ಪಿಂಚಣಿ ಯೋಜನೆಗೆ ಒಳಪಡುತ್ತಾರೆಂದು ಈ ಮೂಲಕ ಆದೇಶಿಸಿದೆ ಹಾಗೂ ದಿನಾಂಕ:31.03.2006ರ ಸದರಿ ಸರ್ಕಾರದ ಆದೇಶದಲ್ಲಿನ ನಿರ್ದೇಶನಕ್ಕೆ ಸದರಿ ನೌಕರರು ಬದ್ಧರಾಗಿರತಕ್ಕದ್ದು.

ನೇಮಕಾತಿ ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಪಿ.ಆರ್.786

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫ | ಬೆಂಗಳೂರು, ಗುರುವಾರ, ಡಿಸೆಂಬರ್ ೧೬, ೨೦೧೦ (ಮಾರ್ಗಶಿರ ೨೫ ಶಕ ವರ್ಷ ೧೯೩೨) | ಸಂಚಿಕೆ ೪೯

ಭಾಗ–೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು

ನಮೂನೆ–27

ಪ್ರಕಟಣೆ ನಂ.ಎಲ್.ಎನ್.ಡಿ./ಸಿ.ಆರ್/108/2009–10, ದಿನಾಂಕ:29ನೇ ಸೆಪ್ಟೆಂಬರ್, 2010

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಅದರಂತೆ ಗೂಳಿಮಂಗಲ ಗ್ರಾಮದ ಸ.ನಂ.54ರಲ್ಲಿ ವಿಸ್ತೀರ್ಣ 0–10 (ಎ.ಗುಂ) ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಅಂಗನವಾಡಿ ಕೇಂದ್ರಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್ ನಲ್ಲಿ ವಿವರಿಸಿರುವ ಸ.ನಂ.54ರಲ್ಲಿ ವಿಸ್ತೀರ್ಣ 0–10 (ಎ–ಗುಂ) ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಅಂಗನವಾಡಿ ಕೇಂದ್ರಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತದೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗೋಮಾಳ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಅಂಗನವಾಡಿ ಕೇಂದ್ರಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗೋಮಾಳ ಜಮೀನಿನ 0–10 (ಎ–ಗುಂ) ಜಮೀನನ್ನು ಸಾರ್ವಜನಿಕವಾಗಿ ಅಂಗನವಾಡಿ ಕೇಂದ್ರಕ್ಕೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು–ಆನೇಕಲ್	ಗ್ರಾಮ–ಗೂಳಿಮಂಗಲ
ಸ.ನಂ.54	ವಿಸ್ತೀರ್ಣ–0–10 (ಎ–ಗುಂ)	ವರ್ಗೀಕರಣ–ಗೋಮಾಳ

ಪೂರ್ವಕ್ಕೆ–ಸ.ನಂ.54ರ ಉಳಿಕೆ

ಪಶ್ಚಿಮಕ್ಕೆ: ಸ.ನಂ.54ರ ಉಳಿಕೆ ಮತ್ತು ರಸ್ತೆ

ಉತ್ತರಕ್ಕೆ: ಸ.ನಂ.54ರ ಉಳಿಕೆ ಮತ್ತು ರಸ್ತೆ

ದಕ್ಷಿಣಕ್ಕೆ: ಸ.ನಂ.54ರ ಉಳಿಕೆ

ತಹಶೀಲ್ದಾರ್
ಆನೇಕಲ್ ತಾಲ್ಲೂಕು.

ಪಿ.ಆರ್. 379

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ ಪತ್ರ

ಸಂಖ್ಯೆ: ಎಲ್.ಆರ್.ಎಫ್.(109)(ಇ)ಸಿ.ಆರ್/06/10–11, ಬೆಂಗಳೂರು, ದಿನಾಂಕ:1ನೇ ಅಕ್ಟೋಬರ್, 2010

ವಿಷಯ: ಶ್ರೀ ಸ್ವಾಮಿ ಸಮರ್ಥ ಟ್ರಸ್ಟ್, ರವರು ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.187/6ರಲ್ಲಿ 5–37 ಹಾಗೂ 345 ರಲ್ಲಿ 4–00 ಒಟ್ಟು 9–37 ಎ/ಗುಂ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಕ್ರಯಕ್ಕೆ ಅನುಮತಿ ಕೋರಿರುವ ಬಗ್ಗೆ.

ಶ್ರೀ ಸ್ವಾಮಿ ಸಮರ್ಥ ಟ್ರಸ್ಟ್, ರವರು ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.187/6ರಲ್ಲಿ 5–37 ಹಾಗೂ 345 ರಲ್ಲಿ 4–00 ಒಟ್ಟು 9–37 ಎ/ಗುಂ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಮಾಡಿದ ಬೇಡಿಕೆ ಹಾಗೂ ನಮೂನೆ–15ಎ ಮತ್ತು 15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ತಹಶೀಲ್ದಾರ್, ಆನೇಕಲ್ ತಾಲ್ಲೂಕು ರವರ ಪತ್ರ ಸಂ.ಎಲ್ಆರ್ಎಫ್/ಸಿಆರ್/14/10–11 ದಿನಾಂಕ:24.09.2010 ಪ್ರಸ್ತಾಪಿತ ಗ್ರಾಮದ ಮೇಲ್ಕಂಡ ಸ.ನಂ.187/6 ರಲ್ಲಿ 5–37 ಹಾಗೂ 345 ರಲ್ಲಿ 4–00 ಒಟ್ಟು 9–37 ಎ/ಗುಂ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(I)(II) ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಸಂಸ್ಥೆಯ ಉಪನೋಂದಣಾಧಿಕಾರಿ, ಬಿ.ಟಿ.ಎಂ. ಲೇಔಟ್, ದಿನಾಂಕ:02.09.2010ರಂದು ನೋಂದಾಯಿಸಲ್ಪಟ್ಟಿದೆ. ಸದರಿ ಜಮೀನಿನ ಖಾತೆದಾರರಿಂದ ಒಪ್ಪಂದ ಕರಾರುಪತ್ರ ಮಾಡಿಕೊಂಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ ಪರಿಶಿಷ್ಟಪಂಗಡದ (ಪಿ.ಟಿ.ಸಿ.ಎಲ್.) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕೆ 4 ಯೂನಿಟ್‌ಗಳವರೆಗೆ ಜಮೀನು ಹೊಂದಲು ಅವಕಾಶ ಕಲ್ಪಿಸಿದೆ. ಈ ಪ್ರಸ್ತಾವನೆಗೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಪ್ರಕಾರ ಕಲಂ 109(I)(II) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.187/6ರಲ್ಲಿ 5–37 ಹಾಗೂ 345 ರಲ್ಲಿ 4–00 ಒಟ್ಟು 9–37 ಎ/ಗುಂ ಜಮೀನನ್ನು ಶ್ರೀ ಸ್ವಾಮಿ ಸಮರ್ಥ ಟ್ರಸ್ಟ್, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಆನೇಕಲ್ ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಕ್ರಯಕ್ಕೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(I)(II)ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ನಂ.ವ್ಯಶಾಇ:47:ಶಾಸನ:2001 ಬೆಂಗಳೂರು ದಿನಾಂಕ:23.04.2003 ರಂತೆ ಶೈಕ್ಷಣಿಕ ಉದ್ದೇಶಕ್ಕೆ 2 ಯುನಿಟ್‌ಗಳಿದ್ದು, ಜಮೀನನ್ನು ಹೊಂದಲು ಅವಕಾಶ ಕಲ್ಪಿಸಿರುವುದರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು:

1) ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಈ ಬಗ್ಗೆ ತಹಶೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.

2) ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1995ರ ಕಲಂ 38ರಲ್ಲಿ ಹೇಳಿರುವಂತೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ಬೇರೆ ರೀತಿ ವರ್ಗಾಯಿಸಬಾರದು.

3) ಸದರಿ ಜಮೀನು ಸಿ.ಡಿ.ಪಿ. ಪ್ರಕಾರ ಹಸಿರು ವಲಯದಲ್ಲಿ ಬರುತ್ತಿದ್ದು ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಭೂ ಉಪಯೋಗದ ಅವಶ್ಯಕತೆ ಇದ್ದಲ್ಲಿ ಭೂ ಬದಲಾವಣೆ ಮಾಡಿಸಿಕೊಳ್ಳತಕ್ಕದ್ದು ಹಾಗೂ ಪ್ರಾಧಿಕಾರದಿಂದ ಅನುಮತಿ ಪಡೆದು ಕಟ್ಟಡ ಕಟ್ಟಿಕೊಳ್ಳತಕ್ಕದ್ದು.

4) ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯ್ದೆ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು.

5) ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ. ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.

6) ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.

7) ಈ ಅನುಮತಿ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರನ್ವಯ ಮಾತ್ರ ಮಾಡಿರುತ್ತದೆ. ಬೇರೆ ಕಾನೂನುಗಳಿಗೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

ಹೆಚ್. ರಾಮಾಂಜನೇಯ

ಪಿ.ಆರ್. 401

ವಿಶೇಷ ಜಿಲ್ಲಾಧಿಕಾರಿಗಳು (ಕಂ),

ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ ಪತ್ರ

ಸಂಖ್ಯೆ: ಎಲ್.ಆರ್.ಎಫ್.(109)(ಇ)ಸಿ.ಆರ್/07/10-11, ಬೆಂಗಳೂರು, ದಿನಾಂಕ:1ನೇ ಅಕ್ಟೋಬರ್, 2010

ವಿಷಯ: ಶ್ರೀ ಮಾಲತೇಶ್ ಟ್ರಸ್ಟ್, ರವರು ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸುಣವಾರ ಗ್ರಾಮದ ಸ.ನಂ.65ರಲ್ಲಿ 4-11 ಎ/ಗುಂ ಜಮೀನು ಮತ್ತು ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.159/4 ರಲ್ಲಿ 0-13, 159/3ರಲ್ಲಿ 0-13, 159/2 ರಲ್ಲಿ 0-22, 187/1 ರಲ್ಲಿ 0-38 ಮತ್ತು 332 (ಹಳೆ ನಂಬರ್ 157) ರಲ್ಲಿ 3-06 ಒಟ್ಟು 9-23 ಎ/ಗುಂ/ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಕ್ರಯಕ್ಕೆ ಅನುಮತಿ ಕೋರಿರುವ ಬಗ್ಗೆ.

ಶ್ರೀ ಮಾಲತೇಶ್ ಟ್ರಸ್ಟ್, ರವರು ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸುಣವಾರ ಗ್ರಾಮದ ಸ.ನಂ.65ರಲ್ಲಿ 4-11 ಎ/ಗುಂ ಜಮೀನು ಮತ್ತು ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.159/4 ರಲ್ಲಿ 0-13, 159/3ರಲ್ಲಿ 0-13, 159/2 ರಲ್ಲಿ 0-22, 187/1 ರಲ್ಲಿ 0-38 ಮತ್ತು 332 (ಹಳೆ ನಂಬರ್ 157) ರಲ್ಲಿ 3-06 ಒಟ್ಟು 9-23 ಎ/ಗುಂ/ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಮಾಡಿದ ಬೇಡಿಕೆ ಹಾಗೂ ನಮೂನೆ-15ಎ ಮತ್ತು 15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ತಹಶೀಲ್ದಾರ್, ಆನೇಕಲ್ ತಾಲ್ಲೂಕು ರವರ ಪತ್ರ ಸಂ:ಎಲ್ಆರ್ಎಫ್/ಸಿಆರ್/13/10-11, ದಿನಾಂಕ:24.09.2010 ಪ್ರಸ್ತಾಪಿತ ಸುಣವಾರ ಗ್ರಾಮದ ಸ.ನಂ.65ರಲ್ಲಿ 4-11 ಎ/ಗುಂ ಜಮೀನು ಮತ್ತು ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.159/4ರಲ್ಲಿ 0-13, 159/3, 0-13, 159/2 ರಲ್ಲಿ 0-22, 187/1 ರಲ್ಲಿ 0-38 ಮತ್ತು 332 (ಹಳೆ ನಂಬರ್ 157) ರಲ್ಲಿ 3-06 ಒಟ್ಟು 9-23 ಎ/ಗುಂ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(1)(II)ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಸಂಸ್ಥೆಯು ಉಪನೋಂದಣಾಧಿಕಾರಿ, ಜಿ.ಟಿ.ಎಂ. ಲೇಔಟ್, ದಿನಾಂಕ:02.09.2010ರಂದು ನೋಂದಾಯಿಸಲ್ಪಟ್ಟಿದೆ. ಸದರಿ ಜಮೀನಿನ ಖಾತೆದಾರರಿಂದ ಒಪ್ಪಂದ ಕರಾರುಪತ್ರ ಮಾಡಿಕೊಂಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ ಪರಿಶಿಷ್ಟಪಂಗಡದ (ಪಿ.ಟಿ.ಸಿ.ಎಲ್.) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕೆ 4 ಯೂನಿಟ್‌ಗಳವರೆಗೆ ಜಮೀನು ಹೊಂದಲು ಅವಕಾಶ ಕಲ್ಪಿಸಿದೆ. ಈ ಪ್ರಸ್ತಾವನೆಗೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಪ್ರಕಾರ ಕಲಂ 109(1)(II) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸುಣವಾರ ಗ್ರಾಮದ ಸ.ನಂ.65 ರಲ್ಲಿ 4-11 ಎ/ಗುಂ ಜಮೀನು ಮತ್ತು ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.159/4 ರಲ್ಲಿ 0-13, 159/3ರಲ್ಲಿ 0-13, 159/2 ರಲ್ಲಿ 0-22, 187/1 ರಲ್ಲಿ 0-38 ಮತ್ತು 332 (ಹಳೆ ನಂಬರ್ 157) ರಲ್ಲಿ 3-06 ಒಟ್ಟು 9-23 ಎ/ಗುಂ ಜಮೀನನ್ನು ಶ್ರೀ ಮಾಲತೇಶ್ ಟ್ರಸ್ಟ್, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಆನೇಕಲ್ ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಕ್ರಯಕ್ಕೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(1)(II)ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ನಂ.ವ್ಯಶಾಇ:47:ಶಾಸನ:2001 ಬೆಂಗಳೂರು ದಿನಾಂಕ:23.04.2003 ರಂತೆ ಶೈಕ್ಷಣಿಕ ಉದ್ದೇಶಕ್ಕೆ 2 ಯುನಿಟ್‌ಗಳಿದ್ದು, ಜಮೀನನ್ನು ಹೊಂದಲು ಅವಕಾಶ ಕಲ್ಪಿಸಿರುವುದರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು:

1) ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಈ ಬಗ್ಗೆ ತಹಶೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2) ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1995ರ ಕಲಂ 38ರಲ್ಲಿ ಹೇಳಿರುವಂತೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ಬೇರೆ ರೀತಿ ವರ್ಗಾಯಿಸಬಾರದು.
3) ಸದರಿ ಜಮೀನು ಸಿ.ಡಿ.ಪಿ. ಪ್ರಕಾರ ಹಸಿರು ವಲಯದಲ್ಲಿ ಬರುತ್ತಿದ್ದು ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಭೂ ಉಪಯೋಗದ ಅವಶ್ಯಕತೆ ಇದ್ದಲ್ಲಿ ಭೂ ಬದಲಾವಣೆ ಮಾಡಿಸಿಕೊಳ್ಳತಕ್ಕದ್ದು ಹಾಗೂ ಪ್ರಾಧಿಕಾರದಿಂದ ಅನುಮತಿ ಪಡೆದು ಕಟ್ಟಡ ಕಟ್ಟಿಕೊಳ್ಳತಕ್ಕದ್ದು.
4) ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯ್ದೆ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು.
5) ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ. ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.
6) ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.

7) ಈ ಅನುಮತಿ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರನ್ವಯ ಮಾತ್ರ ಮಾಡಿರುತ್ತದೆ. ಬೇರೆ ಕಾನೂನುಗಳಿಗೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

ಹೆಚ್. ರಾಮಾಂಜನೇಯ

ಪಿ.ಆರ್. 402

ವಿಶೇಷ ಜಿಲ್ಲಾಧಿಕಾರಿಗಳು (ಕಂ),

ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಟ್ಟಣ ಪಂಚಾಯತ್, ತೀರ್ಥಹಳ್ಳಿ

ಅಧಿಸೂಚನೆ

ನಂ.ಪ.ಪಂ.ತೀ.ಸಿ.ಆರ್.03/2010-11, ದಿನಾಂಕ:18ನೇ ನವೆಂಬರ್, 2010

ವಿಷಯ: ಪಟ್ಟಣ ಪಂಚಾಯತ್ ತೀರ್ಥಹಳ್ಳಿ ವಿವಿಧ ತೆರಿಗೆ, ಉಪಕರ, ಶುಲ್ಕಗಳನ್ನು ಪರಿಷ್ಕರಿಸಿ ಜಾರಿಗೆ ನೀಡುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 23:ಟಿಸಿಟಿ 2004 ದಿನಾಂಕ:06.01.2005.

2) ಕೌನ್ಸಿಲ್ ಸಭೆಯ ನಿರ್ಣಯ ದಿನಾಂಕ:06.07.2010.

3) ಕೌನ್ಸಿಲ್ ಸಭೆ ನಿರ್ಣಯ ದಿನಾಂಕ:17.08.2010.

4) ಕೌನ್ಸಿಲ್ ಸಭೆ ನಿರ್ಣಯ ದಿನಾಂಕ:16.11.2010.

ತೀರ್ಥಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಈ ಕೆಳಗಿನಂತೆ ತೆರಿಗೆ, ಉಪಕರ, ಶುಲ್ಕಗಳನ್ನು ಪರಿಷ್ಕರಿಸಿ ದಿನಾಂಕ:01.01.2011 ರಿಂದ ಅನ್ವಯವಾಗುವಂತೆ ಜಾರಿಗೆ ನೀಡಿರುತ್ತದೆ.

ಎ. ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ವಿಲೇವಾರಿ ಕಾರ್ಯಗಳ ನಿರ್ವಹಣೆಗಾಗಿ ಉಪಕರ

1. ಹೋಟೇಲ್, ಕಲ್ಯಾಣ ಮಂಟಪ ಮತ್ತು ನರ್ಸಿಂಗ್ ಹೋಂಗಳಿಗೆ ಮಾಹೆಯಾನ ರೂ.200.00
2. ಇದರ ಜೊತೆಗೆ ಪ್ರತಿ ಮದುವೆ, ಆರತಕ್ಷತೆ ಇತರೆ ಸಮಾರಂಭಗಳಿಗೆ ರೂ.200-00

ಬಿ. ಜಾಹಿರಾತುಗಳ ಮೇಲೆ ವಾರ್ಷಿಕ ತೆರಿಗೆ

1. ಭೂಮಿ, ಕಟ್ಟಡ, ಗೋಡೆ ಪ್ರಕಟಣಾ ಪಟ್ಟಿಗಳು, ಚೌಕಟ್ಟು, ಸ್ಥಂಭ ರಚನೆಗಳು ಇತ್ಯಾದಿಗಳ ಮೇಲೆ

	ವಿವರ	ತೆರಿಗೆ ರೂ.	ನೆಲಬಾಡಿಗೆ ರೂ.	ಜುಮ್ಲಾ ರೂ.
ಕ	1 ಚದರ ಮೀಟರ್ ವರೆಗಿನ ಜಾಗಕ್ಕೆ	15-00	500-00	515-00
ಖ	1 ಚದರ ಮೀಟರ್‌ಗಿಂತ ಹೆಚ್ಚಾಗಿ ಆದರೆ 2.5 ಚದರ ಮೀಟರ್‌ವರೆಗೆ	30-00	1000-00	1030-00
ಗ	ಪ್ರತಿ ಹೆಚ್ಚಿನ 2.5 ಚದರ ಮೀಟರ್‌ಗೆ	35-00	500-00	535-00
ಘ	ತಾತ್ಕಾಲಿಕ ಬ್ಯಾನರ್‌ಗಳಿಗೆ 1ಕ್ಕೆ			50-00

ಸಿ. ಸ್ಥಳ ಆಸ್ತಿಗಳ ವರ್ಗಾವಣೆ ಮತ್ತು ಇತರೆ ಶುಲ್ಕಗಳು:

1. ಮಾರುಕಟ್ಟೆ ಕನಿಷ್ಠ 1.00 ಲಕ್ಷದ ವರೆಗಿನ ಆಸ್ತಿಗಳಿಗೆ: ರೂ.500-00
2. ಇದರ ಜೊತೆಗೆ ಮಾರುಕಟ್ಟೆ ದರ 1.00 ಲಕ್ಷ ಮೇಲ್ಪಟ್ಟು ಪ್ರತಿ 1.00 ಲಕ್ಷದವರೆಗೆ ರೂ.200-00
3. ಖಾತೆ ನಕಲು, ನಿವಾಸಿ ದೃಢೀಕರಣ ಪತ್ರ ಇತ್ಯಾದಿ ರೂ.25-00
4. ನಿರಾಕ್ಷೇಪಣಾ ಪತ್ರಗಳು ರೂ.50-00

ಡಿ. ಕಟ್ಟಡಗಳ ನಿರ್ಮಾಣಗಳಿಗೆ ಪರವಾನಿಗೆ ಶುಲ್ಕ

ಎ) ವಾಸದ ಕಟ್ಟಡ

		ಪರವಾನಿಗೆ ಶುಲ್ಕ ರೂ.	ಡಬ್ರಿಸ್ ಶುಲ್ಕ ರೂ.	ಒಟ್ಟು ರೂ.
1.	0-600 ಚದರ ಅಡಿವರೆಗೆ	100-00	100-00	200-00
2.	601-1200 ಚದರ ಅಡಿವರೆಗೆ	400-00	200-00	600-00
3.	1201-1500 ಚದರ ಅಡಿವರೆಗೆ	800-00	400-00	1200-00
4.	1501-2000 ಚದರ ಅಡಿವರೆಗೆ	1000-00	500-00	1500-00
5.	2001 ರಿಂದ ಪ್ರತಿ 500 ಚದರ ಅಡಿವರೆಗೆ	200-00	-	200-00
6.	ಕಟ್ಟಡ ಪರವಾನಿಗೆ ನವೀಕರಣ ಶುಲ್ಕ ಮೂಲ ಶುಲ್ಕದ ಶೇ.50 ರಷ್ಟು			

ಬಿ) ವಾಣಿಜ್ಯ ಕಟ್ಟಡ

		ಪರವಾನಿಗೆ ಶುಲ್ಕ ರೂ.	ಡಬ್ರಿಸ್ ಶುಲ್ಕ ರೂ	ಒಟ್ಟು ರೂ.
1.	0-600 ಚದರ ಅಡಿವರೆಗೆ	400-00	200-00	600-00

		ಪರವಾನಿಗೆ ಶುಲ್ಕ ರೂ.	ಡಬ್ರಸ್ ಶುಲ್ಕ ರೂ	ಒಟ್ಟು ರೂ.
2.	601–1200 ಚದರ ಅಡಿವರೆಗೆ	800–00	400–00	1200–00
3.	1201–1500 ಚದರ ಅಡಿವರೆಗೆ	1200–00	600–00	1800–00
4.	1501–2000 ಚದರ ಅಡಿವರೆಗೆ	1500–00	750–00	2250–00
5.	2001 ರಿಂದ ಪ್ರತಿ 500 ಚದರ ಅಡಿವರೆಗೆ	500–00	–	500–00
6.	ಕಟ್ಟಡ ಪರವಾನಿಗೆ ನವೀಕರಣ ಶುಲ್ಕ ಮೂಲ ಶುಲ್ಕದ ಶೇ.50 ರಷ್ಟು			

ಸಿ) ಹಳೆ ಕಟ್ಟಡಗಳ ತೆರವುಗೊಳಿಸಲು ಪರವಾನಿಗೆ ಶುಲ್ಕ ರೂ.1000–00

ರಾಮರುದ್ರಯ್ಯ

ಪಿ.ಡಿ–18

ಮುಖ್ಯಾಧಿಕಾರಿ,

ಪಟ್ಟಣ ಪಂಚಾಯತ್, ತೀರ್ಥಹಳ್ಳಿ.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು

ನಮೂನೆ–27

ಪ್ರಕಟಣೆ

ನಂ.ಎಲ್.ಎನ್.ಡಿ./ಸಿ.ಆರ್/72/2006–07, ದಿನಾಂಕ:29ನೇ ಸೆಪ್ಟೆಂಬರ್, 2010

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡುತೋಪು ಜಮೀನಾಗಿರುತ್ತದೆ. ಅದರಂತೆ ಚಿಕ್ಕನಹಳ್ಳಿ ಗ್ರಾಮದ ಸ.ನಂ.19ರಲ್ಲಿ ವಿಸ್ತೀರ್ಣ 0–13 (ಎ–ಗುಂ) ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಈ ಪೈಕಿ 0–13 (ಎ–ಗುಂ) ಬಿ.ಸಿ.ಎಂ. ಇಲಾಖೆಯ ಆಶ್ರಯ ಶಾಲೆಗೆ ಮತ್ತು ಅಂಗನವಾಡಿ ಕೇಂದ್ರಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್ ನಲ್ಲಿ ವಿವರಿಸಿರುವ ಸ.ನಂ.19ರಲ್ಲಿ ವಿಸ್ತೀರ್ಣ 0–13 (ಎ–ಗುಂ) ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ 0–13 (ಎ–ಗುಂ) ಬಿ.ಸಿ.ಎಂ. ಇಲಾಖೆಯ ಆಶ್ರಯ ಶಾಲೆಗೆ ಮತ್ತು ಅಂಗನವಾಡಿ ಕೇಂದ್ರಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತದೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡುತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಬಿ.ಸಿ.ಎಂ. ಇಲಾಖೆಯ ಆಶ್ರಯ ಶಾಲೆಗೆ ಮತ್ತು ಅಂಗನವಾಡಿ ಕೇಂದ್ರಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡುತೋಪು ಜಮೀನಿನ 0–13 (ಎ–ಗುಂ) ಜಮೀನನ್ನು ಸಾರ್ವಜನಿಕವಾಗಿ ಬಿ.ಸಿ.ಎಂ. ಇಲಾಖೆಯ ಆಶ್ರಯ ಶಾಲೆಗೆ ಮತ್ತು ಅಂಗನವಾಡಿ ಕೇಂದ್ರಕ್ಕೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು–ಆನೇಕಲ್	ಗ್ರಾಮ–ಚಿಕ್ಕನಹಳ್ಳಿ
ಸ.ನಂ.19	ವಿಸ್ತೀರ್ಣ–0–13 (ಎ–ಗುಂ)	ವರ್ಗೀಕರಣ–ಗುಂಡುತೋಪು

ಪೂರ್ವಕ್ಕೆ–ಸ.ನಂ.18 ಪಶ್ಚಿಮಕ್ಕೆ: ಸ.ನಂ.20

ಉತ್ತರಕ್ಕೆ: ಸ.ನಂ.18 ದಕ್ಷಿಣಕ್ಕೆ: ಸ.ನಂ.20

ತಹಶೀಲ್ದಾರ್

ಪಿ.ಆರ್. 406

ಆನೇಕಲ್ ತಾಲ್ಲೂಕು.

ಕಂದಾಯ ಸಚಿವಾಲಯ

ಅಧಿಸೂಚನೆ

ನಮೂನೆ 29

ಸಂಖ್ಯೆ: ಆರ್‌ಡಿ 17 ಎಲ್‌ಜಿಇ 2010, ಬೆಂಗಳೂರು, ದಿನಾಂಕ:13ನೇ ಅಕ್ಟೋಬರ್, 2010

68ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಘೋಷಣೆ–ನಿಯಮ 96

ಕರ್ನಾಟಕ ಭೂಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (5)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ದಿನಾಂಕ:28.04.2010ರ (ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕ:03.06.2010) ದಿನಾಂಕದ ಕಂ.ಭೂಮಿ.42/2010–11 ಕ್ರಮ ಸಂಖ್ಯೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ

ನಿರ್ದಿಷ್ಟಪಡಿಸಿದ ಸಾರ್ವಜನಿಕ ಗುಡ್ಡ ಪರಂಬೋಕು ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹಾರಣೆಗಳ ದಾಖಲೆಗಳನ್ನು ಮತ್ತು ಜಿಲ್ಲೆಯ ಡೆಪ್ಯೂಟಿ ಕಮೀಷನರ್ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿದ ತರುವಾಯ, ಸಾರ್ವಜನಿಕ ಗುಡ್ಡ ಪರಂಬೋಕು ಅಥವಾ ಅದರ ಮೇಲಿನ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಕೊನೆಗೊಳ್ಳತಕ್ಕುದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ಸರ್ಕಾರ ಗುಡ್ಡ ಪರಂಬೋಕು ಭಾಗವು ಇರುವ ಗ್ರಾಮ	ವರದಾಪುರ
ತಾಲ್ಲೂಕು	ಹಗರಿಬೊಮ್ಮನಹಳ್ಳಿ
ಜಿಲ್ಲೆ	ಬಳ್ಳಾರಿ
ಸಾರ್ವಜನಿಕ ಗುಡ್ಡ ಪರಂಬೋಕು ಜಮೀನಿನ ವರ್ಣನೆ	ಸ.ನಂ.119ಎ/4 ಕಲ್ಲುಗುಡ್ಡ ಎಂದು ವರ್ಗೀಕೃತ ವಿಸ್ತೀರ್ಣ 6.37 ಎಕರೆ (ಆರು ಎಕರೆ ಮೂವತ್ತೇಳು ಸೆಂಟ್ಸ್)
ಸಾರ್ವಜನಿಕ ಗುಡ್ಡ ಪರಂಬೋಕು ಜಮೀನು ಭಾಗದ ಸರಿಸುಮಾರು ವಿಸ್ತೀರ್ಣ	6.37 ಎಕರೆ (ಆರು ಎಕರೆ ಮೂವತ್ತೇಳು ಸೆಂಟ್ಸ್)
ಮೇರೆಗಳು	ನಕ್ಷೆಯಲ್ಲಿದ್ದಂತೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿ.ಆರ್. 413

ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ

ನಂ.ಎಲ್ಎಕ್ಯೂ:ಎಸ್ಆರ್:/11ಎ/2005-06, ದಿನಾಂಕ:15ನೇ ಅಕ್ಟೋಬರ್, 2010

ಭೂಸ್ವಾಧೀನ ಅಧಿನಿಯಮ 1894ರ ಕಲಂ 16(2)ರ ಅನ್ವಯ ಅಧಿಸೂಚನೆ

ರಾಜ್ಯ ಸರ್ಕಾರದ ಕರ್ನಾಟಕ ಅಧಿನಿಯಮ 17/1961ರಲ್ಲಿ ತಿದ್ದುಪಡಿಯಾದಂತೆ ಭೂ ಸ್ವಾಧೀನ ಅಧಿನಿಯಮ 1994ರನ್ವಯ ಕಲಂ 16ರ ಉಪಪ್ರಕರಣ (2)ರ ಮೇರೆಗೆ ಮುಂದಿನ ಅನುಸೂಚಿಯಲ್ಲಿ ಸೂಚಿಸಲಾದ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮತ್ತು ರಸ್ತೆ ನಿರ್ಮಾಣದ ಉದ್ದೇಶಕ್ಕಾಗಿ ಅಧಿಕೃತವಾಗಿ ಸದರಿ ಭೂ ಸ್ವಾಧೀನ ಅಧಿನಿಯಮ ಪ್ರಕರಣ 16ರ ಉಪಪ್ರಕರಣ (1)ರಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಸಾರ್ವಜನಿಕರ ಹಾಗೂ ಸಂಬಂಧಿಸಿದವರ ತಿಳುವಳಿಕೆಗಾಗಿ ಈ ಅಧಿಸೂಚನೆ ನೀಡುವುದರ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ತಾಲ್ಲೂಕು: ಚಿತ್ರದುರ್ಗ **ಹೋಬಳಿ: ಭರಮಸಾಗರ** **ಗ್ರಾಮ: ಭರಮಸಾಗರ**

ಕ್ರ. ಸಂ.	ಸ.ನಂ. ನಿವೇಶನ ಸಂಖ್ಯೆ	ಜಮೀನಿನ ತರಹೆಯ ವಿವರ ಖುಷ್ಕಿ ಖಾಲಿ ನಿವೇಶನ ಚದರ ಅಡಿಗಳು	ವಿಸ್ತೀರ್ಣ (ಎ-ಗು) ಚದರ ಅಡಿಗಳಲ್ಲಿ	ವಶಪಡಿಸಿಕೊಂಡ ದಿನಾಂಕ
1	2	3	4	5
1.	9/1ಎಸಿ	(ನಿವೇಶನ) 5	22+44x20 2=660	30.06.2010
2.	9/1ಎಸಿ	(ನಿವೇಶನ) 6	36+51x20 2=870	30.06.2010
3.	9/1ಎಸಿ	(ನಿವೇಶನ) 8	56+95x20 2=1510	30.06.2010
4.	9/1ಎಸಿ	(ನಿವೇಶನ) 9	83+92x20 2=1750	30.06.2010
5.	9/1ಎಸಿ	(ನಿವೇಶನ) 10/ಪಿ1	22+40x20 2=620	30.06.2010
6.	9/1ಎಸಿ	(ನಿವೇಶನ) 10/ಪಿ2	55+60x20 2=1150	30.06.2010
7.	9/1ಎಸಿ	(ನಿವೇಶನ) 13	50+80x30 2=1950	30.06.2010

ಕ್ರ. ಸಂ.	ಸ.ನಂ. ನಿವೇಶನ ಸಂಖ್ಯೆ	ಜಮೀನಿನ ತರಹೆಯ ವಿವರ ಖುಷ್ಕಿ ಖಾಲಿ ನಿವೇಶನ ಚದರ ಅಡಿಗಳು	ವಿಸ್ತೀರ್ಣ (ಎ-ಗು) ಚದರ ಅಡಿಗಳಲ್ಲಿ	ವಶಪಡಿಸಿಕೊಂಡ ದಿನಾಂಕ
1	2	3	4	5
8.	9/1ಎಸಿ	(ನಿವೇಶನ) 14	40+50x30 2=1350	30.06.2010
9.	9/1ಎಸಿ	(ನಿವೇಶನ) 15	25+40x30 2=975	30.06.2010
		ಜುಮ್ಲಾ	**10835 ಚದರ ಅಡಿಗಳು**	

ಉಪವಿಭಾಗಾಧಿಕಾರಿ ಹಾಗೂ
ಭೂಸ್ವಾಧೀನಾಧಿಕಾರಿ,
ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ.

ಪಿ.ಆರ್. 410

ತಹಶೀಲ್ದಾರ್‌ರವರ ಕಾರ್ಯಾಲಯ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ

ಸಾರ್ವಜನಿಕ ಪ್ರಕಟಣೆ

ನಮೂನೆ-27

ಸಂಖ್ಯೆ: ಎಲ್.ಎನ್.ಡಿ./ಸಿಆರ್/94/09-10, ದಿನಾಂಕ:5ನೇ ಅಕ್ಟೋಬರ್, 2010

94ನೇ ನಿಯಮದ 68(1)ನೇ ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಸರ್ಕಾರಿ ಕಾಣದ ಖರಾಬು ಮತ್ತು ಹದ್ದುಗಿಡದ ಓಣಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಿರುವುದರಿಂದ

ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸಾರ್ವಜನಿಕ ಕಾಣದ ಖರಾಬು ಮತ್ತು ಹದ್ದುಗಿಡದ ಓಣಿ ಸದರಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸರ್ಕಾರಿ ಕಾಣದ ಖರಾಬು ಮತ್ತು ಹದ್ದುಗಿಡದ ಓಣಿ ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

2. ಸಾರ್ವಜನಿಕ ಸರ್ಕಾರಿ ಕಾಣದ ಖರಾಬು ಮತ್ತು ಹದ್ದುಗಿಡದ ಓಣಿ ಜೊತೆಗೆ ಸದರಿ ಸರ್ಕಾರಿ ಕಾಣದ ಖರಾಬು ಮತ್ತು ಹದ್ದುಗಿಡದ ಓಣಿ ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ತೊಂಭತ್ತು (90) ದಿನದೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಂ ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ರವರಿಗೆ ಬರಹದಲ್ಲಿ ತಿಳಿಸತಕ್ಕದ್ದು, ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೈಂಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಡೆಪ್ಯೂಟಿ ಕಮೀಷನರರು ಪರಿಶೀಲಿಸತಕ್ಕದ್ದು.

ಭಾಗ ಇತ್ಯಾದಿ ಇರುವ ಗ್ರಾಮಗಳು	ಬಿಳಿಶಿವಾಲೆ
ತಾಲ್ಲೂಕು	ಬೆಂಗಳೂರು ಪೂರ್ವ
ಜಿಲ್ಲೆ	ಬೆಂಗಳೂರು ನಗರ
ಜಮೀನಿನ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	ಸ.ನಂ.138ರ ಮಧ್ಯಭಾಗದಲ್ಲಿ ಹಾದುಹೋಗುವ ಹದ್ದುಗಿಡದ ಓಣಿ 0-28 ಗುಂಟೆ
ಜಮೀನಿನ ಭಾಗ ಅಥವಾ ಭಾಗಗಳ ಸರಿ ಸುಮಾರು ವಿಸ್ತೀರ್ಣ	0-28 ಗುಂಟೆ
ಮೇರೆ	ನಕ್ಷೆಯಂತೆ: ಪೂರ್ವ: ಸ.ನಂ.03ರ ಜಮೀನು ಪಶ್ಚಿಮ: ರಸ್ತೆ ಉತ್ತರ: ರಸ್ತೆ ದಕ್ಷಿಣ: ಸ.ನಂ.38ರ ಉಳಿಕೆ ಜಮೀನು.
ಸಾರ್ವಜನಿಕರ ರಸ್ತೆ, ಬೀದಿ, ಗಲ್ಲಿ, ದಾರಿ ಅಥವಾ ಅದರ ಭಾಗ	0-28 ಗುಂಟೆ ಸರ್ಕಾರಿ ಕಾಣದ ಖರಾಬು ಮತ್ತು ಹದ್ದುಗಿಡದ ಓಣಿ ಅನ್ನು ಸಕ್ರಮೀಗೊಳಿಸುವ ಬಗ್ಗೆ.

ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ.

ಪಿ.ಆರ್. 411

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಭೂ ಸ್ವಾಧೀನ ಕಾಯ್ದೆಯ ಕಲಂ 17ನೇ ಪ್ರಕರಣದ ಅನ್ವಯ ಪ್ರಕರಣ 4(1)ರ ಮೇರೆಗೆ ಅಧಿಸೂಚನೆ

ಕ್ರಮಾಂಕ: **R2 LAQSR 01/2007-08**, ದಿನಾಂಕ:8ನೇ ಸೆಪ್ಟೆಂಬರ್, 2010

ಈ ಕೆಳಗಿನ ಅನುಸೂಚಿಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆ ಉಪಕಾಲುವೆಯನ್ನು ನಿರ್ಮಿಸಲು ಅಗತ್ಯವಾಗಲಿದೆ ಎಂದು ಸರ್ಕಾರಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ಅಧಿನಿಯಮ 1991ರ 33ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894 (ಕೇಂದ್ರ ಅಧಿನಿಯಮ ಸಂಖ್ಯೆ: 1894ರ 1) ರ 4ನೇ ಪ್ರಕರಣದ ಉಪಬಂಧಗಳ ಮೇರೆಗೆ ಅನುಸಾರವಾಗಿ ಮೇಲೆ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಸದರಿ ಜಮೀನುಗಳು ಅಗತ್ಯವಾಗಿದೆ ಎಂದು ಈ ಮೂಲಕ ಅಧಿಸೂಚಿಸಲಾಗಿದೆ. ಹಾಗೂ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ 4ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರಿಗೆ ಈ ಮೂಲಕ ಅಧಿಕಾರವನ್ನು ನೀಡಿರುತ್ತದೆ.

ಸದರಿ ಅಧಿನಿಯಮದ 17ನೇ ಪ್ರಕರಣದ (1) ಮತ್ತು (4)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಪ್ರಕರಣದ ತುರ್ತಿನ ದೃಷ್ಟಿಯಿಂದ ಸದರಿ ಅಧಿನಿಯಮದ 5ಎ ಪ್ರಕರಣದ ಉಪಬಂಧಗಳು, ಕೆಳಗೆ ನಿರ್ದಿಷ್ಟಪಡಿಸಲಾದ ಭೂಮಿಗಳ ಸ್ವಾಧೀನಕ್ಕೆ ಅನ್ವಯವಾಗುವುದಿಲ್ಲವೆಂದು ನಿರ್ದೇಶಿಸಿದೆ. (ಸರ್ಕಾರದ ಆದೇಶ ಸಂಖ್ಯೆ:ಕಂಇ 31 ಭೂಸ್ವಾಳ 2002 ದಿನಾಂಕ:04.06.2002)

ಸದರಿ ಭೂಮಿಗಳ ಅರ್ಜನೆಯ ಉದ್ದೇಶಕ್ಕಾಗಿ ಸದರಿ ಭೂಮಿಗಳ ಮೇಲೆ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣಿದಾರ ಅಥವಾ ಇತರ ವ್ಯಕ್ತಿಗಳಿಗೆ ಅಡ್ಡಿಯನ್ನು ಉಂಟು ಮಾಡಬಾರದೆಂದು ಅಥವಾ ಅವರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ಜಿಲ್ಲಾಧಿಕಾರಿಗಳು, ಶಿವಮೊಗ್ಗ ರವರ ಅನುಮತಿ ಇಲ್ಲದೇ ಮಾರಾಟ, ಗುತ್ತಿಗೆ ಅಡಮಾನ, ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಸದರಿ ಭೂಮಿಗಳ ವಿಲೆಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಸದರಿ ಭೂಮಿಗಳ ಅಂತಹ ಭಾಗಗಳಿಗೆ ಪರಿಹಾರವನ್ನು ನಿರ್ಧರಣೆ ಮಾಡುವ ಅಧಿಕಾರಿಯು ಸದರಿ ಅಧಿನಿಯಮದ 24ನೇ ಪ್ರಕರಣದ 7ನೇ ಖಂಡದ (ಉಪ ಪ್ರಕರಣದ) ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು. ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ ಶಿವಮೊಗ್ಗ ಇವರ ಕಾರ್ಯಾಲಯದಲ್ಲಿ ಭೂಮಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ ತಾಲ್ಲೂಕು: ಶಿವಮೊಗ್ಗ ಹೋಬಳಿ: ಹೊಳಲೂರು ಗ್ರಾಮ: ಹೊಳಲೂರು

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಭೂ ಸ್ವಾಧೀನ ಜಮೀನಿನ ವಿವರ	
					ಪೂರ್ವಕ್ಕೆ ಸ.ನಂ.	ಪಶ್ಚಿಮಕ್ಕೆ ಸ.ನಂ.	ಉತ್ತರಕ್ಕೆ ಸ.ನಂ.	ದಕ್ಷಿಣಕ್ಕೆ ಸ.ನಂ.	ವಿಸ್ತೀರ್ಣ	ಆಕಾರ
1	2	3	4	5	6	7	8	9	10	11
1.	1. ರೇವಣಪ್ಪ ಬಿನ್ ಚನ್ನಬಸಪ್ಪ ರಾಯ್ಕದ	ಸ್ವಂತ	57	ಖುಷ್ಕಿ	175, 57	209	57	57	0–05	0–13
	2. ಶ್ರೀಕಂಠ ಬಿನ್ ಚನ್ನಬಸಪ್ಪ	ಸ್ವಂತ	57	ಖುಷ್ಕಿ	175, 57	209	57	57	0–02 1/2	0–06
	3. ವೇದಾವತಿ ಕೋಂ ಶ್ರೀಕಂಠ	ಸ್ವಂತ	57	ಖುಷ್ಕಿ	175, 57	209	57	57	0–02 1/2	0–06
	4. ಹೆಚ್.ಟಿ. ಹಾಲಪ್ಪ ಬಿನ್ ಹನುಮಂತಪ್ಪ	ಸ್ವಂತ	57	ಖುಷ್ಕಿ	175, 57	209	57	57	0–10 1/2	0–26
	5. ಕಡದಕಟ್ಟೆ ಮೈಲಾರಪ್ಪ ಬಿನ್ ಕಡದಕಟ್ಟೆ ಹನುಮಂತಪ್ಪ	ಸ್ವಂತ	57	ಖುಷ್ಕಿ	175, 57	209	57	57	0–10 1/2	0–26
	6. ಹೆಚ್.ಆರ್. ದೇವೇಂದ್ರಪ್ಪ ಬಿನ್ ಗಿಡ್ಡರುದ್ರಪ್ಪ	ಸ್ವಂತ	57	ಖುಷ್ಕಿ	175, 57	209	57	57	0–01	0–03
	7. ಹೆಚ್.ಆರ್. ಹನುಮಂತಪ್ಪ ಬಿನ್ ಗಿಡ್ಡರುದ್ರಪ್ಪ	ಸ್ವಂತ	57	ಖುಷ್ಕಿ	175, 57	209	57	57	0–02	0–05

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಭೂ ಸ್ವಾಧೀನ ಜಮೀನಿನ ವಿವರ	
					ಪೂರ್ವಕ್ಕೆ ಸ.ನಂ.	ಪಶ್ಚಿಮಕ್ಕೆ ಸ.ನಂ.	ಉತ್ತರಕ್ಕೆ ಸ.ನಂ.	ದಕ್ಷಿಣಕ್ಕೆ ಸ.ನಂ.	ವಿಸ್ತೀರ್ಣ	ಆಕಾರ
1	2	3	4	5	6	7	8	9	10	11
	8. ಹೆಚ್.ಆರ್. ಪಾಲಾಕ್ಷಪ್ಪ ಬಿನ್ ಗಿಡ್ಡರುದ್ರಪ್ಪ	ಸ್ವಂತ	57	ಖುಷ್ಕಿ	175, 57	209	57	57	0–02	0–05
	9. ಹೆಚ್.ಆರ್. ಗಂಗಾಧರಪ್ಪ ಬಿನ್ ಗಿಡ್ಡರುದ್ರಪ್ಪ	ಸ್ವಂತ	57	ಖುಷ್ಕಿ	175, 57	209	57	57	0–01	0–03
	10. ಪುಷ್ಪಾ ಕೋಂ ಪ್ರಕಾಶ	ಸ್ವಂತ	57	ಖುಷ್ಕಿ	175, 57	209	57	57	0–02	0–05
2.	ಗಂಗಮ್ಮ ಕೋಂ ತಿಮ್ಮಾಬೋವಿ	ಸ್ವಂತ	174	ಖುಷ್ಕಿ	209	174	174	55	0–09	0–18
3.	ಕಡದಕಟ್ಟೆ ಮೈಲಾರಪ್ಪ ಬಿನ್ ಕಡದಕಟ್ಟೆ ಹನುಮಂತಪ್ಪ	ಸ್ವಂತ	209	ಖುಷ್ಕಿ	57	174	209	209	0–16	0–32
